ಬಸವಧರ್ಮದ ವಿಶ್ವಸಂದೇಶ

ರಂಜಾನ್ ದರ್ಗಾ



ಚಿಕ್ಕಗೌಡ್ರ ನಾಗನಗೌಡ-ಶಿವಮ್ಮ ದತ್ತಿ - ಐದನೇ ಪ್ರಕಟಣೆ

ಬಸವಧರ್ಮದ ವಿಶ್ವಸಂದೇಶ

ರಂಜಾನ್ ದರ್ಗಾ

ಲೋಹಿಯಾ ಪ್ರಕಾಶನ
ಬಳ್ಳಾರಿ

BASAVADHARMADA VISHVASANDESH
by **RAMJAN DARGA**
Chief Correspondent "Prajavani"
N.V. Complex, S.B. Temple Road
GULBARGA - 585 103
Mobile: 94484 70167

Published by
LOHIYA PRAKASHANA
'Kshitija' Kappagallu Road
Gandhi Nagar, Bellary - 583 103
Tel: 08392 - 257412

ISBN: 81-87731-90-7

ENLARGED EDITION: 2007

PAGES: 56

PRICE: Rs. 15.

COVER ART: SUDHAKARA DARBE

D.T.P.: SREEDHAR

PRINTED AT:
VISHWAS PRINTS
Chamarajpet, Bangalore.

ಬಸವಧರ್ಮದ ವಿಶ್ವಸಂದೇಶ : ರಂಜಾನ್ ದರ್ಗಾ

ನಿವೇದನೆ

ಬಹಿರಂಗದಲ್ಲಿ ಮಾನವಹಕ್ಕುಗಳ ಧರ್ಮವಾದ ಬಸವಧರ್ಮವು ಅಂತರಂಗದಲ್ಲಿ ಆತ್ಮಸ್ಥೈರ್ಯ, ಆತ್ಮಸಂಯಮ, ಆತ್ಮಗೌರವ, ಆತ್ಮಾವಲೋಕನ, ಆತ್ಮನಿವೇದನೆ, ಆತ್ಮ ವಿಮರ್ಶೆ, ಆತ್ಮಾನುಸಂಧಾನ, ಆತ್ಮಶುದ್ಧಿ, ಆತ್ಮಸಾಕ್ಷಿ, ಆತ್ಮವಿಶ್ವಾಸ, ಆತ್ಮಾನಂದ ಮತ್ತು ಆತ್ಮಸಾಕ್ಷಾತ್ಕಾರದ ಧರ್ಮವಾಗಿದೆ. ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣರಾಗಿ, ಪ್ರಧಾನಿ ಸ್ಥಾನದಲ್ಲಿದ್ದು ಕ್ಷತ್ರಿಯರಾಗಿ, ಅರ್ಥಸಚಿವರಾಗುವುದರ ಮೂಲಕ ವೈಶ್ಯರಾಗಿ, ಕೆಳಜಾತೀಕರಣ ಗೊಂಡು ಶೂದ್ರರಾಗಿ, ಮಾದಾರ ಚೆನ್ನಯ್ಯನ ಮನೆಯ ಮಗನೆಂದು ಅಸ್ಪೃಶ್ಯರಾಗಿ, "ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲಸಂಗಮದೇವ ಸಾಕ್ಷಿಯಾಗಿ" ಎಂದು ಹೇಳುತ್ತ ಅನೈತಿಕ ಸಂಬಂಧದಿಂದ ಜನಿಸಿದವರ ಧ್ವನಿಯಾಗಿ ಎಲ್ಲ ತೆರನಾದ ಅನುಭವವನ್ನು ಪಡೆದವರು. ಎಲ್ಲ ವರ್ಣಗಳ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಬಲ್ಲವರು. ಎಲ್ಲ ತೆರನಾದ ದೌರ್ಬಲ್ಯಗಳನ್ನು ದೂರಸರಿಸುತ್ತ, ಎಲ್ಲ ಸಾಮರ್ಥ್ಯಗಳನ್ನು ಒಂದುಗೂಡಿಸುತ್ತ ನವಸಮಾಜದ ನಿರ್ಮಾಣಕ್ಕೆ ಹಾತೊರೆದವರು. ಅವರ ನವಸಮಾಜ ಸರ್ವರೀತಿಯ ಸಮಾನತೆಯ ಮೇಲೆ ನಿಂತಿದೆ. ಅಲ್ಲಿ ವರ್ಗ, ವರ್ಣ, ಲಿಂಗಭೇದಗಳಿಲ್ಲ. ದಾಂಪತ್ಯದ ಸಂಬಂಧದಿಂದ ಜನಿಸಿದ ಮಕ್ಕಳು ಮತ್ತು ಅನೈತಿಕ ಸಂಬಂಧದಿಂದ ಜನಿಸಿದ ಮಕ್ಕಳಲ್ಲಿಯೂ ಭೇದವಿಲ್ಲ. ಯಾವುದೇ ಮಗು ತನ್ನ ಧರ್ಮದವರು, ಜನಾಂಗದವರು ಮತ್ತು ತಂದೆ ತಾಯಿಗಳು ಮಾಡಿದ ತಪ್ಪಿಗೆ ಹೊಣೆ ಅಲ್ಲ. ಪ್ರತಿಯೊಬ್ಬನೂ ಸ್ವತಂತ್ರ. ಕಾಯಕ, ದಾಸೋಹ, ವಸ್ತು ನಿರ್ಮೋಹ ಮತ್ತು ಸದ್ಗುಣಗಳಿಂದ ಯಾವುದೇ ವ್ಯಕ್ತಿ ಸಹಜವಾಗಿಯೆ ಜನಸಮುದಾಯಕ್ಕೆ ಮಾರ್ಗದರ್ಶಿಯಾಗಬಲ್ಲ.

ಇಂಥ ಸಕಲ ಲೋಕಾನುಭವಗಳ ಮೂಲಕ ದಿವ್ಯದರ್ಶನವನ್ನು ಪಡೆದ ಮಹಾನುಭಾವಿ ಬಸವಣ್ಣನವರು ಸರ್ವಜನಮಾನಸದಲ್ಲಿ ಅಚ್ಚಳಿಯದೆ ನಿಲ್ಲುವಂಥವರು. ಯುಗಯುಗಗಳು ಕಳೆದರೂ ಹೊಸಯುಗಕ್ಕೆ ದಿಕ್ಸೂಚಿಯಾಗಬಲ್ಲವರು. ಅವರದು ಭಾವಪೂರ್ಣ ಮತ್ತು ಪ್ರಜ್ಞಾಪೂರ್ಣ ದೃಷ್ಟಿ. ಆ ಮೂಲಕ ಅವರು ಮಾನವನ ಒಳಹೊರಗುಗಳನ್ನು ನೋಡಬಲ್ಲವರಾಗಿದ್ದರು. ಭೌತಿಕ ಮತ್ತು ಆಧ್ಯಾತ್ಮಿಕ ನೆಲೆಗಳಲ್ಲಿ ನಿಂತು ಮಾನವನನ್ನು ಸರಿಯಾಗಿ ಅಳೆಯಬಲ್ಲವರಾಗಿದ್ದರು. ಭೌತಿಕವಾದಿಗಳು ಮಾನವನ ಆಧ್ಯಾತ್ಮಿಕ ಹಸಿವನ್ನು ಮರೆತರು. ಅಧ್ಯಾತ್ಮವಾದಿಗಳು ಮಾನವನ ಐಹಿಕ ಅವಶ್ಯಕತೆಗಳನ್ನು ಮರೆತರು. ಈ

ಎರಡೂ ರೀತಿಯ ಚಿಂತಕರು ಮಾನವನನ್ನು ಸಂಪೂರ್ಣವಾಗಿ ಅರಿತುಕೊಳ್ಳಲು ಸೋತರು. ಭೌತಿಕವಾದಿಗೆ ವಸ್ತು ಮಾತ್ರ ಕಂಡರೆ, ಅಧ್ಯಾತ್ಮವಾದಿಗೆ ಚೈತನ್ಯ ಮಾತ್ರ ಕಂಡಿತು. ಚೈತನ್ಯವು ನಿರಾಕಾರ ರೂಪದಲ್ಲಿದ್ದರೆ ವಸ್ತು ಆಕಾರರೂಪದಲ್ಲಿರುತ್ತದೆ. "ನೀನು ನಿರಾಕಾರ ಸಾಕಾರವೆಂಬೆರಡು ಮೂರ್ತಿಯ ಧರಿಸಿಪ್ಪೆಯಾಗಿ, ಒಂದ ಜರೆದು ಒಂದು ಹಿಡಿದಿಹೆನೆಂದಡೆ ಅದೆ ಕೊರತೆ ನೋಡಾ, ಪ್ರಭುವೆ ಕೂಡಲಸಂಗಮದೇವಾ" ಎಂದು ಬಸವಣ್ಣನವರು ವಸ್ತು ಮತ್ತು ಚೈತನ್ಯದಲ್ಲಿ ಅಭೇದ್ಯವನ್ನು ಕಲ್ಪಿಸಿದರು. ದೇವರು ವಸ್ತುರೂಪದಲ್ಲಿಯೂ ಚೈತನ್ಯ ರೂಪದಲ್ಲಿಯೂ ಇರುವುದರಿಂದ ವಸ್ತು ಮತ್ತು ಚೈತನ್ಯ ಮೂಲದಲ್ಲಿ ಒಂದೇ ಆಗಿವೆ. ಅವು ಪ್ರತ್ಯೇಕವಾಗಿ ಇರಲಾರವು ಎಂದು ಬಸವಣ್ಣನವರು ಸಾರಿದ್ದಾರೆ. ಹೊರಲೋಕದ ಅನುಭವ ಮತ್ತು ಒಳಲೋಕದ ಅನುಭಾವದ ಮಹತ್ವವನ್ನು ತಿಳಿಸಿದ್ದಾರೆ. ಒಳಹೊರಗುಗಳನ್ನು ಒಂದಾಗಿಸಿದ್ದಾರೆ. ಇದೆ ಬಸವಾದ್ವೈತ. ಸರ್ವಸಮಾನತೆಯನ್ನು ಸಾಧಿಸುವ ತತ್ತ್ವವಿದು.

"ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ."

ಎಂದು ಬಸವಣ್ಣನವರು ಹೇಳಿದ್ದಾರೆ. ಸಮಾನತೆಯ ಸಂಕೇತವಾದ ಭಕ್ತಿಯೆಂಬ ಭೂಮಿಯಲ್ಲಿ ಅರಿವಿನ ಸಂಕೇತವಾದ ಗುರುವೆಂಬ ಬೀಜವು ಮೊಳಕೆಯೊಡೆದು ಬೆಳೆದಾಗ ಇಹಪರಗಳನ್ನು ಬೆಸೆಯುವ ಲಿಂಗವೆಂಬ ಎಲೆಯಾಗುವುದು. ಭೂಮಿ ಮತ್ತು ಆಕಾಶದ ಸತ್ತ್ವಗಳೊಂದಿಗೆ ಎಲೆಯು ನಿರಂತರ ಸಂಬಂಧವನ್ನಿಟ್ಟುಕೊಂಡ ಕಾರಣ ವಿಚಾರವೆಂಬ ಹೂವನ್ನು ಪಡೆಯಲು ಸಾಧ್ಯವಾಯಿತು. ಆ ವಿಚಾರವು ಕೃತಿಗಿಳಿದು ಆಚಾರವೆಂಬ ಕಾಯಿಯಾಯಿತು. ಅದು ಪರಿಪೂರ್ಣವಾಗಿ, ನಿಷ್ಪತ್ತಿಯೆಂಬ ಹಣ್ಣಾದಾಗ ಪರಿಪೂರ್ಣವಾಗಿರುವಂಥದ್ದರ ಜೊತೆ ಗೂಡಿತು.

ಮಾನವ ಶರಣನಾಗಬೇಕಾದರೆ ಈ ಭೂಮಿಯಲ್ಲಿ ಅರಿವು ಆಚಾರಗಳೊಂದಿಗೆ ಬದುಕುತ್ತ ಪರಿಪೂರ್ಣತೆಯೆಡೆಗೆ ಸಾಗಬೇಕು. ಇಂಥ ಒಬ್ಬ ಶರಣ ಸಮಗಾರ ಹರಳಯ್ಯನವರು ಶರಣು ಎಂದು ಬಸವಣ್ಣನವರಿಗೆ ಹೇಳಿದಾಗ ಕಲ್ಯಾಣದ ಪ್ರಧಾನಿ ಬಸವಣ್ಣನವರು ಮುಗಿದ ಕೈ ಮತ್ತು ಬಾಗಿದ ಶಿರದೊಂದಿಗೆ ಶರಣು ಶರಣಾರ್ಥಿ ಎಂದು ಹೇಳಿದರು. ಎರಡು ಬಾರಿ ಶರಣು ಎಂದುದನ್ನು ಕೇಳಿದ ಹರಳಯ್ಯನವರು ಭಾವಪರವಶರಾದರು. ತಮ್ಮ ಮತ್ತು ಪತ್ನಿ ಕಲ್ಯಾಣಮ್ಮನವರ ತೊಡೆಯ ಚರ್ಮ ಸೇರಿಸಿ ತಯಾರಿಸಿದ ಚಮ್ಮಾವುಗೆಗಳನ್ನು ಭಕ್ತಿಯಿಂದ

ಬಸವಣ್ಣನವರಿಗೆ ತೊಡಲು ಕೊಟ್ಟರು. ಕೂಡಲಸಂಗಮದೇವರಿಗೆ ಸಲ್ಲುವ ಪಾದರಕ್ಷೆಗಳಿವು ಎಂದು ಬಸವಣ್ಣನವರು ಅವುಗಳನ್ನು ತಲೆಯ ಮೇಲಿಟ್ಟುಕೊಂಡರು!

"ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು;
ಸರಿಯಲ್ಲ ನೋಡಾ
ಕೂಡಲಸಂಗಮದೇವಾ
ನಿಮ್ಮ ಶರಣರ ಚಮ್ಮಾವುಗೆಗೆ."

ಎಂದು ಬಸವಣ್ಣನವರು ಹೇಳಿದ್ದಾರೆ. ಯಾವುದೇ ಪದವಿಗಳಿಂದ ಮಾನವನು ದೊಡ್ಡವನಾಗುವುದಿಲ್ಲ. ಅಹಂಕಾರವನ್ನು ತೊರೆದಷ್ಟೂ ದೊಡ್ಡವನಾಗುತ್ತ ಹೋಗುವನು. ಹರಳಯ್ಯನವರು ತಯಾರಿಸಿದ ಚಮ್ಮಾವುಗೆಯಲ್ಲಿ ಭಕ್ತಿಭಾವವೇ ತುಂಬಿಕೊಂಡಿದೆ. ಅಂತೆಯೇ ಬಸವಣ್ಣನವರ ಕಾಲ ಕೆಳಗೆ ಇರಬೇಕಾದ ಪಾದರಕ್ಷೆಗಳು ದೇವರ ಪಾದರಕ್ಷೆಗಳಾಗಿ ಬಸವಣ್ಣನವರ ಶಿರದ ಮೇಲೆ ಕುಳಿತವು. ಹೀಗೆ ಬಸವಣ್ಣನವರು ಲೋಕಕ್ಕೆ ಪಾಠ ಕಲಿಸಿದ್ದಾರೆ. ಮಾದಾರ ಚೆನ್ನಯ್ಯನವರಂಥ ಶರಣರನ್ನು "ನಿಮ್ಮಿಂದಧಿಕ ನೋಡಾ ಕೂಡಲಸಂಗಮದೇವಾ" ಎಂದು ಕೂಗಿ ಹೇಳಿದ್ದಾರೆ. ಹೀಗೆ ಅವರು ಕೆಳಜಾತಿಗಳವರಲ್ಲಿ ಆತ್ಮಸ್ಥೈರ್ಯ ತುಂಬುತ್ತ ಸವರ್ಣೀಯರ ಕಣ್ಣು ತೆರೆಸಿದರು. ವೈದಿಕರ ದೇವರುಗಳು ಮತ್ತು ಕೆಳಜಾತಿಯವರ ದೇವರುಗಳ ಸ್ಥಾನದಲ್ಲಿ ಅಗಮ್ಯ ಅಗೋಚರ ಮತ್ತು ಅಪ್ರತಿಮವಾದ ದೇವರದರ್ಶನ ಮಾಡಿಸಿದರು. ಇಂಥ ದೇವರ ಹೆಸರಿನಲ್ಲಿ ಸರ್ವಸಮಾನತೆಯ ಸಮಾಜ ನಿರ್ಮಿಸಿದನು.

ಬಸವಣ್ಣನವರನ್ನು ಗೌರವಿಸುವುದೆಂದರೆ ಮಾನವಕೋಟಿಯ ಸದಾಶಯಗಳನ್ನು ಗೌರವಿಸುವುದು. ಭೇದಭಾವ ಮತ್ತು ಬಡತನದಿಂದ ಬಳಲುತ್ತಿರುವವರ ಪಕ್ಷಪಾತಿಯಾಗುವುದು. ಮಾನವಘನತೆಯನ್ನು ಎತ್ತಿಹಿಡಿಯುವುದು. ಈ ಪೃಥ್ವಿ ಸಕಲಜೀವರಾಶಿಗಳ ಮಹಾಮನೆಯಾಗಿರುವಂತೆ ನೋಡಿಕೊಳ್ಳುವುದು. ಕಾಯಕದಿಂದ ಬರುವ ಅನುಭವ ಮತ್ತು ತನ್ನಂತೆ ಪರರ ಬಗೆಯುವ ದಾಸೋಹದಿಂದ ಬರುವ ಅನುಭಾವದೊಂದಿಗೆ ಸಮಾಧಾನದಿಂದ ಬದುಕುವುದು.

ಬಸವಣ್ಣನವರು ಬಡವರನ್ನು ಶ್ರೀಮಂತಗೊಳಿಸುವ ಬಗ್ಗೆ ಮಾತನಾಡಲಿಲ್ಲ. ಶ್ರೀಮಂತರನ್ನು ಬಡವರನ್ನಾಗಿಸಿ ಬಡತನವನ್ನು ಶ್ರೀಮಂತಗೊಳಿಸುವ ಕುರಿತು ಅವರು ಚಿಂತನೆ ಮಾಡಿದರು. ತಾವು ಸಂಪತ್ತಿನ ಗುಲಾಮರು ಎಂಬ ಪ್ರಜ್ಞೆ ಬಂದೊಡನೆ ಶ್ರೀಮಂತರು ಎಲ್ಲವನ್ನೂ ಜನಸಮುದಾಯಕ್ಕೆ ಕೊಡಲು ಸಿದ್ಧರಾಗುವರು; ಉತ್ತಮ ಕುಲದಲ್ಲಿ ಜನಿಸಿದ್ದು ಮತ್ತು ಸಂಪತ್ತನ್ನು ಹೊಂದಿದ್ದು ಅವರಿಗೆ ಕಸಿವಿಸಿ ಉಂಟುಮಾಡುವುದು. ಅವರ ಕೆಳಜಾತೀಕರಣಕ್ಕೆ ಮತ್ತು ಕೆಳವರ್ಗೀಕರಣಕ್ಕೆ ಒಳಗಾಗುವರು. ಶರಣರಾಗುವರು. ಬಡತನವು ಶ್ರೀಮಂತವಾದಾಗ ನಮ್ಮ ನದಿಗಳು ಕಲುಷಿತಗೊಳ್ಳುವುದಿಲ್ಲ, ಅರಣ್ಯಗಳು ನಾಶವಾಗುವುದಿಲ್ಲ. ಯಾವುದೇ ವಸ್ತುವಿನ ದುರುಪಯೋಗವಾಗುವುದಿಲ್ಲ. ಅಹಂಕಾರವು ಸರ್ವನಾಶವಾಗಿ

ಯುದ್ಧಗಳು, ಕೋಮುಗಲಭೆಗಳು, ಭಯೋತ್ಪಾದನೆ ಮತ್ತು ಜಾತಿಸಂಘರ್ಷ ಗಳಿರುವುದಿಲ್ಲ. ಕಸಗುಡಿಸುವ ಕಾಯಕದ ಶರಣೆ ಸತ್ಯಕ್ಕ "ಬಟ್ಟೆಯಲ್ಲಿ ಹೊನ್ನುವಸ್ತ್ರ ಬಿದ್ದಿದ್ದಡೆ ಕೈಮುಟ್ಟಿ ಎತ್ತಿದೆನಾದಡೆ ಅಯ್ಯಾ ನಿಮ್ಮಾಣೆ" ಎಂದು ಹೇಳುತ್ತಾಳೆ. ಅವಳಿಗೆ ಕಾಯಕ ಮುಖ್ಯ; ದಾರಿಯಲ್ಲಿ ಬಿದ್ದ ಹೊನ್ನು, ವಸ್ತ್ರ ಮತ್ತು ಕಸ ಒಂದೇ! "ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ, ಈಸಕ್ಕಿ ಆಸೆ ನಿಮಗೇಕೆ" ಎಂದು ಹೆಚ್ಚಿನ ಅಕ್ಕಿಯನ್ನು ತಂದ ಪತಿ ಆಯ್ದಕ್ಕಿ ಮಾರಯ್ಯನವರನ್ನು ಆಯ್ದಕ್ಕಿ ಲಕ್ಕಮ್ಮ ಪ್ರಶ್ನಿಸುತ್ತಾಳೆ. ಕಾಶ್ಮೀರದ ದೊರೆ ಮಹಾದೇವ ಭೂಪಾಲ ಎಲ್ಲ ತ್ಯಜಿಸಿ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುತ್ತ ಮೋಳಿಗೆಯ ಮಾರಯ್ಯನವರಾಗಿ ಜೀವನದರ್ಶನ ಪಡೆದರು. "ಆನೆ, ಕುದುರೆ, ಬಂಡಿ, ಭಂಡಾರವಿರ್ದಡೇನೊ, ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಕುಡಿಯುವುದೊರತೆ ನೀರು, ಮಲಗುವುದರ್ಧ ಮಂಚ, ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ" ಎಂದು ಹೇಳಿದರು. ಹೀಗೆ ಶರಣಸಂಕುಲ ಬಡತನವನ್ನು ಶ್ರೀಮಂತಗೊಳಿಸಿತು.

"ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ" ಎಂದು ಹಡಪದ ಲಿಂಗಮ್ಮನವರು ಹೇಳುತ್ತಾರೆ. "ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ" ಎಂದು ಬಸವಣ್ಣನವರು ಕೂಡಲಸಂಗಮದೇವರಲ್ಲಿ ಬೇಡಿಕೊಳ್ಳುತ್ತಾರೆ. ಹೀಗೆ ಕೆಳಜಾತಿ ಕೆಳವರ್ಗದವರಲ್ಲಿ ಆತ್ಮವಿಶ್ವಾಸ ಮೂಡಿದಾಗ ಮತ್ತು ಮೇಲ್ಜಾತಿ ಮೇಲ್ವರ್ಗದವರಲ್ಲಿ ಆತ್ಮವಿಮರ್ಶೆ ನಡೆದಾಗ ಸರಳತೆಯಲ್ಲಿ ಸುಖಕಾಣುವ ಬಸವಸಮಾಜದ ನಿರ್ಮಾಣ ವಾಗುವುದು.

ವಿಶ್ವದಲ್ಲಿ ಕಣ್ಣಿಗೆ ಕಾಣುವುದೆಲ್ಲ ಬಯಲಿನಲ್ಲೇ ಸೃಷ್ಟಿಯಾಗಿದೆ. ಕೊನೆಗೊಂದು ದಿನ ಇದು ಬಯಲಲ್ಲೇ ಬಯಲಾಗುವುದು.

> "ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ,
> ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ
> ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ,
> ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ,
> ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ,
> ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ,
> ಮೆಲ್ಲಮೆಲ್ಲನೆ ಷಟ್‌ಸ್ಥಲವ ಮೀರಿ ನಿರವಯಸ್ಥಲವನೆಯ್ದುವೆನಯ್ಯಾ
> ಕೂಡಲಸಂಗಮದೇವಾ."

ಬಸವಣ್ಣನವರು ನಿರವಯಸ್ಥಲವನ್ನು ಸಪ್ತಸ್ಥಲವಾಗಿ ಕಾಣಿಸಿದ್ದಾರೆ. ಹೀಗೆ ಬಯಲಾಗುವುದನ್ನು ಅರಿಯುವುದು ಮತ್ತು ಅನುಭವಿಸುವುದು ಅನುಭಾವ.

"The most beautiful and most profound emotion we can experience is the sensation of the mystical. It is the sower of all true art and science" ಎಂದು ಮಹಾವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರು ಹೇಳಿದ್ದಾರೆ.

ಬಯಲಲ್ಲಿ ಸೃಷ್ಟಿಯಾದುದೆಲ್ಲವೂ ಒಂದಕ್ಕೊಂದು ಸಂಬಂಧಿಸಿದುದು. ಪ್ರತಿಯೊಂದರ ಗುಣ ಮತ್ತು ರೂಪ ಬೇರೆಬೇರೆಯಾಗಿರುವುದು ವಾಸ್ತವ. ಆದರೆ ಮೂಲದಲ್ಲಿ ಒಂದೇ ಆಗಿರುವುದು ಸತ್ಯ. ಈ ವಾಸ್ತವ ಮತ್ತು ಸತ್ಯದ ಆಧಾರದ ಮೇಲೆ ಬಸವಧರ್ಮ ನಿಂತಿರುವ ಕಾರಣ ಬಸವಧರ್ಮದ ಸಂದೇಶಗಳು ವಿಶ್ವಸಂದೇಶಗಳಾಗಿವೆ.

'ಬ್ರಹ್ಮಸತ್ಯಂ ಜಗನ್ಮಿಥ್ಯಾ' ಎಂದು ಶಂಕರಾಚಾರ್ಯರು ಹೇಳುತ್ತಾರೆ. ಬ್ರಹ್ಮ ಸತ್ಯ ಆದರೆ ಜಗತ್ತು ಮಿಥ್ಯ (ಸುಳ್ಳು) ಅಲ್ಲ, ವಾಸ್ತವ. ವಾಸ್ತವ ನಮ್ಮ ಕಾಲದ ಸತ್ಯವಾಗಿರುತ್ತದೆ. ಸತ್ಯ ಎಂಬುದು ವಾಸ್ತವದ ಅಂತಿಮ ರೂಪ. ಬದುಕು ವಾಸ್ತವ. ಬಯಲು ಸತ್ಯ. ಬಯಲಾಗುವವರೆಗೆ ಇರುವ ಬದುಕಿನ ಕಾಳಜಿ ಬಸವಧರ್ಮದ ವಿಶ್ವಸಂದೇಶದಲ್ಲಿ ಅಡಗಿದೆ. ಆದ್ದರಿಂದ ಬಸವಧರ್ಮವು ಬರೀ ಬಯಲು ಧರ್ಮವಾಗದೆ ಭೂಮಿಯ ಧರ್ಮವಾಗಿದೆ. ಈ ಭೂಮಿಯ ಬಗ್ಗೆ, ಇದರೊಳಗಿನ ಜೀವರಾಶಿ ಸಮೇತ ಮಾನವನ ಬಗ್ಗೆ ಕಾಳಜಿ ತೋರುವ ಧರ್ಮವಾಗಿದೆ. ಸತ್ಯದ ನಿಲವಿನೊಂದಿಗೆ ವಾಸ್ತವದ ಅರಿವನ್ನೂ ಕೊಡುವ ಧರ್ಮವಾಗಿದೆ. ಸತ್ಯದ ಬೆಳಕಿನಲ್ಲಿ ವಾಸ್ತವವೆಂಬುದು ಮೇಲು ಕೀಳುಗಳಿಲ್ಲದ ಆನಂದಮಯವಾದ ವಾತಾವರಣವನ್ನು ಸೃಷ್ಟಿಸುವಂತಾಗಬೇಕು. ಜಗತ್ತಿನ ಜನಸಮುದಾಯಗಳು ದಯಾಗುಣವನ್ನು ಬೆಳೆಸಿಕೊಂಡು, ನಿಸ್ವಾರ್ಥ ಮತ್ತು ನಿರಹಂಕಾರದ ಮನೋಭಾವದೊಂದಿಗೆ, ಕಾಯಕ ದಾಸೋಹದ ಮೂಲಕ ವಾಸ್ತವವನ್ನು ಆನಂದಮಯವಾಗಿಸಬೇಕೆಂಬುದೇ ಬಸವಧರ್ಮದ ವಿಶ್ವಸಂದೇಶವಾಗಿದೆ.

ಬಸವಧರ್ಮವು ಯುಗಧರ್ಮದ ಕರೆಗೆ ಓಗೊಡುವ ಮಾನವಧರ್ಮವಾಗಿದೆ. ರಕ್ತರಹಿತ ಕ್ರಾಂತಿಯನ್ನು ಹೇಗೆ ಮಾಡಬೇಕು ಎಂಬುದನ್ನು ಬಸವಣ್ಣನವರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಬಿಜ್ಜಳನ ಪ್ರಧಾನಿಯಾಗಿದ್ದ ಬಸವಣ್ಣನವರು ಧರ್ಮ ಮತ್ತು ರಾಜಕಾರಣವನ್ನು ಎಂದೂ ಬೆರೆಸಲಿಲ್ಲ. ಆದರೆ ತತ್ತ್ವವೆಂಬುದು ಧರ್ಮ, ಸಮಾಜ ಮತ್ತು ರಾಜಕಾರಣಕ್ಕೆ ಮೂಲಾಧಾರವಾಗಿರುತ್ತದೆ ಎಂಬುದನ್ನು ಸೂಚಿಸಿದರು. ಹೀಗೆ ಬಸವಧರ್ಮವು ವಿಶ್ವಧರ್ಮವಾಗಿ ಬೆಳೆದಾಗ ಜಗತ್ತಿನ ಬಹುಪಾಲು ಸಮಸ್ಯೆಗಳು ಬಗೆಹರಿಯುವುದರಲ್ಲಿ ಸಂಶಯವಿಲ್ಲ.

"ಬಸವ ಪೀಠವು ಎದ್ದು । ಒಸೆದು ನಾಣ್ಯವು ಹುಟ್ಟಿ।
ಬಸವನ ಮುದ್ರೆ ಮೆರೆದಾವು । ವಸುಧೆಯವಗೆ ।
ವಶವಾಗದಿಹುದೆ ಸರ್ವಜ್ಞ!"

ಒಂದಿಲ್ಲೊಂದು ದಿನ ಈ ಭೂಮಿಯ ಮೇಲೆ ಬಸವರಾಜ್ಯದ ಉದಯವಾಗುವುದು ಎಂದು ಸರ್ವಜ್ಞ ಭವಿಷ್ಯ ನುಡಿದಿದ್ದಾನೆ. ಈ ತ್ರಿಪದಿಯಲ್ಲಿ ಬಳಕೆಯಾದ ಪೀಠ, ನಾಣ್ಯ,

ಮುದ್ರೆ, ವಸುಧೆ ಮತ್ತು ವಶ ಶಬ್ದಗಳು ರಾಜ್ಯಶಕ್ತಿಯ ಪ್ರತೀಕವಾಗಿವೆ. ಬಸವಣ್ಣನವರ ತತ್ತ್ವಗಳು ಎಲ್ಲೆಡೆ ಕಾಣಿಸಿಕೊಳ್ಳುವವು. ಅವೆಲ್ಲ ಜೀವನ ಪ್ರೀತಿಗಾಗಿ ಚಲಾವಣೆಯಲ್ಲಿ ಬರುವವು. ಆಗ ವಿಶ್ವದಲ್ಲೆಲ್ಲ ಬಸವನ ಛಾಪು ಎದ್ದು ಕಾಣುವುದು. ಹೀಗೆ ಈ ಭೂಮಿಯು ಬಸವಣ್ಣನ ವಶವಾಗುವುದು. ಇಂಥ ಒಂದು ದಿನಕ್ಕಾಗಿ ನಾವೆಲ್ಲ ಹಾತೊರೆಯೋಣ.

ಈ ಕೃತಿಯ ಡಿ.ಟಿ.ಪಿ. ಮಾಡಿದ ಆರ್. ಎಸ್. ಶ್ರೀಧರ್ ದಂಪತಿಗಳಿಗೆ, ಮುಖಪುಟ ವಿನ್ಯಾಸ ಮಾಡಿದ ಸುಧಾಕರ ದರ್ಬೆ ಅವರಿಗೆ, ಪುಸ್ತಕವನ್ನು ಅಂದವಾಗಿ ಮುದ್ರಿಸಿದ ವಿಶ್ವಾಸ್ ಪ್ರಿಂಟ್ಸ್‌ನ ಮಾಲಿಕರು ಮತ್ತು ಕಾರ್ಮಿಕ ಮಿತ್ರರಿಗೆ ಹಾಗೂ ಪುಸ್ತಕ ಪ್ರಕಾಶಕರಾದ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಗುಲಬರ್ಗಾ ರಂಜಾನ್ ದರ್ಗಾ

ಪ್ರಕಾಶಕರ ಮಾತು

೨೦೦೨ರಲ್ಲಿ ನಮ್ಮ ತಾಯಿಯವರು ನಿಧನರಾದಾಗ, ನಮ್ಮ ತಂದೆ-ತಾಯಿಯವರ ಹೆಸರಿನಲ್ಲಿ ದತ್ತಿಯೊಂದನ್ನು ಸ್ಥಾಪಿಸಿ, ಆ ದತ್ತಿಯ ನೆರವಿನಿಂದ ಲೋಹಿಯಾ ಪ್ರಕಾಶನದಿಂದ ಪ್ರತಿ ವರ್ಷವೂ ಒಂದು ಕೃತಿಯನ್ನು ಪ್ರಕಟಿಸುವುದೆಂದು ನಿರ್ಧರಿಸಿದೆವು. ಆ ಕೃತಿಯು ಕಾಯಕ ಜೀವಿಗಳಾಗಿದ್ದ ನಮ್ಮ ತಂದೆ ತಾಯಿಯವರು ಪ್ರತಿಪಾದಿಸುತ್ತಿದ್ದ ವಿಷಯವೇ ಆಗಿದ್ದರೆ ಒಳ್ಳೆಯದೆಂದು ಯೋಚಿಸಿ, ಪ್ರಥಮವಾಗಿ ಸೋದರ ರಂಜಾನ್ ದರ್ಗಾ ಅವರ 'ಬಸವ ಪ್ರಜ್ಞೆ' ಪ್ರಕಟಿಸಿದೆವು.

ಈಗ ಪ್ರಕಟಿಸುತ್ತಿರುವ 'ಬಸವಧರ್ಮದ ವಿಶ್ವಸಂದೇಶ' ಕೃತಿಯು ದತ್ತಿಯ ಐದನೇ ಪ್ರಕಟಣೆ. ರಂಜಾನ್ ದರ್ಗಾ ಅವರ ನಾಲ್ಕನೆಯ ಕೃತಿ. ಈ ಹಿಂದೆ ಪ್ರಕಟಿಸಿದ ಅವರ ಮೂರೂ ಕೃತಿಗಳ ಸಾವಿರಾರು ಪ್ರತಿಗಳು ಕನ್ನಡಿಗರ ಮನೆ-ಮನಗಳನ್ನು ತಲುಪಿವೆ.

ಸೋದರ ದರ್ಗಾ ಅವರು ಇತ್ತೀಚಿನ ದಿನಗಳಲ್ಲಿ ಬಸವತತ್ತ್ವಕ್ಕೆ ಒಂದು ಹೊಸ ಭಾಷ್ಯವನ್ನೇ ಬರೆಯುತ್ತಿದ್ದಾರೆ. ಈ ಹಿಂದೆ ಅವರ ಕೃತಿಗಳನ್ನು ಮೆಚ್ಚಿ ಸ್ವಾಗತಿಸಿದ ಕನ್ನಡಿಗರು ಅವರ ಈ ನಾಲ್ಕನೆಯ ಕೃತಿಯನ್ನು ಮೆಚ್ಚುತ್ತಾರೆಂಬ ನಂಬಿಕೆ ನಮ್ಮದು.

ಅತ್ಯಂತ ಅರ್ಥಪೂರ್ಣವಾಗಿ, ಸರಳವಾಗಿ, ಸಾಮಾನ್ಯರಿಗೂ ಅರ್ಥವಾಗುವಂತೆ ಈ ಕೃತಿಯನ್ನು ರಚಿಸಿಕೊಟ್ಟ ಶ್ರೀ ರಂಜಾನ್ ದರ್ಗಾ ಅವರಿಗೆ ದತ್ತಿಯ ಪರವಾಗಿ, ಪ್ರಕಾಶನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಈ ಕೃತಿಗೆ ಅರ್ಥಪೂರ್ಣವಾದ ಮುಖಪುಟವನ್ನು ವಿನ್ಯಾಸ ಮಾಡಿಕೊಟ್ಟ ಕಲಾವಿದರಾದ ಸುಧಾಕರ ದರ್ಬೆ — ಅಚ್ಚುಕಟ್ಟಾಗಿ ಅಕ್ಷರಜೋಡಣೆ ಮಾಡಿದ ಶ್ರೀಧರ್ ದಂಪತಿಗಳಿಗೆ — ಸುಂದರವಾಗಿ ಮುದ್ರಿಸಿರುವ ವಿಶ್ವಾಸ್ ಪ್ರಿಂಟ್ಸ್ ಸಿಬ್ಬಂದಿವರ್ಗದವರಿಗೆ ಹಾಗೂ ಕೊಂಡು ಓದಿ ಬೆಂಬಲಿಸುತ್ತಿರುವ ಕನ್ನಡದ ಓದುಗರಿಗೆ ಪ್ರಕಾಶನ ಕೃತಜ್ಞವಾಗಿದೆ.

ಸಿ. ಚನ್ನಬಸವಣ್ಣ
ಪ್ರಕಾಶನದ ಪರವಾಗಿ

ಪರಿವಿಡಿ

ಬಸವಧರ್ಮ

"ನೋಟದ ಭಕ್ತಿ ಬಸವಣ್ಣನಿಂದಾಯ್ತು,
ಕೂಟದ ಜ್ಞಾನ ಬಸವಣ್ಣನಿಂದಾಯ್ತು ಕಾಣಾ.
ಎಲ್ಲಿಯ ಶಿವಜ್ಞಾನ ಎಲ್ಲಿಯ ಮಾಟ ಕೂಟ ಬಸವನಲ್ಲದೆ
ಮಹಾಜ್ಞಾನ ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ.

ಎಂದು ಶಿವಶರಣ ಸಿದ್ಧರಾಮ ಮನದುಂಬಿ ಹೇಳಿದ್ದಾರೆ. ವಚನಕಾರರು ಬಸವಣ್ಣನವರ ಮಾರ್ಗದರ್ಶನದಲ್ಲಿ ಹೊಸ ಸಮಾಜವೊಂದರ ಹರಿಕಾರರಾದರು. ಈ ಹೊಸ ಸಮಾಜಕ್ಕೆ ಅವಶ್ಯವಿದ್ದ ವೈಚಾರಿಕತೆ, ಆತ್ಮಶೋಧನೆ, ಸಾಮಾಜಿಕ ವ್ಯಕ್ತಿತ್ವ, ನೈತಿಕಮೌಲ್ಯ, ಆರ್ಥಿಕ ವ್ಯವಸ್ಥೆ ಮಾನವ ಸಂಪನ್ಮೂಲಗಳ ಸದ್ಬಳಕೆ, ಸಾಮಾಜಿಕ ಜವಾಬ್ದಾರಿ ಮತ್ತು ಸರಳ ಸಹಜ ಹಾಗೂ ಸುಂದರವಾದ ಬದುಕಿಗೆ ಕಂಟಕಪ್ರಾಯವಾದ ಹಳೆಯ ಮೌಲ್ಯಗಳ ಟೊಳ್ಳುತನವನ್ನು ಎತ್ತಿತೋರಿಸುವುದು, ಹಳೆಯ ದೇವರುಗಳನ್ನು ತಿರಸ್ಕರಿಸಿ ಹೊಸ ದೇವರನ್ನು ಸೃಷ್ಟಿಸುವ ಮೂಲಕ ಮಾನವನನ್ನು ಎಲ್ಲ ರೀತಿಯ ಧಾರ್ಮಿಕ ಬಂಧನಗಳಿಂದ ಮುಕ್ತಗೊಳಿಸಿ ಸರ್ವ ಸಮಾನತೆಯನ್ನೇ ಮೈದಾಳಿದಂಥ ಹೊಸ ಮಾನವನನ್ನು ಸೃಷ್ಟಿಸುವುದು ೧೨ನೇ ಶತಮಾನದ ಶರಣರ ಪರಮಗುರಿಯಾಗಿತ್ತು. ಜನರ ಭಾಷೆಯನ್ನು ಧರ್ಮಭಾಷೆಯಾಗಿಸಿ, ಬಸವಣ್ಣನವರ ಉದಾತ್ತ ಚಿಂತನೆಗಳನ್ನು ಧರ್ಮವಾಗಿಸಿ ಶರಣರು ಹೊಸ ಮಾನವೀಯ ವ್ಯವಸ್ಥೆಯನ್ನು ಸೃಷ್ಟಿಸಿ ಲೋಕಕ್ಕೇ ಆದರ್ಶಪ್ರಾಯವಾದರು.

ಈ ಗುರಿ ಸಾಧನೆಗಾಗಿ ಶರಣರು ವಚನ ಚಳವಳಿ ಆರಂಭಿಸಿದರು. ೧೨ನೆಯ ಶತಮಾನದಲ್ಲಿ ವಿಶ್ವದ ಯಾವುದೇ ಮೂಲೆಯಲ್ಲಿ ಕಂಡುಬರದ ಈ ಚಳವಳಿ ಕನ್ನಡದ ನೆಲದಲ್ಲಿ ರೂಪುತಾಳಿದ್ದು ಕನ್ನಡಿಗರ ಸುದೈವವಾಗಿದೆ.

"ಎನ್ನ ತನು ಮನ ಪ್ರಾಣಂಗಳು
ಶುದ್ಧವಾದವು ಬಸವಣ್ಣಾ ನಿಮ್ಮ ಧರ್ಮದಿಂದ.
ಇಂತಿವೆಲ್ಲವೂ ಶುದ್ಧವಾದವು ಕಲಿದೇವಾ
ನಿಮ್ಮ ಶರಣ ಸಂಗನಬಸವಣ್ಣಾ ಧರ್ಮದಿಂದ"

ಎಂದು ಶರಣ ಮಡಿವಾಳ ಮಾಚಿದೇವರು ಬಸವಧರ್ಮದ ಪರಿಶುದ್ಧತೆಯನ್ನು ಸಾರಿದರು.

ಶರಣರ ಕಾಯಕ ಮಡಿವಾಳರ ಕಾಯಕ ಎಂದು ಬಸವಣ್ಣನವರು ಹೇಳಿದ್ದಾರೆ. ಜಗತ್ತನ್ನು ಶುದ್ಧಗೊಳಿಸುವುದೇ ಬಸವಧರ್ಮದ ಮೂಲ ಗುರಿಯಾಗಿದೆ. ಬಸವತತ್ತ್ವದ ಪ್ರಕಾರ ಜಗತ್ತು ಶುದ್ಧಗೊಂಡಾಗ ಎಲ್ಲ ಜೀವಗಳು ಎಲ್ಲರೊಡನೆ ಒಂದಾಗಿ ಜವಾಬ್ದಾರಿಯುತವಾದ ಸ್ವತಂತ್ರ ಬದುಕಿನ ಆನಂದವನ್ನು ಅನುಭವಿಸುತ್ತವೆ.

೧೨ನೇ ಶತಮಾನದ ಸಮಾಜ ಎಲ್ಲ ರೀತಿಯ ಸಮಸ್ಯೆಗಳಿಂದ ನರಳುತ್ತಿತ್ತು. ಅನ್ನದ ಋಣವು ಜೋಳವಾಳಿ ಎಂಬ ಬಹುದೊಡ್ಡ ಮೌಲ್ಯವಾಗಿತ್ತು. ಸಮಾಜದಲ್ಲಿ ಬಹುಜನರಾಗಿದ್ದ ಅಸ್ಪೃಶ್ಯರು, ವಿವಿಧ ಕಾಯಕ ಮಾಡುವ ಹಿಂದುಳಿದವರು ಮತ್ತು ರೈತಾಪಿ ಜನ ಬದುಕಿಗೆ ಬೇಕಾದ ಎಲ್ಲವನ್ನು ಉತ್ಪಾದಿಸುತ್ತ ಕಷ್ಟಕರವಾದ ಜೀವನವನ್ನು ಸಾಗಿಸುತ್ತಿದ್ದರೂ, ರಾಜರ, ಪಂಡಿತರ, ಪಾಳೆಯಗಾರರ, ಜಮೀನುದಾರರ ಮತ್ತು ಬಡ್ಡಿವ್ಯಾಪಾರಿಗಳ ಋಣದಲ್ಲಿ ಬದುಕುವಂಥ ಪರಿಸ್ಥಿತಿ ಇತ್ತು. ಜನರ ಬದುಕನ್ನು ಸದಾ ಹೀನಾಯವಾಗಿಸುವಂಥ ಕರ್ಮಸಿದ್ಧಾಂತ ಮತ್ತು ಮೂಢನಂಬಿಕೆಗಳು ಜನಜೀವನವನ್ನು ಅಧೋಗತಿಗೆ ಒಯ್ದಿದ್ದವು. ಧರ್ಮಗಳು ನಿಜಾಚರಣೆಯನ್ನು ಮರೆತದ್ದರಿಂದ ಧರ್ಮದ ಹೆಸರಿನಲ್ಲಿ ಹಿಂಸೆ, ಬಲಿ, ನರಬಲಿ, ಸುಲಿಗೆ, ಮೋಸ, ಕಂದಾಚಾರಗಳು ಸಮಾಜದಲ್ಲಿ ತಲೆ ಎತ್ತಿದ್ದವು. ಯುದ್ಧ, ಶೀತಲಯುದ್ಧ, ಅಧಿಕಾರದಾಹ ಮತ್ತು ಅಪನಂಬಿಕೆಗಳಿಂದ ರಾಜ್ಯವ್ಯವಸ್ಥೆ ಹದಗೆಟ್ಟಿತ್ತು. ಹೀಗೆ ಧರ್ಮ, ರಾಜ್ಯ ಮತ್ತು ಸಮಾಜ ಅಧೋಗತಿಗೆ ಇಳಿದಿದ್ದವು. ಇಂಥ ಸ್ಥಿತಿಯಲ್ಲಿ ಬಸವಣ್ಣನವರು ಹೊಸ ಭರವಸೆಯಾಗಿ ಮೂಡಿಬಂದರು. ಬಸವಣ್ಣನವರು ಬ್ರಾಹ್ಮಣ ವರ್ಣದಲ್ಲಿ ಜನಿಸಿ ಜಡ ಅಗ್ರಹಾರಗಳ ನಿಷ್ಕರುಣೆ ಅಂತರಂಗವನ್ನು ಅರಿತರು ಮತ್ತು ಸಕಲ ವೇದ ಶಾಸ್ತ್ರ ಪುರಾಣಗಳ ಅಧ್ಯಯನ ಮಾಡಿ ಮೂಢ ಧರ್ಮಗಳ ಟೊಳ್ಳುತನವನ್ನು ಗ್ರಹಿಸಿದರು. ಅವರು ಬಿಜ್ಜಳನ ಭಂಡಾರಿಯಾಗಿದ್ದಾಗ ಜನಸಾಮಾನ್ಯರ ಸುಲಿಗೆಯ ವಿರಾಟ್ ಸ್ವರೂಪದ ದರ್ಶನವಾಯಿತು. ಪ್ರಧಾನಿಯಾಗಿ ಹೀನ ರಾಜಕೀಯ ವ್ಯವಸ್ಥೆಯ ಕ್ರೌರ್ಯವನ್ನು ಮನಗಂಡರು. ಇವೆಲ್ಲವುಗಳ ಹಿಡಿತಕ್ಕೆ ಸಿಕ್ಕಿ ನರಳುತ್ತಿರುವ ಸಮಾಜವನ್ನು ಸಂರಕ್ಷಿಸುವ ಸಂಕಲ್ಪ ಮಾಡಿದರು. ಅಂತಃಕರಣದಿಂದ ಕೂಡಿದ ಈ ಸಂಕಲ್ಪವೇ ಬಸವಧರ್ಮದ ಮೂಲ. ಈ ಮೂಲವನ್ನು ಹಿಡಿದುಕೊಂಡು ಬಸವಧರ್ಮದ ವಿಶ್ವಸಂದೇಶಗಳನ್ನು ಲೋಕದ ಜನಸಮುದಾಯಗಳಿಗೆ ತಲುಪಿಸುವ ಜವಾಬ್ದಾರಿ ಈ ನೆಲದಲ್ಲಿ ಜನಿಸಿದ ಪ್ರತಿಯೊಬ್ಬ ಪ್ರಜ್ಞಾವಂತರ ಮೇಲಿದೆ.

ವಚನಕಾರರು ಈ ಜವಾಬ್ದಾರಿಯೊಂದಿಗೆ ವಚನಗಳನ್ನು ರಚಿಸುತ್ತ ಗಣಪ್ರಜ್ಞೆಯನ್ನು ಮೂಡಿಸಿದರು. ಗಣಪ್ರಜ್ಞೆ ಎಂದರೆ ಸಮಾಜದ ಎಲ್ಲರನ್ನು ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲದೆ ನೋಡುವುದು. ಎಲ್ಲರ ಹಕ್ಕುಗಳು ಸಮಾನ ಎಂಬ ತತ್ತ್ವದಲ್ಲಿ ನಂಬಿಕೆ ಇಡುವುದು. ವರ್ಣ ವ್ಯವಸ್ಥೆ ಮತ್ತು ಕರ್ಮಸಿದ್ಧಾಂತವನ್ನು ತಿರಸ್ಕರಿಸುವ ಈ ಗಣಪ್ರಜ್ಞೆ ೨೧ನೇ ಶತಮಾನಕ್ಕೆ ಹಿಂದೆಂದಿಗಿಂತಲೂ ಹೆಚ್ಚು ಅವಶ್ಯವಾಗಿದೆ. ಇದು ಪ್ರಜಾಪ್ರಭುತ್ವದ ಯುಗ. ಆದರೆ ಮಾರುಕಟ್ಟೆ ಮೌಲ್ಯಗಳೇ ಪ್ರಧಾನವಾಗುತ್ತಿರುವ ಸಮಾಜದಲ್ಲಿ ಮಾನವ

ತನಗರಿಯದಂತೆಯೇ ಗುಲಾಮನಾಗುತ್ತಿದ್ದಾನೆ. ಇಂಥ ಆಧುನಿಕ ಯುಗದಲ್ಲಿ ಮಾನವೀಯ ಮೌಲ್ಯಗಳು ಕಾಲಕಸವಾಗುತ್ತಿವೆ. ಉತ್ಪಾದನಾ ವ್ಯವಸ್ಥೆ ಕಂಪ್ಯೂಟರೀಕರಣಕ್ಕೆ ಒಳಪಡುತ್ತಿರುವುದರಿಂದ ಮಾನವಸಂಪನ್ಮೂಲಕ್ಕೆ ಬೆಲೆಯಿಲ್ಲದಂಥ ಪರಿಸ್ಥಿತಿ ಉಂಟಾಗುತ್ತಿದೆ. ವಿವಿಧ ವಸ್ತುಗಳ ಉತ್ಪಾದನೆ ಮಾಡುವ ಕಾಯಕಜೀವಿಗಳು ತಮ್ಮ ಕಾಯಕ ಕಳೆದುಕೊಂಡು ನಿರುದ್ಯೋಗಿಯಾಗುವಂಥ ಸ್ಥಿತಿ ಎಲ್ಲೆಡೆ ತಾಂಡವವಾಡುತ್ತಿದೆ. ರೈತಾಪಿ ಜನರು ಭೂಮಿಯಲ್ಲಿ ಬೆವರು ಸುರಿಸಿದರೂ ಸಾಲದ ಶೂಲದಲ್ಲಿ ಸಿಲುಕಿ ಜೀವ ಕಳೆದುಕೊಳ್ಳುವಂಥ ಮಟ್ಟಕ್ಕೆ ಬಂದು ತಲುಪಿದ್ದಾರೆ. ನಿರುದ್ಯೋಗ, ಬಡತನ, ಅಸಹಾಯಕತೆ ಮತ್ತು ಅಪಮಾನದ ಬದುಕಿನಿಂದ ಜನಸಮುದಾಯವನ್ನು ಮೇಲೆತ್ತಿ ದುಡಿಮೆ ಮತ್ತು ಸ್ವಾಭಿಮಾನದ ಸಮಾಜದ ಕಡೆಗೆ ಒಯ್ಯಬೇಕಿದೆ. ಹೀಗೆ ಮಾನವನನ್ನು ಸ್ವತಂತ್ರಧೀರನನ್ನಾಗಿಸುವ ಶಕ್ತಿ ಬಸವಧರ್ಮಕ್ಕಿದೆ. ಬಸವಧರ್ಮವನ್ನು ಲೋಕದ ಜನರು ತಮ್ಮ ಧರ್ಮಗಳಿಂದ ಮತಾಂತರ ಹೊಂದದೆಯೂ ಪಾಲಿಸಲು ಸಾಧ್ಯವಾಗುವಷ್ಟು ವಿಶಾಲವಾಗಿದೆ. ಎಲ್ಲ ಮಾನವೀಯ ಧರ್ಮಗಳ ಅಂಶಗಳನ್ನು ಒಳಗೊಂಡಾಗ ಮಾತ್ರ ಒಂದು ಧರ್ಮ ವಿಶ್ವಧರ್ಮವಾಗುತ್ತದೆ. ಅಂಥ ಶಕ್ತಿ ಬಸವಧರ್ಮಕ್ಕೆ ಇದೆ. ವಿಶ್ವಧರ್ಮಗಳಾದ ಬೌದ್ಧ, ಕ್ರೈಸ್ತ, ಇಸ್ಲಾಂ ಮುಂತಾದ ಧರ್ಮಗಳ ಜೊತೆ ಸಾಗುವ ಯೋಗ್ಯತೆಯನ್ನು ಬಸವಧರ್ಮ ಹೊಂದಿದೆ. ಇಂಥ ವಿಶ್ವಧರ್ಮಗಳು ಮಾನವರ ಮಧ್ಯೆ ತಾರತಮ್ಯ ಮಾಡುವ ಸಿದ್ಧಾಂತಗಳನ್ನು ವಿರೋಧಿಸುತ್ತವೆ. ಸುಲಿಗೆ ವ್ಯವಸ್ಥೆ, ಹಿಂಸಾತ್ಮಕ ಬದುಕು, ಭೇದಭಾವದ ಸಮಾಜ, ಅಹಂಕಾರದ ವಾತಾವರಣ ಮತ್ತು ಸ್ವಾರ್ಥಕೇಂದ್ರಿತ ಆಚರಣೆಗಳನ್ನು ಅಲ್ಲಗಳೆಯುತ್ತವೆ. ವಿಶ್ವವ್ಯಾಪಿ ನವಮಾನವನಿಗಾಗಿ ಮಾರ್ಗದರ್ಶನ ಮಾಡುತ್ತವೆ.ಸುಖ, ಸಂತೋಷ ಮತ್ತು ನೆಮ್ಮದಿ ಹೊಂದುತ್ತ ಮುಂಬರುವ ಜನಕೋಟಿಗೆ ಒಳ್ಳೆಯದಾಗುವಂಥ ವಾತಾವವಣ ನಿರ್ಮಿಸುವ ಜವಾಬ್ದಾರಿಯೊಂದಿಗೆ ಈ ಜಗತ್ತಿನಲ್ಲಿ ಮಾನವ ಬದುಕುವ ಬಗೆಯನ್ನು ವಿಶ್ವಧರ್ಮಗಳು ಕಲಿಸಿಕೊಡುತ್ತವೆ. ಇಂಥ ಒಂದು ವಿಶ್ವಧರ್ಮವಾದ ಬಸವಧರ್ಮ ವಿಶ್ವಸಂದೇಶಗಳ ಆಗರವೇ ಆಗಿದೆ.

ಬಸವಣ್ಣನವರ ಚಿಂತನೆಗಳು ನಮ್ಮ ಅಂತಃಕರಣವನ್ನು ತಟ್ಟಬೇಕಿದೆ. ನಾವು ಜಾತಿ ಮತಗಳ ಗೊಂಡಾರಣ್ಯದಿಂದ ಹೊರಬರಬೇಕಿದೆ. ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕಿದೆ. ಮೇಲುಕೀಳುಗಳನ್ನು ಹೊಡೆದೋಡಿಸಬೇಕಿದೆ. ಸ್ತ್ರೀ ಪುರುಷರಲ್ಲಿ ಸಹಚರ ಭಾವ ಮೂಡಬೇಕಿದೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸಬೇಕಿದೆ, ಅಂದಾಗ ಮಾತ್ರ ಈ ಭೂಮಿ ಸರ್ವರೀತಿಯಿಂದಲೂ ಬದುಕಲು ಯೋಗ್ಯವಾಗುತ್ತದೆ. ಇಲ್ಲದಿದ್ದರೆ ಅಹಂಕಾರದ ಆಧಿಪತ್ಯದಲ್ಲಿ ಇಡೀ ಜಗತ್ತು ವಿನಾಶದೆಡೆಗೆ ಸಾಗುತ್ತ ಒಂದು ದಿನ ಬದುಕಲು ಸಾಧ್ಯವಾಗದಂಥ ಸ್ಥಿತಿ ತಲುಪುವುದರಲ್ಲಿ ಸಂಶಯವಿಲ್ಲ.

ಮಾರುಕಟ್ಟೆ ಮೌಲ್ಯಗಳ ಜಾಗತೀಕರಣದ ಈ ಸಂದರ್ಭದಲ್ಲಿ ಬಸವಣ್ಣನವರ ಮೌಲ್ಯಗಳ ಜಾಗತೀಕರಣ ಮಾಡಬೇಕಿದೆ. ಈ ಕಾಲಘಟ್ಟದಲ್ಲಿ ಗ್ರಾಹಕನಾಗುತ್ತಿರುವ ಮಾನವನನ್ನು ರಕ್ಷಿಸಿ ನಿಜಮಾನವನನ್ನಾಗಿ ಮಾಡಬೇಕಿದೆ. ವಸ್ತುಗಳ ಬೆಲೆ ಹೆಚ್ಚಿದಂತೆಲ್ಲ

ಮಾನವ ಬೆಲೆ ಕಳೆದುಕೊಳ್ಳುತ್ತಿದ್ದಾನೆ. ಹಣ ಮಾತನಾಡುವಾಗ ಮಾನವ ಮೌನವಾಗುತ್ತಾನೆ. ದಶಾವತಾರಗಳ ನಂತರಹಣವು ಹನ್ನೊಂದನೆಯ ಅವತಾರವಾಗಿ ರೂಪುಗೊಳ್ಳುತ್ತಿದೆ. ಇಂದು ಎಲ್ಲರೂ ಹಣದ ಆರಾಧಕರೇ ಆಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಬಸವಧರ್ಮವು, ನಿಜ ದೇವರ ದರ್ಶನ ಮಾಡಿಸುತ್ತದೆ. ಬಸವಣ್ಣನವರ ದೇವರು ವಿಶ್ವವ್ಯಾಪಿಯಾಗಿರುವುದರಿಂದ ಎಲ್ಲ ಜನಾಂಗಗಳ ದೇವರಾಗಿದ್ದಾನೆ. ಆತ ನಿರಾಕಾರನಾಗಿದ್ದಾನೆ. ಅನಂತನಾಗಿದ್ದಾನೆ, ಅನನ್ಯನಾಗಿದ್ದಾನೆ. ಏಕಮೇವಾದ್ವಿತೀಯನಾಗಿದ್ದಾನೆ. ಆತನನ್ನು ಅಂತಃಕರಣದಿಂದ ಮಾತ್ರ ಅನುಭಾವಿಸಲು ಸಾಧ್ಯ. ಜಗತ್ತೆಲ್ಲ ಒಂದು, ಜೀವಜಾಲವೆಲ್ಲ ದೇವರ ಅಂಶ ಎಂಬುದನ್ನು ಅರಿಯಲು ಸಾಧ್ಯ. ಹೀಗೆ ನಾವು ಪವಿತ್ರರಾಗಬೇಕಿದೆ. ವಿಶ್ವಮಾನವರಾಗಬೇಕಿದೆ. ಮಾನವನನ್ನು ವಿಶ್ವಮಾನವನನ್ನಾಗಿಸುವುದೇ ವಿಶ್ವದರ್ಮಗಳ ಉದ್ದೇಶವಾಗಿದೆ. ಬಸವಧರ್ಮ ಇದೇ ಉದ್ದೇಶವನ್ನು ಹೊಂದಿದ ವಿಶ್ವಧರ್ಮವಾಗಿದೆ.

> "ಕರುಣೆ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ,
> ನಿರ್ಮಳ ಬಸವಾ ಶಿವಜ್ಞಾನಿ ಬಸವಾ,
> ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪದವು.
> ಕರುಣೆ ಕಪಿಲಸಿದ್ಧ ಮಲ್ಲಿನಾಥಯ್ಯಾ
> ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ"

ಎಂದು ಸಿದ್ಧರಾಮರು ಹೇಳಬೇಕಾದರೆ ಬಸವಣ್ಣನವರ ವ್ಯಕ್ತಿತ್ವ ಎಂಥದು ಎಂಬುದರ ಅರಿವಾಗುವುದು. ಅವರ ಧರ್ಮ ಅವರ ಅಂತಃಕರಣವೇ ಆಗಿದೆ. ಅವರ ಅಂತಃಕರಣವು ಮಂಗಳಕರವಾದ ಪರಮಾತ್ಮನಷ್ಟೇ ವಿಶಾಲವಾಗಿದೆ. ವಿಶ್ವಧರ್ಮವಾಗಿ ಮಾನವತೆಯನ್ನು ಸಾರುತ್ತ ನಿಂತಿದೆ.

ಬಸವಣ್ಣನವರ ದೇವರು ನಿರಾಕಾರನಾಗಿದ್ದಾನೆ. ಸ್ಥಾವರ ದೇವರ ಜಾಗದಲ್ಲಿ ಬಸವಣ್ಣನವರು ನಿರಾಕಾರ ದೇವರನ್ನು ತಂದಿರಿಸಿದ್ದು ಭಾರತದ ಧಾರ್ಮಿಕ ಇತಿಹಾಸದಲ್ಲಿ ಅನುಪಮ ಸಾಧನೆಯಾಗಿದೆ.

> "ತೋರಲಿಲ್ಲದ ಸಿಂಹಾಸನದ ಮೇಲೆ
> ಹೇಳಬಾರದ ಘನವು ಬಂದೆರಗಿದಡೆ,
> ತೋರಿ ಮೆರೆವ ಸಂಗಮನಾಥನು ಎದ್ದು ಹೋದನು"

ಎಂದು ಬಸವಣ್ಣನವರು ಹೇಳುತ್ತಾರೆ. ಬಸವಣ್ಣನವರ ನಿರಾಕಾರ ದೇವರು ವಿಶ್ವದ ದೇವರಾಗಿದ್ದಾನೆ. ಬಸವಣ್ಣನವರ ಧರ್ಮ ವಿಶ್ವಧರ್ಮವಾಗಿದೆ. ಬಸವಣ್ಣನವರ ಸಂದೇಶಗಳು ವಿಶ್ವಸಂದೇಶಗಳಾಗಿವೆ.

○

ಬಸವಧರ್ಮದ ವಿಶ್ವಸಂದೇಶ

ಬಸವಣ್ಣನವರು ಇಡೀ ವಿಶ್ವವನ್ನೇ ಜಂಗಮಲಿಂಗವಾಗಿ ಕಂಡರು. ಮಾನವನ ಒಳ ವಿಶ್ವದ ಚೈತನ್ಯದೊಡನೆ ಹೊರ ವಿಶ್ವವನ್ನು ಒಂದಾಗಿಸಿ ಇಷ್ಟಲಿಂಗವನ್ನು ಸೃಷ್ಟಿಸಿದರು. ಆದ್ದರಿಂದ ಜಂಗಮಲಿಂಗದ ಅರಿವಿಲ್ಲದೆ ಇಷ್ಟಲಿಂಗದ ಅರಿವು ಆಗದು. ಹೀಗೆ ಬಸವಣ್ಣನವರು ವ್ಯಷ್ಟಿ ಮತ್ತು ಸಮಷ್ಟಿಯ ಮಧ್ಯೆ ಅದ್ವೈತವನ್ನು ಸಾಧಿಸಿದರು. ಧರ್ಮವೆಂಬುದು ಸಾಮಾಜಿಕ ಜವಾಬ್ದಾರಿಯಿಂದ ಕೂಡಿದ ಆಂತರಿಕ ವಿಚಾರವೆಂಬ ನವಸಿದ್ಧಾಂತವನ್ನೇ ಮಂಡಿಸಿದರು. ನಾವು ಲೋಕದ ಆರಾಧನೆ ಮಾಡಿದಷ್ಟೂ ದೇವರಿಗೆ ಹತ್ತಿರದವರಾಗುತ್ತೇವೆ ಎಂದು ಸಾರಿದರು. ವಿಶ್ವಮಾನವರಾಗದೆ ಬಸವಧರ್ಮವನ್ನು ಆಚರಿಸಲಿಕ್ಕಾಗದು. ಬಸವಣ್ಣನವರ ಭಕ್ತಿಭಾವವು ಸರ್ವಸಮತಾ ಭಾವವೇ ಆಗಿದೆ. ಮಾನವನ ಅಹಂಕಾರವು ಎಲ್ಲ ರೀತಿಯ ಸಮತಾಭಾವಕ್ಕೆ ಅಡ್ಡಿ ಮಾಡುವಂಥದ್ದು. ಆದ್ದರಿಂದ ಸಮಾನತೆಯ ಪ್ರತಿಪಾದಕರು ಅಹಂಕಾರದಿಂದ ಹೊರಬರಬೇಕಾಗುತ್ತದೆ. ಜೀವನ ಪ್ರೀತಿಯನ್ನು ಹೊಂದಬೇಕಾಗುತ್ತದೆ. ವರ್ಗ, ಲಿಂಗ, ಜಾತಿ, ಮತ, ಪಂಥ ಮತ್ತು ಕುಲ ಮತದಿಂದ ಹೊರಬರಬೇಕಾಗುತ್ತದೆ. ನಮ್ಮಲ್ಲಿರುವ ಸಂಪತ್ತನ್ನು ದೇವರ ಸೊತ್ತು ಎಂದು ಭಾವಿಸಿ ಲೋಕಕಲ್ಯಾಣಕ್ಕಾಗಿ ಬಳಸಬೇಕಾಗುತ್ತದೆ. ಬಡವ-ಶ್ರೀಮಂತ, ಹೆಣ್ಣು-ಗಂಡು, ಮೇಲು-ಕೀಳು ಎಂಬ ಭೇದಭಾವವನ್ನು ತೊರೆದು ಎಲ್ಲರ ಬಗ್ಗೆ ಸಮಭಾವವನ್ನು ತಾಳಬೇಕಾಗುತ್ತದೆ. ಇಡೀ ಸೃಷ್ಟಿಯು ಸೃಷ್ಟಿಕರ್ತನದೇ ಆಗಿರುವುದರಿಂದ ನಾವು ಈ ಲೋಕದಲ್ಲಿನ ಸಂಪತ್ತಿನ ಮೇಲೆ ನಮ್ಮ ವೈಯಕ್ತಿಕ ಹಕ್ಕು ಇದೆ ಎಂದು ಪ್ರತಿಪಾದಿಸದೆ ಅದರ ಮೇಲೆ ಪ್ರತಿಯೊಬ್ಬರ ಹಕ್ಕಿದೆ ಎಂಬ ಮೂಲ ಸತ್ಯವನ್ನು ಅರಿಯಬೇಕಾಗುತ್ತದೆ.

ಪ್ರತಿಯೊಬ್ಬರ ಹಕ್ಕು ಎಂದರೆ ಇನ್ನು ಮುಂದೆ ಈ ಲೋಕದಲ್ಲಿ ಜನಿಸುವವರ ಹಕ್ಕನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಲೋಕದಲ್ಲಿ ಅತಿಥಿಯಂತೆ ಇದ್ದು ಹೋಗಬೇಕಾಗುತ್ತದೆ. ಲೋಕಸೇವೆ ಮಾಡುವುದರ ಮೂಲಕ ಲೋಕದ ಋಣವನ್ನು ತೀರಿಸಬೇಕಾಗುತ್ತದೆ. ಅದನ್ನೇ ದೇವರ ಸೇವೆ ಎಂದು ಭಾವಿಸಬೇಕಾಗುತ್ತದೆ. ಮನುಷ್ಯ ಹೀಗೆ ಈ ಲೋಕದಲ್ಲಿ ಜೀವನ ಸಾಗಿಸಿದರೆ ದೇಶ ದೇಶಗಳ ಮಧ್ಯೆ ಯುದ್ಧಗಳಾಗುವುದಿಲ್ಲ. ಯಾರೂ ಅಪಮಾನಕ್ಕೊಳಗಾಗುವುದಿಲ್ಲ. ಯಾವ ಮಹಿಳೆಯ ಮೇಲೂ ಅತ್ಯಾಚಾರ ವಾಗುವುದಿಲ್ಲ. ಬಾಲ ಕಾರ್ಮಿಕರು ಇರುವುದಿಲ್ಲ. ವೇಶ್ಯಾವಾಟಿಕೆಗಳಿರುವುದಿಲ್ಲ. ಅಹಿಂಸೆಯು ಬದುಕಿನ ತಳಹದಿಯಾಗುವುದು. ಆತ್ಮಗೌರವ ಮತ್ತು ಪರಸ್ಪರ ಗೌರವಭಾವಗಳೊಂದಿಗೆ ಬದುಕು

ಸುಂದರವಾಗುವುದು. ಆತ್ಮಾನಂದ ಮತ್ತು ಲೋಕಾನಂದದ ಮಧ್ಯೆ ಭೇದವಿರದು. ಕಾಯಕ ಮತ್ತು ದಾಸೋಹದ ಮೂಲಕ ಈ ಜಗತ್ತು ಹೆಚ್ಚು ಹೆಚ್ಚು ಸುಂದರವಾಗುತ್ತ ಸಾಗುವುದು. ಕಲ್ಪನೆಯ ಸ್ವರ್ಗ ಈ ಭೂಮಿಯ ಮೇಲೆ ವಾಸ್ತವದ ರೂಪ ತಾಳುವುದು. ಆಗ ಮಾನವ ಸದ್ಗುಣಗಳ ಆಗರವಾಗಿ, ಲೋಕವೇ ತಾನಾಗಿ ಬದುಕುವನು. ಹೀಗೆ ಬದುಕುವ ಮಾನವನೇ ನಿಜ ಮಾನವನು ಇಡೀ ವಿಶ್ವಕ್ಕೆ ಒಬ್ಬನೇ ಇರುವ ಪರಮಾತ್ಮನಿಗೆ ಶರಣು ಹೋದವನು. ಅವನೇ ಶರಣ. ಇಂಥ ಶರಣ. ಇಂಥ ಶರಣ ಸಮಾನತೆಯ ಸಾಕಾರ ಮೂರ್ತಿಯಾಗಿರುವಂಥವನು. ಆತನ ದೃಷ್ಟಿಯಲ್ಲಿ ಯಾರೂ ಮೇಲಿನವರಲ್ಲ. ಯಾರೂ ಕೆಳಗಿನವರಲ್ಲ. ಆತ ಅಹಂಕಾರದಿಂದ ಮುಕ್ತನಾಗಿ ಸ್ವತಂತ್ರಧೀರನಾಗಿರುವಂಥವನು. ಅವನ ರೋಮರೋಮಗಳು ಅಂತಃಕರಣವನ್ನೇ ಜಪಿಸುತ್ತಿರುತ್ತವೆ.

ಮನುಷ್ಯನನ್ನು ಹೀಗೆ ಅತ್ಯುನ್ನತ ಮಟ್ಟಕ್ಕೆ ಒಯ್ಯುವ ಧರ್ಮವೇ ಬಸವಧರ್ಮ. ವಿಶ್ವದ ಎಲ್ಲ ಮಾನವೀಯ ಧರ್ಮಗಳ ಜೊತೆ ಹಾಲು ಸಕ್ಕರೆ ಬೆರೆತಂತೆ ಬೆರೆತು ಹೋಗುವಂಥದ್ದು. ಅಮಾನವೀಯವಾದ ವರ್ಣಭೇದ, ವರ್ಗಭೇದ, ಜಾತಿಭೇದ ಮತ್ತು ಲಿಂಗಭೇದವನ್ನು ಪ್ರತಿಪಾದಿಸುವ ಧರ್ಮಗಳಿಗೆ ಬೆಂಕಿಯ ಸ್ವರೂಪದಲ್ಲೂ ಭೇದವನ್ನು ವಿರೋಧಿಸುವ ಧರ್ಮಗಳ ಜೊತೆ ಬೆಳಕಿನ ಸ್ವರೂಪದಲ್ಲೂ ಇರುವಂಥದ್ದು. ಈ ವಿಶ್ವದಲ್ಲಿ ತುಂಬಿತುಳುಕುತ್ತಿರುವ ಅಜ್ಞಾನದ ಅಂಧಃಕಾರದಿಂದಾಗಿ ಜನ ಸಾವು ನೋವಿನ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಎಲ್ಲಿ ನೋಡಿದಲ್ಲೆಲ್ಲ ಹಾಹಾಕಾರವೇ ಕಂಡುಬರುತ್ತಿದೆ. ನಾವು ಅಜ್ಞಾನದ ಅಂಧಕಾರವನ್ನು ಭೇದಿಸುತ್ತ ಮುನ್ನಡೆಯಬೇಕಾದರೆ ಬಸವ ಬೆಳಕನ್ನು ನಮ್ಮ ಪ್ರಜ್ಞೆ ಮತ್ತು ಭಾವದಲ್ಲಿ ತುಂಬಿಕೊಳ್ಳಬೇಕಾಗುತ್ತದೆ. ಭೇದಭಾವವಿಲ್ಲದೆ, ಸುಲಿಗೆ ಇಲ್ಲದ ಮತ್ತು ಯಾವುದೇ ತೆರನಾದ ದ್ವೇಷವಿಲ್ಲದ ಜಗತ್ತನ್ನು ಸೃಷ್ಟಿಸಬೇಕಾಗುತ್ತದೆ. ಬಸವಧರ್ಮವು ಇಂಥ ಒಂದು ಸುಂದರ ಜಗತ್ತನ್ನು ಸೃಷ್ಟಿಸುವ ವಿಶ್ವಧರ್ಮವಾಗಿದೆ. ಬಸವಧರ್ಮದ ಸಂದೇಶವು ಭಗವಾನ ಬುದ್ಧ, ಏಸು, ಪೈಗಂಬರ ಮುಂತಾದ ದಾರ್ಶನಿಕರು ಮತ್ತು ಪ್ರವಾದಿಗಳು ಸಾರಿದ ಸಂದೇಶದ ತಿರುಳೇ ಆಗಿದೆ. ಹೀಗೆ ನಾವು ಬಸವ ಬೆಳಕಿನೊಂದಿಗೆ ವಿಶ್ವ ಎಲ್ಲ ಜನಾಂಗಗಳ ಜೊತೆ ಒಂದಾಗುತ್ತ ಜಂಗಮಲಿಂಗವನ್ನು ಅರಿಯಬೇಕಾಗಿದೆ. ಅನುಪಮ ಆನಂದವನ್ನು ಅನುಭವಿಸಬೇಕಾಗಿದೆ.

> "ಕುಲಮದಕ್ಕೆ ಹೋರಿ ಜಂಗಮಭೇದವ ಮಾಡುವೆ, ಫಲವೇನು?
> ನಿತ್ಯ ಲಿಂಗಾರ್ಚನೆ ಪ್ರಾಯಶ್ಚಿತ್ತ.
> ಛಲಮದಕ್ಕೆ ಹೋರಿ ಲಿಂಗಭೇದವ ಮಾಡುವೆ;
> ಜಂಗುಳಿಯ ಕಾವ ಗೋವ ಹಲವು ಪಶುವ ನಿವಾರಿಸುವಂತೆ
> ತನು ಭಕ್ತನಾಯಿತ್ತು, ಎನ್ನ ಮನ ಭವಿ
> ಕೂಡಲಸಂಗಮದೇವಾ"

ವಿಭೂತಿ, ರುದ್ರಾಕ್ಷಿ ಮತ್ತು ಇಷ್ಟಲಿಂಗ ಧರಿಸುವುದರಿಂದ ನಮ್ಮ ತನು ಭಕ್ತನಾಗಬಹುದು. ಆದರೆ ಮನಸ್ಸು ಭಕ್ತನಾಗುವುದಿಲ್ಲ. ಅದು ಭವಿಯಾಗಿಯೇ ಉಳಿಯುವುದು. ಐಹಿಕ ವಸ್ತುಗಳ ವ್ಯಾಮೋಹದಲ್ಲಿ ಬದುಕು ಸವೆಸುವವನೇ ಭವಿ. ಅದರಿಂದ ಹೊರಬಂದು ವಿಶ್ವಪ್ರೇಮವನ್ನು ಸಾರುವವನೇ ಭಕ್ತ. ಬಸವಣ್ಣನವರು ಇಂಥ ಭಕ್ತರಾಗಿದ್ದರು. ಇಂಥ ವಿಶ್ವಪ್ರೇಮದ ಅರಿವಿನಿಂದಾಗಿ ಲೋಕದ ಗುರುವಾದರು. ಸತ್ಯದ ನಿಲುವನ್ನು ಅರಿತು ಶರಣಾದರು. ಲೋಕವೇ ತಾವಾಗಿ ಜಂಗಮವಾದರು. ಅವರು ಹೀಗೆ ಬೆಳೆಯುತ್ತ ಬೆಳೆಯುತ್ತ ಲಿಂಗಸ್ವರೂಪರಾದರು.

ಇದನ್ನೆಲ್ಲ ಸಾಧಿಸಬೇಕಾದರೆ ಮಾನವ ಎಲ್ಲ ರೀತಿಯ ಅಹಂಕಾರದಿಂದ ಹೊರಬರಬೇಕು. ಪ್ರತಿಯೊಂದಕ್ಕೂ ನಾನು ಎನ್ನುವವರಿಗಿಂತ ಕಿರಿಯರು ಯಾರೂ ಇಲ್ಲ. ನಾನು ಎಂಬುದನ್ನು ಅರಿಯದ ಶಿವಭಕ್ತರಿಗಿಂತ ಹಿರಿಯರು ಯಾರೂ ಇಲ್ಲ.

"ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಗಿಂತಹಿರಿಯರಿಲ್ಲ
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ.
ಕೂಡಲಸಂಗಮದೇವಾ ಎನಗಿದೇ ದಿಬ್ಯ"

ಭಕ್ತಿಭಾವವನ್ನು ಹೊಂದಬೇಕಾದರೆ ಎಲ್ಲ ಕಾಯಕಜೀವಿಗಳ ಅನುಭವವನ್ನು ತನ್ನದಾಗಿಸಿಕೊಳ್ಳಬೇಕಾಗುತ್ತದೆ. ಇಂಥ ಅನುಭವವು ಅನುಭಾವಕ್ಕೆ ನಾಂದಿಯಾಗುತ್ತದೆ. ಎಲ್ಲ ಐಹಿಕ ಆಸೆಗಳಿಂದ ಹೊರಬಂದ ಭಕ್ತನು ಸದಾ ಸ್ವಾನುಭವ ಮತ್ತು ಲೋಕಾನುಭವಗಳನ್ನು ಒಂದಾಗಿಸಿ ಅನುಭಾವವನ್ನು ಸಾಧಿಸುವುದರಲ್ಲಿಯೇ ತಲ್ಲೀನನಾಗಿರುತ್ತಾನೆ.

ಭಕ್ತಿ ಇಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ,
ಚನ್ನಯ್ಯನ ಮನೆಯಲ್ಲೂ ಬೇಡಿದೆ,
ದಾಸಯ್ಯನ ಮನೆಯಲ್ಲೂ ಬೇಡಿದೆ,
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನ್ನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ.

ಬಸವಣ್ಣನವರು ಅನುಭಾವದ ಜಗತ್ತನ್ನು ಅನುಭವದ ಜಗತ್ತಿನ ಮೂಲಕವೇ ನೋಡಿದರು. ಚೈತನ್ಯ ಮತ್ತು ವಸ್ತು ಅಭೇದ್ಯವಾಗಿವೆ ಎಂಬುದನ್ನು ಅವರು ಅರಿತುಕೊಂಡಿದ್ದರು. ಆ ಮೂಲಕ ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ತೋರಿಸಿಕೊಟ್ಟರು. ವ್ಯಕ್ತಿ ಮತ್ತು ಸಮಾಜದ ಸಂಬಂಧವೆಂಬುದು ಪ್ರಾಣ ಮತ್ತು ದೇಹಗಳ ಸಂಬಂಧದಂತೆ ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

"ಎಡದ ಕೈಯಲಿ ನಿಗಳವನಿಕ್ಕಿ
ಬಲದ ಕೈಯ ಕಡಿದುಕೊಂಡಡೆ ನೋಯದಿಪ್ಪುದೆ?
ಪ್ರಾಣವೊಂದಾಗಿ ದೇಹ ಬೇರಿಲ್ಲ.
ಲಿಂಗವ ಪೂಜಿಸಿ ಜಂಗಮನುದಾಸೀವನ ಮಾಡಿದಡೆ
ಬೆಂದೆನಯ್ಯಾ ನಾನು, ಕೂಡಲಸಂಗಮದೇವಾ"

ಎಂದು ಬಸವಣ್ಣನವರು ಹೇಳುವಲ್ಲಿ ಹೊರಲೋಕದ ಅನುಭವ ಮತ್ತು ಒಳಲೋಕದ ಅನುಭಾವದ ಘನಸಂಬಂಧದ ಪರಿಕಲ್ಪನೆ ಕೊಡುತ್ತಾರೆ. ಮಾನವನ ಐಹಿಕ ಬದುಕಿನ ಅನುಭವದ ಜಗತ್ತನ್ನು ಕಡೆಗಣಿಸದೆ ಅದರೊಳಗೆ ಅನುಭಾವದ ಸಾಗರವನ್ನು ಸೃಷ್ಟಿಸುವುದರಲ್ಲಿ ಬಸವಣ್ಣನವರು ತಲ್ಲೀನರಾಗಿದ್ದರು. ಈ ಅನುಭವದ ಜಗತ್ತನ್ನು ಎಲ್ಲ ರೀತಿಯ ಕಾಯಕಜೀವಿಗಳು ಕೂಡಿ ಸೃಷ್ಟಿಸುತ್ತಾರೆ. ದುಡಿಯುವವರಿಲ್ಲದೆ ಈ ಜಗತ್ತು ಬರಡಾಗುತ್ತದೆ ಎಂಬುದನ್ನು ಬಸವಣ್ಣನವರು ಸೂಚಿಸಿದ್ದಾರೆ. ಇಂಥ ಕಾಯಕಜೀವಿಗಳಿಗಾಗಿ ಅವರು ಸರಳ ಧರ್ಮವನ್ನು ಕೊಟ್ಟರು. ಆ ಮೂಲಕ ಕಾಯಕಜೀವಿಗಳು ಮತ್ತು ಒಟ್ಟಾರೆ ಲೋಕದ ಜನರು ಎಲ್ಲ ರೀತಿಯ ಮೂಢನಂಬಿಕೆ ಮತ್ತು ಹಿಂಸಾರಾಧನೆಯಿಂದ ಹೊರಬರಬೇಕು. ಯಾವುದೇ ರೀತಿಯಲ್ಲಿ ಹಣವನ್ನು ವ್ಯಯಿಸದೆ, ಮೂಢನಂಬಿಕೆಗೆ ಶರಣಾಗದೆ, ನರಬಲಿ, ಪ್ರಾಣಿಬಲಿ ಕೊಟ್ಟು ದೇವರನ್ನು ಒಲಿಸಿಕೊಳ್ಳುವ ಭ್ರಮೆಗೆ ಒಳಗಾಗದೆ ಸರಳ ಸಹಜವಾಗಿ ದೇವರ ಆರಾಧನೆ ಮಾಡುತ್ತ ಲೋಕದ ಮಾನವರಲ್ಲಿ ಏಕತೆಯನ್ನು ಸಾಧಿಸಬೇಕು ಎಂಬ ಕನಸನ್ನು ಬಸವಣ್ಣನವರು ಕಂಡಿದ್ದರು.

"ಲಿಂಗದಲ್ಲಿ ಕಠಿಣವುಂಟೆ ಜಂಗಮದಲ್ಲಿ ಕುಲವುಂಟೆ ಪ್ರಸಾದದಲ್ಲಿ ಅರುಚಿಯುಂಟೆ" ಎಂದು ಬಸವಣ್ಣನವರು ಪ್ರಶ್ನಿಸುರಲ್ಲಿ ಮೇಲೆ ತಿಳಿಸಿದ ಧೋರಣೆಯನ್ನೇ ತಾಳಿದ್ದಾರೆ. ಲೋಕದ ಮಾನವರು ಒಂದಾಗುವವರೆಗೆ ಈ ಜಗತ್ತಿನಲ್ಲಿ ಅಶಾಂತಿ ಎಂಬುದು ಇರುತ್ತದೆ. ಸಮೂಹ ಬಿಟ್ಟು ಬದುಕಲಿಕ್ಕಾಗದು. ಸಮೂಹ ಬಿಟ್ಟರೆ ನಮಗೆ ಅಸ್ತಿತ್ವವೇ ಇಲ್ಲ.

"ಜಲ ತಪ್ಪಿದ ಮತ್ಸ್ಯ ಬದುಕೂದೇ ಸೋಜಿಗ
ಗಣತಿಂತಿಣಿಯೊಳಗಿರಿಸೆನ್ನ ಲಿಂಗವೆ.
ಶಿವಶಿವಾ ಕೂಡಲಸಂಗಮದೇವಾ,
ಸೆರಗೊಡ್ಡಿ ಬೇಡುವೆನು"

ಎಂದು ಬಸವಣ್ಣನವರು ನಮ್ಮ ಬದುಕಿನಲ್ಲಿ ಜನಸಮುದಾಯದ ಮಹತ್ವವನ್ನು ಸಾರಿದ್ದಾರೆ. ವಿಶ್ವಧರ್ಮವಾದ ಬಸವಧರ್ಮದ ಬಹುದೊಡ್ಡ ಸಂದೇಶ ಇದಾಗಿದೆ. ಇಂಥ ಸಮಾಜವೇ ದೈವವಾಗುವುದು. ವ್ಯಕ್ತಿಯ ಬಳಿ ಇರುವ ಸೊತ್ತಿನ ಮೇಲೆ ಸಮಾಜವೆಂಬ ದೈವದ ಹಕ್ಕು ಇರುವುದು. ಇದೇ ಜಂಗಮಲಿಂಗ. ಎಲ್ಲರ ವೈಯಕ್ತಿಕ ಆಸ್ತಿಯ ಮೇಲೆ ಈ ಜಂಗಮಲಿಂಗದ ಹಕ್ಕು ಇರುತ್ತದೆ. ಈ ಹಕ್ಕಿನಲ್ಲಿ ಎಲ್ಲ ಜನಾಂಗಗಳ ಮಾನವಹಕ್ಕುಗಳು ಸೇರಿವೆ. ದಲಿತರ,

ಮಹಿಳೆಯರ, ಮಕ್ಕಳ, ಅಲ್ಪಸಂಖ್ಯಾತರ, ಬಡವರ ಹೀಗೆ ಸಕಲರ ಹಕ್ಕುಗಳು ಸೇರಿವೆ. ಎಲ್ಲರ ವಿಮೋಚನೆಯೂ ಸೇರಿದೆ. ವಿಶ್ವಧರ್ಮ ಎಂದರೆ ವಿಶ್ವದ ಎಲ್ಲರಿಗೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಜವಾಬ್ದಾರಿ ಮತ್ತು ಸಮಾನವಾದ ಹಕ್ಕುಗಳನ್ನು ಒದಗಿಸುವಂಥದ್ದು. ಎಲ್ಲ ಬಂಧನಗಳಿಂದ ಮುಕ್ತಗೊಳಿಸುವಂಥದ್ದು. ಎಲ್ಲರಿಗೂ ಒಬ್ಬನೇ ದೇವರು. ಪಂಚಮಹಾಭೂತಗಳ ಮೇಲೆ ಎಲ್ಲರ ಹಕ್ಕುಗಳು ಸಮಾನವಾಗಿವೆ. ಬಡತನ ಮತ್ತು ಶ್ರೀಮಂತಿಕೆ ಎಂಬುವು ಸ್ವಾರ್ಥ ವ್ಯವಸ್ಥೆಯಿಂದ ಹುಟ್ಟಿಕೊಂಡಿವೆ. ಕೃತ್ರಿಮವಾಗಿವೆ. ಪುರುಷರ ದಬ್ಬಾಳಿಕೆಯಿಂದಾಗಿ ಮಹಿಳೆಯರ ಹಕ್ಕುಗಳು ಘಾಸಿಗೊಂಡಿವೆ ಹೊರತಾಗಿ ನಿಜವಾದ ಧರ್ಮದ ಕಾರಣದಿಂದಲ್ಲ. ನೋವು, ಅಪಮಾನ ಮತ್ತು ಹಿಂಸೆ ಧರ್ಮಬಾಹಿರ. ಹೀಗೆ ಸಂದೇಶ ಸಾರುವ ಧರ್ಮವೇ ವಿಶ್ವಧರ್ಮ. ಬಸವಧರ್ಮದ ವಿಶ್ವಸಂದೇಶದಲ್ಲಿ ಎಲ್ಲ ಮಾನವರ ಆತ್ಮಗೌರವದ ಬಗ್ಗೆ ಕಾಳಜಿ ಇದೆ. ಎಲ್ಲ ಜೀವಗಳು ಭೌತಿಕವಾಗಿ ಕೂಡ ಸುಖವಾಗಿ ಬದುಕಬೇಕೆಂಬ ಕಳಕಳಿ ಇದೆ. ಅದಕ್ಕಾಗಿ ಸಮಾನವಾಗಿ ಸಂಪತ್ತಿನ ಹಂಚಿಕೆಯಾಗಬೇಕು. ಶ್ರೀಮಂತರು ತಮ್ಮಲ್ಲಿನ ಸಂಪತ್ತಿನ ಒಡೆಯ ಜಂಗಮಲಿಂಗ ಎಂದು ಭಾವಿಸಬೇಕು. "ಒಡೆಯರಿಗೆ ಒಡವೆಯನೊಪ್ಪಿಸಲಾರದೆ ಮೊರೆಯಿಡುವ ಮನವ ನಾನೇನೆಂಬೆ" ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ.

ಜಗತ್ತಿನಲ್ಲಿ ಯಾವುದೇ ಕಾಯಕ ದೊಡ್ಡದಲ್ಲ ಅಥವಾ ಚಿಕ್ಕದಲ್ಲ ಎಂಬುದು ಬಸವಧರ್ಮದ ಮಹಾನ್ ಸಂದೇಶವಾಗಿದೆ. ಮಾನವರು ತಾವು ಮಾಡುವ ಕಾಯಕದಲ್ಲಿ ಇಹಪರಗಳಿಗೆ ಸಂಬಂಧಿಸಿದ ತತ್ವದ ಸಾಕ್ಷಾತ್ಕಾರ ಮಾಡಿಕೊಂಡಾಗ ಬದುಕಿದ್ದು ಸಾರ್ಥಕ ವಾಗುವುದು. ಕಾಯಕದ ಆನಂದವೇ ಆನಂದ. ಕಾಯಕದಲ್ಲಿ ತಲ್ಲೀನರಾದಾಗ ಮಾತ್ರ ಅದರ ಅರಿವಾಗುವುದು. ಕಾಯಕದಿಂದ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ವೃದ್ಧಿಯಾಗುವುದು. ಶರೀರವು ಸುಂದರವಾಗುವುದು. ಬದುಕುವ ಧೈರ್ಯ ಬರುವುದು. ಶ್ರಮದ ಆನಂದ ಕೊಳ್ಳುವಂಥದಲ್ಲ ಅದನ್ನು ಬೆವರು ಸುರಿಸೇ ಪಡೆದುಕೊಳ್ಳಬೇಕು. ಹೀಗೆ ಶ್ರಮವು ನಮ್ಮ ನಾಲಗೆ ರುಚಿಯನ್ನು ಹೆಚ್ಚಿಸುವುದು ಮತ್ತು ವಿಶ್ರಾಂತಿ ಎಂದರೆ ಏನೆಂಬುದನ್ನು ತೋರಿಸಿಕೊಡುವುದು. ಆದ್ದರಿಂದ ಬಸವಣ್ಣನವರ ದೃಷ್ಟಿಯಲ್ಲಿ ಕಾಯಕಭೇದವಿಲ್ಲ. ಅವರಿಗೆ ಪ್ರಧಾನಿಯೂ ಅಷ್ಟೆ; ಕಸಗುಡಿಸುವವರೂ ಅಷ್ಟೆ ಎಲ್ಲರೂ ಸಮಾನರು. ತಮ್ಮ ತಮ್ಮ ಕಾಯಕದಲ್ಲಿ ನಿಷ್ಠೆ ತೋರುವವರೆಲ್ಲ ಪೂಜ್ಯರು. ಮಾದಾರ ಚೆನ್ನಯ್ಯನವರು ತಮ್ಮ ಕಾಯಕನಿಷ್ಠೆ ಮತ್ತು ದಾಸೋಹ ಪ್ರಜ್ಞೆಯಿಂದಾಗಿ ಬಸವಣ್ಣನವರ ದೃಷ್ಟಿಯಲ್ಲಿ ಕುಲಕ್ಕೆ ತಿಲಕರಾದರು. ಕೂಡಲ ಸಂಗಮದೇವರಿಗಿಂತಲೂ ಅಧಿಕರಾದರು. ಇದೇ ವಿಶ್ವದೃಷ್ಟಿ ಇದೇ ಮಾನವ ಪ್ರೇಮ. ಸಕಲವೃತ್ತಿಗಳನ್ನು ಗೌರವಿಸುವ ರೀತಿ ಇದು. ಒಳ್ಳೆಯದನ್ನು ಗುರುತಿಸುವ ಕ್ರಮ ಇದು. ಬಸವಣ್ಣನವರು ಜಾತಿ ವಿಷವನ್ನು ದೂರ ಸರಿಸಿ ಕಾಯಕದ ಅಮೃತವನ್ನು ಕುಡಿಸಿದರು. ಆಗ ಎಲ್ಲ ಕಾಯಕ ಜೀವಿಗಳು ಗೌರವಾರ್ಹವಾದರು. ಕಾಯಕ ಜೀವಿಗಳೆಲ್ಲ ಜಾತಿ ಮತ್ತು ಕುಲಗಳನ್ನು ಮೀರಿ ಒಂದಾದರು. ಎಲ್ಲ ಅಂತಸ್ತುಗಳ ಭ್ರಮೆಯನ್ನು ಅಳಿಸಿ ಬದುಕಿದರು.

"ದೇವಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ!
ಕೂಡಲಸಂಗಮದೇವಾ ಭಕ್ತರಲ್ಲಿ ಕುಲವನರಿಸಿದಡೆ
ನಿಮ್ಮ ರಾಣಿವಾಸದಾಣೆ!"

ಎಂದು ಬಸವಣ್ಣನವರು ಹೇಳುವಾಗ ಎಲ್ಲ ಕಾಯಕಗಳ ಜನಸಮುದಾಯಗಳನ್ನು ಒಂದುಗೂಡಿಸುವ ಆಶಾಭಾವವಿದೆ. ಹೀಗೆ ಬಸವತತ್ತ್ವ ವಿಶ್ವತತ್ತ್ವವಾಗಿ ಬೆಳಗುತ್ತಲೇ ಇದೆ.

"ಮರಕ್ಕೆ ಬೇರು ಬಾಯಿಯೆಂದು ತಳಯಿಂಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ.
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಳಾರ್ಥವನೀವನು
ಆ ಜಂಗಮವ ಹರನೆಂದು ಕಂಡು, ನರನೆಂದು ಭಾವಿಸಿದಡೆ
ನರಕ ತಪ್ಪದು ಕಾಣಾ ಕೂಡಲಸಂಗಮದೇವಾ"

ಲೋಕಸೇವೆಯೆ ದೇವರ ಆರಾಧನೆ ಎಂಬುದರಲ್ಲಿ ಬಸವಣ್ಣನವರಿಗೆ ಅಚಲವಾದ ವಿಶ್ವಾಸವಿದೆ. ಈ ಲೋಕಸೇವೆಯ ಪ್ರಜ್ಞೆಯಲ್ಲಿ ಅಂತಃಕರಣವಿದೆ, ಏಕೋಭಾವವಿದೆ, ಜಗತ್ತನ್ನು ಎಲ್ಲ ದುಃಖಗಳಿಂದ ಬಿಡುಗಡೆಗೊಳಿಸುವ ಮಾರ್ಗವಿದೆ. ಆದರೆ ಲೋಕ ಕಲ್ಯಾಣದ ಪ್ರಜ್ಞೆ ಬಂದರೂ ಎಲ್ಲ ಸ್ವಾರ್ಥವೇ ಪ್ರಧಾನವಾದರೆ ಹೀನ ಬದುಕು ತಪ್ಪುವುದಿಲ್ಲ ಎಂಬ ಎಚ್ಚರಿಕೆಯನ್ನು ಬಸವಣ್ಣನವರು ನೀಡುತ್ತಾರೆ. ಜಗತ್ತಿನ ಜನರೆಲ್ಲ ಒಂದು ಎಂಬ ಭಾವ ಮೂಡಬೇಕಾದರೆ ಅವರೆಲ್ಲರಿಗೂ ಶಾಶ್ವತನಾದ ಒಬ್ಬನೇ ದೇವರು ಎಂಬುದನ್ನು ಸಾರಬೇಕಾಗುತ್ತದೆ.

"ಸ್ವಾಮಿ ನೀನು, ಶಾಶ್ವತ ನೀನು,
ಎತ್ತಿದೆ ಬಿರಿದ ಜಗವೆಲ್ಲರಿಯಲು,
ಮಹಾದೇವ, ಮಹಾದೇವ,
ಇಲ್ಲಿಂದ ಮೇಲೆ ಶಬ್ದವಿಲ್ಲ.
ಪಶುಪತಿ ಜಗಕ್ಕೇಕೋದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಕೂಡಲಸಂಗಮದೇವ"

ದೇವನೊಬ್ಬ ನಾಮಹಲವು ಜಗತ್ತಿನ ಎಲ್ಲ ದೇವರ ಹೆಸರುಗಳು ಒಬ್ಬನೇ ದೇವರಿಗೆ ಕರೆದ ಹೆಸರುಗಳಾಗಿವೆ. ದೇವರು ಬಸವಣ್ಣನವರಿಗೆ ದಯೆಯ ರೂಪದಲ್ಲಿ ಕಾಣಿಸಿದ್ದಾನೆ.

ಅಂತೆಯೆ ಬಸವಣ್ಣನವರು ದಯವೇ ಧರ್ಮದ ಮೂಲವಯ್ಯಾ ಎಂದು ಹೇಳಿದ್ದಾರೆ. ಜಗತ್ತಿನ ಎಲ್ಲ ಜನಾಂಗಗಳು ತಮ್ಮ ತಮ್ಮ ದೇವರ ಹೆಸರುಗಳನ್ನು ದಯೆಗೆ ಸಮೀಕರಿಸಿ ಜೀವಕಾರುಣ್ಯದಿಂದ ಬದುಕಿದರೆ ಈ ಭೂಮಿಯೇ ಸ್ವರ್ಗವಾಗುತ್ತದೆ. ಹೀಗೆ ಭಾವಿಸಿದವರೆಲ್ಲ ಸಹಜವಾಗಿಯೇ ಶರಣಾಗುತ್ತಾರೆ. ಇಂಥ ಶರಣರು ಛಲದಿಂದ ಬದುಕಬೇಕಾಗುತ್ತದೆ.

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ;
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ;
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ;
ಛಲಬೇಕು ಶರಣಂಗೆ ಲಿಂಗಜಂಗಮವನೊಂದೆಂಬ;
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ;
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ"

ಮೌಲ್ಯಗಳಿಗಾಗಿ ಮಾನವರು ಸದಾ ತಮ್ಮೊಳಗೆ ಮತ್ತು ಹೊರಗೆ ಹೋರಾಟ ಮಾಡಲೇಬೇಕಾಗುತ್ತದೆ. ಒಳ್ಳೆಯದನ್ನು ಸಾಧಿಸುವ ಛಲ ಬೇಕಾಗುತ್ತದೆ. ಅಂಥ ಛಲವಿಲ್ಲ ದವರನ್ನು ಕೂಡಲಸಂಗಮದೇವರು ಮೆಚ್ಚುವದಿಲ್ಲ.

ಪರಧನದ ಆಸೆಯಿಂದಲೇ ಜಗತ್ತಿನಲ್ಲಿ ಅಪರಾಧಗಳು ಹೆಚ್ಚಾಗುತ್ತಿವೆ. ಪರಸ್ತ್ರೀಯರ ಸಂಗದಿಂದಾಗಿ ಏಡ್ಸ್ ಎಂಬ ಮಾರಕ ರೋಗ ಮಾನವನ ಭವಿಷ್ಯಕ್ಕೇ ಸವಾಲೆಸೆಯುವ ಹಾಗೆ ವಿಶ್ವಾದ್ಯಂತ ಹಬ್ಬುತ್ತಿದೆ. ನೂರೆಂಟು ದೈವಗಳಿಂದಾಗಿ ಮಾನವ ಸಂಬಂಧಗಳ ಮಧ್ಯೆ ಬಿರುಕುಗಳು ಬಿಟ್ಟಿವೆ. ಸಕಲ ಜೀವಿಗಳ ಮಧ್ಯೆ ದೇವರ ಅಸ್ತಿತ್ವವನ್ನು ಕಾಣದೆ ಇರುವುದರಿಂದ ಎಲ್ಲೆಡೆ ಕ್ರೌರ್ಯ ಹೆಚ್ಚುತ್ತಿದೆ. ದೇವರಿಗೆ ಅರ್ಪಿಸಿ ಪಡೆಯುವುದೇ ಪ್ರಸಾದ. ಇಲ್ಲಿ ವಿನಯವೇ ಪ್ರಧಾನವಾಗುತ್ತದೆ. ಎಲ್ಲವೂ ದೇವರ ಸೊತ್ತು ಎಂಬ ಭಾವ ಮೂಡುತ್ತದೆ. ಇಂಥ ಮೌಲ್ಯಗಳ ಸಾಧನೆಗಾಗಿ ಛಲವಂತರಾಗಬೇಕೆಂದು ಬಸವಣ್ಣನವರು ಹೇಳುತ್ತಾರೆ.

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ
ನಿಮ್ಮ ಶರಣರ ಪಾದವಲ್ಲದೆ
ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ.

ಒಳ್ಳೆಯದನ್ನು ಸಾಧಿಸುವುದಕ್ಕಾಗಿ ಮಾನವ ಛಲವಂತನಾಗಬೇಕಾದರೆ ತನ್ನೊಳಗೇ ಅನೇಕ ವಿಧದ ನಿರ್ಬಂಧಗಳನ್ನು ಹೇರಿಕೊಳ್ಳಬೇಕಾಗುತ್ತದೆ. ಕೆಲವೊಂದು ಕಡೆ ಹೋಗದಂತೆ ನಾವು ಹೆಳವರಾಗಬೇಕಾಗುತ್ತದೆ. ಕೆಲವೊಂದನ್ನು ನೋಡದಂತೆ ಕುರುಡರಾಗಬೇಕಾಗುತ್ತದೆ. ಕೆಲವೊಂದನ್ನು ಕೇಳದಂತೆ ಕಿವುಡರಾಗಬೇಕಾಗುತ್ತದೆ. ಇಂಥ ಸಂಸ್ಕಾರವನ್ನು ಬೆಳೆಸಿಕೊಳ್ಳಲು ಒಳ್ಳೆಯವರ ಸಾನ್ನಿಧ್ಯ ಅವಶ್ಯವಾಗಿದೆ. ಒಳ್ಳೆಯವರೆಲ್ಲ ಶರಣರು. ಹೀಗೆ ನಾವು ಒಳ್ಳೆಯವರಾಗಲು ಬಸವಣ್ಣನವರು ದಾರಿತೋರಿಸುತ್ತಾರೆ.

ಬಸವಣ್ಣನವರು ನಮ್ಮನ್ನು ಹುಟ್ಟು ಸಾವು, ರಜಸ್ಸು, ಎಂಜಲು ಮತ್ತು ಕುಲ ಸೂತಕಗಳಿಂದ ಮುಕ್ತಗೊಳಿಸಿ ಲೋಕದ ಜನರೊಂದಿಗೆ ಒಂದಾಗಿ ಬದುಕುವುದನ್ನು ಕಲಿಸಿದ್ದಾರೆ. ನಾವು ಒಳಗೂ ಹೊರಗೂ ಶುದ್ಧವಾಗಿರುವಂತೆ ನೋಡಿಕೊಳ್ಳುತ್ತಾರೆ.

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ;
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ;
ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ"

ಹೀಗೆ ಬಸವಣ್ಣನವರು ದೇವರಲ್ಲಿ ನಿವೇದನೆ ಮಾಡುತ್ತಾರೆ. ನಾವೆಲ್ಲ ಸೃಷ್ಟಿಕರ್ತನ ಮನೆಯ ಮಕ್ಕಳಾಗಬೇಕಾದರೆ ಆತ ಸೃಷ್ಟಿಸಿದ ಜಗತ್ತಿನ ಬಗ್ಗೆ ಸಮಭಾವದ ಕಾಳಜಿ ಇರಬೇಕಾಗುತ್ತದೆ.

"ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ"
"ಒಮ್ಮನವಾದರೆ ಒಡನೆ ನುಡಿವನು; ಇಮ್ಮನವಾದರೆ ನುಡಿಯನು.
ಕಾಣಿಯ ಸೋಲ ಅರ್ಧಗಾಣಿಯ ಗೆಲ್ಲ;
ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವ!"

ಕೂಡಲಸಂಗಮದೇವ ಲೋಕವ್ಯವಹಾರದಲ್ಲಿ ತೊಡಗಿ ವ್ಯಾಪಾರಕ್ಕೆ ಕುಳಿತಿದ್ದಾನೆ. ಆತ ಈ ವ್ಯಾಪಾರದಲ್ಲಿ ಒಂದು ಪೈಸೆಯಷ್ಟೂ ಕಡಿಮೆ ತೆಗೆದುಕೊಳ್ಳುವುದಿಲ್ಲ. ಅರ್ಧ ಪೈಸೆಯಷ್ಟೂ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. ಪರಿಪೂರ್ಣವಾದ ಜೀವಜಾಲ ಸಮತೋಲನವನ್ನು ಕಾಪಾಡುವುದು ಈ ದೇವರ ವ್ಯಾಪಾರವಾಗಿದೆ. ಹೀಗೆ ಬಸವಣ್ಣನವರು ನಮಗೆ ಪರಿಸರ ಪ್ರಜ್ಞೆಯನ್ನು ಮೂಡಿಸುತ್ತಾರೆ. ಬಸವ ಧರ್ಮ ನಿಸರ್ಗ ಧರ್ಮವಾಗಿದೆ, ಜೀವಜಾಲ ಸಮತೋಲನದ ಧರ್ಮವಾಗಿದೆ, ಮಾನವ ವಿಮೋಚನೆಯ ಧರ್ಮವಾಗಿದೆ, ಸಮಾನತೆಯ ಧರ್ಮವಾಗಿದೆ, ಮಾನವ ಹಕ್ಕುಗಳ ಧರ್ಮವಾಗಿದೆ, ಮಹಿಳೆಯರು ಮತ್ತು ದಲಿತರ ಸಮಾನತೆಯನ್ನು ಸಾರುವ ಧರ್ಮವಾಗಿದೆ. ಇದನ್ನೆಲ್ಲ ಸಾಧಿಸಬೇಕಾದರೆ ಈ ಬದುಕು ಮನುಷ್ಯ ಕೇಂದ್ರಿತವಾಗಬಾರದು. ಹಾಗೆ ಆದರೆ ಅದು ಉಳ್ಳವರ ದುರಾಸೆಕೇಂದ್ರಿತ ವ್ಯವಸ್ಥೆಗೆ ನಾಂದಿ ಹಾಡುತ್ತದೆ. ಆದ್ದರಿಂದ ಬಸವಣ್ಣನವರು "ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು" ಎಂದು ಹೇಳಿ ಜೀವಕೇಂದ್ರಿತ ವ್ಯವಸ್ಥೆಯನ್ನು ಬೆಂಬಲಿಸಿದ್ದಾರೆ. ಈ ಜಗತ್ತು ಜೀವಕೇಂದ್ರಿತವಾಗಿರಬೇಕು, ಮನುಷ್ಯ ಕೇಂದ್ರಿತವಾದರೆ ಸರ್ವನಾಶ ಎಂದು ಇಂದಿನ ಪರಿಸರ ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ. ಬಸವಣ್ಣನವರು ನಮಗೆ ಇಂಥ ಎಚ್ಚರಿಕೆಯನ್ನು ೧೨ನೇ ಶತಮಾನದಲ್ಲೇ ಕೊಟ್ಟಿದ್ದಾರೆ.

ಮನುಷ್ಯರು ತಪ್ಪು ಮಾಡುವುದು ಸಹಜ. ಆದರೆ ತಿದ್ದಿಕೊಳ್ಳುವ ಮೂಲಕ ಆ

ತಪ್ಪಿನಿಂದ ಹೊರಬರಬೇಕಾಗುತ್ತದೆ. "ಲಲಾಟದಲ್ಲಿ ವಿಭೂತಿ ಬರಲಿಕೆ ಪಾಪ ಪಲ್ಲಟವಾಗದೆ, ಕೂಡಲಸಂಗಮದೇವಾ" ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ನಮ್ಮಲ್ಲಿ ಧೈರ್ಯ ತುಂಬುತ್ತಾರೆ. "ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ" ಎಂದು ಅಭಯವಚನವನ್ನು ನೀಡುತ್ತಾರೆ. ವಿಭೂತಿಯು ದೇವರಿಗೆ ಶರಣಾಗತವಾಗುವುದರ ಸಂಕೇತವಾಗಿದೆ. ಕಾಮನೆಗಳಿಂದ ಮುಕ್ತವಾಗಿರುವುದರ ಸಂಕೇತವಾಗಿದೆ. ಎಲ್ಲವೂ ನಶ್ವರ, ನೂರೆಂಟು ಹೆಸರುಗಳಿಂದ ಕರೆಯಿಸಿಕೊಳ್ಳುವ ಈಶ್ವರನೊಬ್ಬನೇ ಶಾಶ್ವತ ಎಂಬುದನ್ನು ಸಾರುತ್ತದೆ.

ಅಂತರಂಗ ಆತ್ಮಶುದ್ಧಿ ಇಲ್ಲದೆ ನಾವು ಒಳ್ಳೆಯವರಾಗಲು ಸಾಧ್ಯವಿಲ್ಲ. ಬರಿ ತೋರಿಕೆಯ ಭಕ್ತಿಯಿಂದ ಯಾವ ಪ್ರಯೋಜನವೂ ಇಲ್ಲ.

"ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದೊಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲಸಂಗಮದೇವ?"

ಎಂದು ಬಸವಣ್ಣನವರು ಪ್ರಶ್ನಿಸುವುದರ ಮೂಲಕ ಎಚ್ಚರಿಸುತ್ತಾರೆ. ನಮ್ಮೊಳಗೆ ಬದಲಾವಣೆಗಳಾಗದಿದ್ದರೆ ಹೊರಗೆ ಬದಲಾವಣೆಗಳಾಗುವುದು ಸಾಧ್ಯವಿಲ್ಲ ಎಂಬುದನ್ನು ಸೂಚಿಸುತ್ತಾರೆ.

"ಕಾಮವೇಕೊ ಲಿಂಗಪ್ರೇಮಿಯೆನಿಸುವಂಗೆ?
ಕ್ರೋಧವೇಕೊ ಶರಣವೇದ್ಯನೆನಿಸುವಂಗೆ?
ಲೋಭವೇಕೊ ಭಕ್ತಿಲಾಭವ ಬಯಸುವಂಗೆ?
ಮೋಹವೇಕೊ ಪ್ರಸಾದವೇದ್ಯನೆನಿಸುವಂಗೆ?
ಮದಮತ್ಸರವುಳ್ಳವಂಗೆ ಹೃದಯಶುದ್ಧವೆಲ್ಲಿಯದೋ?
ಹದುಳಿಗರಾದಲ್ಲಿಪ್ಪ ನಮ್ಮ ಕೂಡಲಸಂಗಮದೇವ"

ಕಾಮವನ್ನು ಲಿಂಗಪ್ರೇಮಿಯಾಗಿ ಜಯಿಸಬೇಕು, ಶರಣನಾಗಿ ಕ್ರೋಧವನ್ನು ಜಯಿಸಬೇಕು, ಭಕ್ತಿಭಾವ ತಾಳಿ ಲೋಭದಿಂದ ಮುಕ್ತರಾಗಬೇಕು. ಪ್ರಸಾದವನರಿತು ಮೋಹದಿಂದ ಹೊರಬರಬೇಕು. ಶುದ್ಧಹೃದಯದಿಂದ ಮದ, ಮತ್ಸರಗಳನ್ನು ಇಲ್ಲವಾಗಿಸಬೇಕು. ಹೀಗೆ ಸಾಧಿಸುವುದರ ಮೂಲಕ ನೆಮ್ಮದಿಯ ಬದುಕನ್ನು ಸಾಗಿಸುವವರ ಜೊತೆ ದೇವರು ಇರುವನು ಎಂದು ಬಸವಣ್ಣನವರು ಹೇಳಿದ್ದಾರೆ. "ನುಡಿಗೆ ತಕ್ಕ ನಡೆಯ ಕಂಡೊಡೆ ಕೂಡಲಸಂಗಮದೇವನೊಳಗಿರ್ಪನಯ್ಯಾ" ಎಂದು ಬಸವಣ್ಣನವರು ತಿಳಿಸಿದ್ದಾರೆ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ;
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ;
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ;
ಕೂಡಲಸಂಗಮದೇವ"

ನಾವು ನಮ್ಮ ತಪ್ಪನ್ನು ತಿದ್ದಿಕೊಳ್ಳದೆ ಸದಾ ಬೇರೆಯವರ ತಪ್ಪಿನ ಬಗ್ಗೆಯೇ ಮಾತನಾಡುತ್ತಿರುತ್ತೇವೆ. ಅನೇಕ ಶ್ರೀಮಂತರು ತಮ್ಮನ್ನು ತಾವು ತಿದ್ದಿಕೊಳ್ಳುವ ಬದಲು ಊರ ಪಂಚಾಯ್ತಿ ಮಾಡಲು ಹೋಗುತ್ತಾರೆ. ಊರಿಗೇ ಪಿಡುಗಾಗಿ ಬದುಕುತ್ತಾರೆ. ಎಲ್ಲರೂ ಒಳ್ಳೆಯವರಾದರೆ ಯಾರೂ ಯಾರಿಗೂ ಬುದ್ಧಿ ಹೇಳುವ ಪ್ರಸಂಗ ಬರುವುದಿಲ್ಲ. ಒಳ್ಳೆಯದನ್ನು ಹೇಳುವ ಪ್ರಸಂಗ ಬಂದಾಗ ಹೇಳುವವರು ಮೊದಲು ಒಳ್ಳೆಯವರಾಗಿರ ಬೇಕಾಗುತ್ತದೆ ಎಂಬುದನ್ನು ಬಸವಣ್ಣನವರು ಸೂಚಿಸಿದ್ದಾರೆ.

ಬಸವಣ್ಣನವರು ವ್ಯಕ್ತಿ, ಸಮಾಜ, ಜೀವಜಗತ್ತು ಮತ್ತು ಅನಂತವಾದ ವಿಶ್ವವನ್ನು ನೋಡುವ ಕ್ರಮವನ್ನು ತಿಳಿಸಿಕೊಟ್ಟಿದ್ದಾರೆ. ಹೀಗೆ ನಾವು ನಾಲ್ಕು ಪ್ರಕಾರಗಳಲ್ಲಿ ನಮ್ಮನ್ನು ನಾವು ಗುರುತಿಸುತ್ತ ಸಾಗಬೇಕಾಗುತ್ತದೆ. ಆಗ ನಾವು ಯಾರಿಗೂ ಹೊರಗಿನವರಾಗುವುದಿಲ್ಲ ಯಾರೂ ನಮಗೆ ಹೊರಗಿನವರಾಗುವುದಿಲ್ಲ.

"ಆತ್ಮಸ್ತುತಿ, ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ" ಎಂದೆ ಬಸವಣ್ಣನವರು ದೇವರಲ್ಲಿ ಬೇಡಿಕೊಳ್ಳುತ್ತಾರೆ. ಆತ್ಮವಿಮರ್ಶೆ ಮತ್ತು ಪರರಿಗೆ ತೋರುವ ಗೌರವಭಾವದಿಂದ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸುವುದು. ಇಂಥ ಮನಸ್ಥಿತಿಯೊಂದಿಗೆ ಒಳ್ಳೆಯದನ್ನು ಸಾಧಿಸಬೇಕಾದರೆ ದಾಕ್ಷಿಣ್ಯಕ್ಕೆ ಒಳಗಾಗದೆ ನ್ಯಾಯನಿಷ್ಠುರಿಗಳಾಗಿರಬೇಕಾಗುತ್ತದೆ. ಒಳ್ಳೆಯದಕ್ಕಾಗಿ ಲೋಕವಿರೋಧವನ್ನೂ ಕಟ್ಟಿಕೊಳ್ಳಬೇಕಾಗುತ್ತದೆ. ನಮ್ಮ ಬದುಕಿನಲ್ಲಿ ಬದ್ಧತೆ ಇದ್ದರೆ ಇದನ್ನೆಲ್ಲ ಸಾಧಿಸಲು ಸಾಧ್ಯ ಎಂದು ಬಸವಣ್ಣನವರು ಸೂಚಿಸಿದ್ದಾರೆ.

"ನ್ಯಾಯ ನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ;
ಲೋಕವಿರೋಧಿ; ಶರಣನಾರಿಗಂಜುವವನಲ್ಲ;
ಕೂಡಲಸಂಗಮದೇವರ ರಾಜತೇದಲ್ಲಿಪ್ಪೆನಾಗಿ"

ಬಸವಣ್ಣನವರು ಸದಾ ಬಡವರ ಪರವಾಗಿ ನಿಲ್ಲುತ್ತಾರೆ. ಜಗತ್ತಿನ ಬಡವರೆಲ್ಲ ಒಂದಾಗಿ ಹೊಸ ಬದುಕನ್ನು ಸಾಧಿಸಬಲ್ಲರು ಎಂಬುದರ ಮುನ್ಸೂಚನೆಯನ್ನು ಅವರು ನೀಡಿದ್ದಾರೆ.

"ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?

ಹಿರಿಯತನವಾವುದೆಂದಡೆ ಗುಣಜ್ಞಾನ
ಆಚಾರಧರ್ಮ ಕೂಡಲಸಂಗನ ಶರಣರು ಸಾಧಿಸಿದ ಹಿರಿಯತನ"

ಹೀಗೆ ಬಸವಣ್ಣನವರು ಬಡವರಪರ ನಿಲ್ಲುತ್ತಾರೆ. ಬಡವರಿಗಾಗಿ ಹೊಸ ಧರ್ಮವನ್ನು ಸ್ಥಾಪಿಸುತ್ತಾರೆ. ಎಲ್ಲ ಕಾಯಕಜೀವಿಗಳು ಆತ್ಮಗೌರವ ಮತ್ತು ಗಣಪ್ರಜ್ಞೆಯೊಂದಿಗೆ ಒಂದಾಗಿ ಬದುಕುವಂತೆ ಮಾಡುತ್ತಾರೆ. ಬಡವರೆಂದರೆ ಬಸವಣ್ಣನವರಿಗೆ ಎಲ್ಲಿಲ್ಲದ ಪ್ರೀತಿ. ಅವರ ಹೃದಯ ಶ್ರೀಮಂತಿಕೆಯ ಮುಂದೆ ಎಲ್ಲವೂ ತೃಣಸಮಾನ ಅವರಿಗೆ. ಲೌಕಿಕವಾಗಿ ಬಡವರಾದ ಶರಣರು ಅನುಭಾವದಲ್ಲಿ ಬಡತನವನ್ನೇ ಶ್ರೀಮಂತಗೊಳಿಸಿದಂಥವರು. ಬಡತನವನ್ನು ಆಹ್ವಾನಿಸುವಂಥವರು.

"ಮನೆ ನೋಡಾ ಬಡವರು; ಮನ ನೋಡಾ ಘನ.
ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕೆ ಉಂಟು.
ಕೂಡಲಸಂಗನ ಶರಣರು ಸ್ವತಂತ್ರಧೀರರು"

ಕೂಡಲಸಂಗನ ಶರಣರು ವ್ಯಭಿಚಾರಿಗಳಲ್ಲ. ಮನಸ್ಸನ್ನು ಮತ್ತು ಶರೀರವನ್ನು ಹತೋಟಿಯಲ್ಲಿಟ್ಟುಕೊಂಡು ಬದುಕಿನಲ್ಲಿ ಸಾಧನೆ ಮಾಡಿದ ಕಲಿಗಳು. ಇವರು ಸಂಪತ್ತನ್ನು ಕೂಡಿಹಾಕುವವರಲ್ಲ. ಆದರೆ ಅವರ ಮನೆಗೆ ಬಂದ ಅತಿಥಿಗಳು ಸಂತೃಪ್ತಗೊಳ್ಳುವಷ್ಟು ಉಂಟು. ಅವರು ಸ್ವತಂತ್ರರೂ ಧೀರರೂ ಆಗಿದ್ದಾರೆ. ಇಂಥ ಮಾನವನನ್ನು ಸೃಷ್ಟಿಸುವುದೇ ಬಸವಧರ್ಮದ ಉದ್ದೇಶವಾಗಿದೆ.

೧. ದೇವನೊಬ್ಬ ನಾಮ ಹಲವು.
೨. ಸಂಗ್ರಹಬುದ್ಧಿಯಿಂದ ಬದುಕು ಅಸಹನೀಯವಾಗುತ್ತದೆ.
೩. ಮಂಗಳಕರವಾದುದನ್ನು ಜಪಿಸಬೇಕು.
೪. ಪಾಪದಿಂದ ಮುಕ್ತಿ ಪಡೆಯಲು ಪುಣ್ಯದ ದಾರಿ ಹಿಡಿಯಬೇಕು.
೫. ನುಡಿದಂತೆ ನಡೆಯಬೇಕು.
೬. ಅಹಂಕಾರದಿಂದ ಅಧೋಗತಿ.
೭. ದಯೆಯಿಂದ ಲೋಕ ರಕ್ಷಣೆ.
೮. ಭೇದಭಾವದಿಂದ ದುರ್ಗತಿ.
೯. ಕಳಬೇಡ.
೧೦. ಕೊಲಬೇಡ

೧೧. ಹುಸಿಯ ನುಡಿಯಬೇಡ.

೧೨. ಮುನಿಯಬೇಡ.

೧೩. ಅನ್ಯರಿಗೆ ಅಸಹ್ಯ ಪಡಬೇಡ.

೧೪. ತನ್ನ ಬಣ್ಣಿಸಬೇಡ.

೧೫. ಪ್ರತಿಯಾಗಿ ಹಳಿಯಬೇಡ.

೧೬. ಮಹಿಳೆ ನಮ್ಮ ಸಮಾನ.

೧೭. ದಲಿತ ನಮ್ಮ ಸಮಾನ.

೧೮. ಬಡವರು ನಮ್ಮ ಸಮಾನ.

೧೯. ಮಾನವ ಪವಿತ್ರನಾಗಿರಬೇಕು.

೨೦. ಕಾಯಕ ದಾಸೋಹಿಯಾಗಿರಬೇಕು.

ಬಸವಣ್ಣನವರ ಈ ವಿಶ್ವಸಂದೇಶಗಳನ್ನು ನಮ್ಮ ಜೀವನದಲ್ಲಿ ಪಾಲಿಸಿದರೆ ವಿಶ್ವಮಾನವರಾಗುವೆವು.

೦

ಚೇತನ ತರಂಗ

ಏನೂ ಏನೂ ಇಲ್ಲದ ಬಯಲೊಳಗೊಂದು ಬಗೆಗೊಳಗಾದ ಬಣ್ಣತಲೆದೋರಿತ್ತು.
ಆ ಬಯಲನಾ ಬಣ್ಣ ಶೃಂಗರಿಸಲು ಬಯಲು ಸ್ವರೂಪಗೊಂಡಿತ್ತು.
ಅಂತಪ್ಪ ಸ್ವರೂಪಿನ ಬೆಡಗು ತಾನೆ ನಮ್ಮ ಗುಹೇಶ್ವರಲಿಂಗದ ಪ್ರಥಮ ಭಿತ್ತಿ.

-ಅಲ್ಲಮ ಪ್ರಭುದೇವರು

ಅನಂತವಾದ ವಿಶ್ವವೆಲ್ಲ ಶೂನ್ಯದಲ್ಲಿ ಅಡಗಿದೆಯಾದ್ದರಿಂದ ಶೂನ್ಯವೆಂದರೆ ಎಲ್ಲವನ್ನೂ ಒಳಗೊಂಡದ್ದು ಎಂದೇ ಅರ್ಥ. ಇದು ಪರಿಪೂರ್ಣವಾಗಿದೆ. ಇದರೊಳಗೆ ನಡೆಯುವ ಕ್ರಿಯೆಗಳೆಲ್ಲ ಇದರ ಪರಿಪೂರ್ಣತೆಯನ್ನು ಹೆಚ್ಚಿಸುವುದಿಲ್ಲ ಅಥವಾ ಕಡಿಮೆ ಮಾಡುವುದಿಲ್ಲ. ಈ ಪರಿಪೂರ್ಣತೆಯನ್ನು ಹೆಚ್ಚಿಸಲು ಸಾಧ್ಯವಿಲ್ಲ; ಅಥವಾ ಕಡಿಮೆ ಮಾಡಲು ಸಾಧ್ಯವಿಲ್ಲ. ಈ ಶೂನ್ಯದಲ್ಲಿ ಕಂಪನವಾದಾಗ ಆಕಾಶ ರೂಪುತಾಳಿತು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ, ಜಲದಿಂದ ಪೃಥ್ವಿ ರೂಪುತಾಳಿದವು. ಈ ಪಂಚ ಮಹಾಭೂತಗಳಿಂದ ಸಕಲ ಚರಾಚರಗಳ ಸೃಷ್ಟಿಯಾಗಿ ಜೀವಜಾಲದ ನಿರ್ಮಾಣವಾಯಿತು. ಶೂನ್ಯದಲ್ಲಿ ಸೃಷ್ಟಿಯಾದ ಕಂಪನದಿಂದಾಗಿ ಉಂಟಾದ ತರಂಗಗಳಲ್ಲಿ ಋಣಾತ್ಮಕ ಮತ್ತು ಗುಣಾತ್ಮಕ ತರಂಗಗಳಿವೆ. ಋಣಾತ್ಮಕ ತರಂಗಗಳು ನಮ್ಮನ್ನು ವಸ್ತುಗಳ ಕಡೆಗೆ ಎಳೆಯುತ್ತಿರುತ್ತವೆ. ಗುಣಾತ್ಮಕ ತರಂಗಗಳು ನಮ್ಮನ್ನು ವಸ್ತುವಿನೊಳಗಿನ ಚೈತನ್ಯದ ಕಡೆಗೆ ಒಯ್ಯುತ್ತಿರುತ್ತವೆ. ನಾವು ವಸ್ತುವಿನ ಕಡೆಗೆ ಹೋದಾಗ ನಮ್ಮ ಐಹಿಕ ಅಭ್ಯುದಯದ ಕಡೆಗೆ ಮಾತ್ರ ಗಮನ ಹರಿಸುತ್ತೇವೆ. ವಸ್ತುಚೈತನ್ಯದ ಪ್ರಜ್ಞೆ ಬಂದಾಗ ಸಕಲ ಜೀವರಾಶಿಗಳ ಐಹಿಕ ಅಭ್ಯುದಯದ ಬಗ್ಗೆ ಚಿಂತಿಸುತ್ತೇವೆ. 'ಎಲ್ಲವೂ ಎಲ್ಲರಿಗಾಗಿ' ಎಂಬ ಭಾವ ತಾಳುತ್ತೇವೆ.

ನಾವು ಋಣಾತ್ಮಕ ತರಂಗಗಳ ಜೊತೆ ಇದ್ದಾಗ ಹಿಟ್ಲರ್, ಮುಸೊಲಿನಿ, ಸಾಮ್ರಾಜ್ಯಶಾಹಿಗಳು, ಸುಲಿಗೆಕೋರರು ಮತ್ತು ಭೇದಭಾವದೊಂದಿಗೆ ದಬ್ಬಾಳಿಕೆ ಮಾಡುವವರ ಜೊತೆ ಇರುತ್ತೇವೆ. ಹೀಗೆ ಋಣಾತ್ಮಕ ತರಂಗಗಳ ಜೊತೆ ಇರುವವರೇ ಭವಿಗಳು. ನಾವು ಗುಣಾತ್ಮಕ ತರಂಗಗಳ ಜೊತೆ ಇರುವಾಗ ಭಗವಾನ ಬುದ್ಧ, ಜೀಸಸ್, ಪೈಗಂಬರ್, ಬಸವಣ್ಣ, ಗುರುನಾನಕರಂಥ ಮಾನವತಾವಾದಿಗಳು ಮತ್ತು ಭೇದಭಾವವಿಲ್ಲದೆ ಬದುಕುವವರ ಜೊತೆ ಇರುತ್ತೇವೆ. ಹೀಗೆ ಗುಣಾತ್ಮಕ ತರಂಗಗಳ ಜೊತೆ ಇರುವವರೇ ಭಕ್ತರು. ಇಂಥ ಗುಣಾತ್ಮಕ ತರಂಗವೇ ಚೇತನ ತರಂಗ.

ಋಣಾತ್ಮಕ ತರಂಗಗಳು ನಮ್ಮನ್ನು ಸ್ವಾರ್ಥಮಯವಾದ ಐಹಿಕ ಜಗತ್ತಿನ ಕಡೆಗೆ ಒಯ್ಯುತ್ತಿರುತ್ತವೆ. ಋಣಾತ್ಮಕ ತರಂಗಗಳು ಮಾನವ ಕುಲದ ಮನಸ್ಸನ್ನೆಲ್ಲ ಆವರಿಸಿದಾಗ ಎಲ್ಲ ರೀತಿಯ ಅಸಮಾನತೆಗಳಿಂದ ಕೂಡಿದ ಭಾರಿ ಶೋಷಣೆಯ ಜಗತ್ತು ನಿರ್ಮಾಣ ವಾಗುತ್ತದೆ. ಎಲ್ಲೆಂದರಲ್ಲಿ ಯುದ್ಧಗಳು, ಯಾದವೀ ಕಲಹಗಳು, ಮೋಸ, ಅನ್ಯಾಯ, ಅತ್ಯಾಚಾರಗಳು ನಡೆಯುತ್ತಲೇ ಇರುತ್ತವೆ. ಧಾರ್ಮಿಕ ಭಾಷೆಯಲ್ಲಿ ಇದಕ್ಕೆ ಧರ್ಮಗ್ಲಾನಿ ಎನ್ನುತ್ತಾರೆ. ಮಾನವ ಕೆಟ್ಟದ್ದರ ತಾರಕಕ್ಕೇರಿದಾಗ ಒಳ್ಳೆಯದರ ಕಡೆಗೆ ಬರಲು ಹಂಬಲಿಸುತ್ತಾನೆ. ಗುಣಾತ್ಮಕತರಂಗಗಳ ಕಡೆ ವಾಲತೊಡಗುತ್ತಾನೆ. ಗುಣಾತ್ಮಕ ತರಂಗಗಳು ಮಾನವಕುಲದ ಮನಸ್ಸನ್ನೆಲ್ಲ ಆವರಿಸಿದಾಗ ಸರ್ವಸಮಾನತೆಯಿಂದ ಕೂಡಿದ ಮತ್ತು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಮಾನವೀಯ ಜಗತ್ತಿನ ನಿರ್ಮಾಣವಾಗುತ್ತದೆ. ಯುದ್ಧಗಳು, ಯಾದವೀ ಕಲಹಗಳು, ಮೋಸ, ಅನ್ಯಾಯ, ಅತ್ಯಾಚಾರಗಳು ನಿರ್ನಾಮವಾಗುತ್ತವೆ. ಧಾರ್ಮಿಕ ಭಾಷೆಯಲ್ಲಿ ಹೇಳಬೇಕೆಂದರೆ ಆಗ ಧರ್ಮಸಂಭವವಾಗುತ್ತದೆ.

ತಮ್ಮ ಅರಿವನ್ನೇ ಗುರುವಾಗಿಸಿಕೊಂಡ ಮಾನವರು ಆಳವಾಗಿ ಚಿಂತಿಸಿದಾಗ ಅರಿವಿಗೆ ಬರುವುದು ಏನೆಂದರೆ, ಮಾನವ ಪ್ರತಿಕ್ಷಣ ಈ ಎರಡೂ ತೆರನಾದ ತರಂಗಗಳ ಸೆಳೆತಕ್ಕೆ ಒಳಗಾಗುತ್ತಲೇ ಇರುತ್ತಾನೆ. ಆತ ಹೆಚ್ಚು ಹೆಚ್ಚು ಋಣಾತ್ಮಕ ತರಂಗಗಳ ಜೊತೆ ಸಾಗಿದಾಗ ದುಷ್ಟನಾಗುತ್ತ ಹೋಗುತ್ತಾನೆ. ಹೆಚ್ಚು ಹೆಚ್ಚು ಗುಣಾತ್ಮಕ ತರಂಗಗಳ ಜೊತೆ ಸಾಗಿದಾಗ ಶಿಷ್ಟನಾಗುತ್ತ ಹೋಗುತ್ತಾನೆ. ಮಾನವನನ್ನು ಹೀಗೆ ಶಿಷ್ಟನನ್ನಾಗಿಸುವುದೇ ಮಾನವ ಏಕತೆಯನ್ನು ಪ್ರತಿಪಾದಿಸುವ ಧರ್ಮಗಳ, ಭಕ್ತಿಪಂಥದ, ಸಮಾಜವಾದದ ಮತ್ತು ಸಮತಾವಾದದ ಉದ್ದೇಶವಾಗಿದೆ. ಅವುಗಳ ದಾರಿಗಳು ಬೇರೆಯಾದರೂ ಗುರಿ ಒಂದೇ ಆಗಿದೆ.

> "ಅನಾದಿಯ ಮಗನು ಆದಿ, ಆದಿಯ ಮಗನತೀತ, ಅತೀತನ ಮಗನು ಆಕಾಶ,
> ಆಕಾಶನ ಮಗನು ವಾಯು, ವಾಯುವಿನ ಮಗನಗ್ನಿ, ಅಗ್ನಿಯ ಮಗ ಅಪ್ಪು,
> ಅಪ್ಪುವಿನ ಮಗ ಪೃಥ್ವಿ, ಪೃಥ್ವಿಯಿಂದ ಸಕಲ ಜೀವರೆಲ್ಲರೂ ಉದ್ಭವ ಗುಹೇಶ್ವರಾ."

ಎಂದು ಅಲ್ಲಮಪ್ರಭುಗಳು ಹೇಳುವಲ್ಲಿ ಜೀವಸಂಕುಲವೆಂಬ ವಂಶವೃಕ್ಷದ ಮೂಲಸ್ವರೂಪವನ್ನು ತಿಳಿಸುತ್ತಾರೆ. ಪಂಚಮಹಾಭೂತಗಳು ಮತ್ತು ಜಗತ್ತಿನ ಜೀವರಾಶಿಗಳೆಲ್ಲ ನಮ್ಮ ಬಂಧುಬಳಗವೇ ಆಗಿವೆ ಎಂಬ ಸತ್ಯವನ್ನು ತಿಳಿಸುತ್ತಾರೆ. ವಿಜ್ಞಾನ ಇದೇ ಸತ್ಯವನ್ನು ಪ್ರತಿಪಾದಿಸುತ್ತಿದೆ. ಶೂನ್ಯವು ಎಲ್ಲವನ್ನೂ ಒಳಗೊಂಡಿದೆ ಎಂಬ ಸಿದ್ಧಾಂತವನ್ನೂ ಕೂಡ ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ.

ಮನುಷ್ಯನ ಬದುಕು ಮಾತ್ರ ಮುಖ್ಯ. ಅದರಲ್ಲೂ ಮೇಲ್ವರ್ಗದ ಮತ್ತು ಮೇಲ್ಜಾತಿಯ ಜನರ ಬದುಕೇ ಮುಖ್ಯ ಎಂಬ ವಾದ ಈ ಭೂಮಿಯನ್ನು ಬಹುಬೇಗ ನಶ್ವರತೆಯ ಕಡೆಗೆ ಕೊಂಡೊಯ್ಯುವುದು. ಜಗತ್ತಿನ ಎಲ್ಲವೂ ನಮ್ಮ ಬಂಧು-ಬಳಗ ಎಂದಾಗ ಎಲ್ಲವರ

ಬಗ್ಗೆಯೂ ಜೀವಕಾರುಣ್ಯ ಉಕ್ಕುವುದು. ಮನಸ್ಸು ಉದಾತ್ತವಾಗುವುದು. ಗುಣಾತ್ಮಕವಾದ ಚೇತನ ತರಂಗಗಳು ನಮ್ಮನ್ನು ಉನ್ನತ ವಿಚಾರಗಳಿಂದ ಕೂಡಿದ ಸರಳ ಬದುಕಿನ ಕಡೆಗೆ ಕರೆದೊಯ್ಯುವವು.

"ಪರಶಿವನ ಚಿತ್ಕರಣಂಗಳು ಈ ಜಗತ್ತಿನ ಶಿರೋಮಧ್ಯಕ್ಕೆ ಬಿಂಬಿಸಿ, ಅದಕ್ಕೆ ಚೈತನ್ಯಗೊಳಿಸಿದಲ್ಲಿ ಅದೇ ಪರಮಾತ್ಮನಾಯಿತ್ತು" ಎಂದು ಹಡಪದ ಅಪ್ಪಣ್ಣನವರು ಹೇಳುತ್ತಾರೆ. ಹೀಗೆ ಚೈತನ್ಯ ತರಂಗಗಳ ಜೊತೆ ಇರುವುದೆಂದರೆ ಪರಮಾತ್ಮನ ತರಂಗಗಳ ಜೊತೆ ಇರುವುದು ಎಂದರ್ಥ.

"ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ."

ಎಂದು ಬಸವಣ್ಣನವರು ಹೇಳುತ್ತಾರೆ. ಶಿವನು ಮಂಗಳಕರವಾಗಿದ್ದಾನೆ. ಆ ಮಂಗಳಕರವಾದುದಕ್ಕೆ ಬಸವಣ್ಣ ಚೈತನ್ಯವಾಗಿದ್ದಾರೆ. ಇಂಥ ಮಹಾನುಭಾವಿಗಳು, ಪ್ರವಾದಿಗಳ ಮತ್ತು ದಾರ್ಶನಿಕರೆಲ್ಲರ ಚೇತನ ತರಂಗಗಳ ಜೊತೆ ಬದುಕುವುದೇ ನಮಗೆ ಯೋಗ್ಯವಾದುದಾಗಿದೆ. ಇಂಥ ಚೇತನದ ಮೂಲಕ ನಮಗೆ ವಸ್ತುವಿನ ಅನುಭವವುಂಟಾಗುವುದು ಮತ್ತು ವಸ್ತುವಿನೊಳಗೆ ಚೈತನ್ಯಮಯವಾಗಿರುವ ಪರವಸ್ತುವಿನ ಅನುಭಾವವಾಗುವುದು. ಅವೆರಡೂ ಅಭೇದ್ಯವೆಂಬುದರ ಅರಿವಾಗುವುದು. ವಸ್ತುಸ್ವರೂಪಿಗಳಾದ ನಾವೆಲ್ಲ ಅನುಭಾವದ ಲೋಕದಲ್ಲಿ ಚೈತನ್ಯ ಸ್ವರೂಪಿಗಳಾಗಲು ಸಾಧ್ಯವೆಂಬುದನ್ನು ಬಸವಣ್ಣನವರ ಬದುಕಿನ ಪರಿಯಿಂದ ಅರ್ಥ ವಾಗುವುದು.

"ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮ ಎಂದಾಯಿತು.
ಪರಮಾತ್ಮನೆ ಲಿಂಗ, ಜೀವಾತ್ಮನೆ ಅಂಗ, ಸಂಗವೆ ಏಕಾತ್ಮ.
ತತ್ ಪದವೆ ಪರಮಾತ್ಮ ತ್ವಂ ಪದವೆ ಜೀವಾತ್ಮ
ಅಸಿ ಪದವೆ ತಾದಾತ್ಮ್ಯವಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ"

ಎಂದು ಉರಿಲಿಂಗಪೆದ್ದಿಗಳು ಹೇಳುವಲ್ಲಿ ಸಂಗ ಶಬ್ದ ಮಹತ್ವವನ್ನು ಪಡೆಯುತ್ತದೆ. ಅದು ತಾದಾತ್ಮ್ಯದಿಂದ ಬರುವಂಥದ್ದು. ಚೇತನ ತರಂಗಗಳು ನಮ್ಮನ್ನು ಇಂಥ ತಾದಾತ್ಮ್ಯದ ಕಡೆಗೆ ಒಯ್ಯುವ ಶಕ್ತಿಯನ್ನು ಪಡೆದಿವೆ.

"ಪುಣ್ಯಪಾಪವೆಂಬ ಉಭಯಕರ್ಮವನಾರು ಬಲ್ಲರಯ್ಯಾ? ಇವನಾರುಂಬರು?
ಕಾಯ ತಾನುಂಬಡೆ ಕಾಯ ತಾ ಮಣ್ಣು
ಜೀವ ತಾನುಂಬಡೆ ಜೀವ ತಾ ಬಯಲು
ಈ ಉಭಯನಿರ್ಣಯವ ಕೂಡಲಸಂಗಮದೇವಾ
ನಿಮ್ಮ ಶರಣ ಬಲ್ಲ"

ಎಂದು ಬಸವಣ್ಣನವರು ಹೇಳುವಲ್ಲಿ ಪುಣ್ಯಪಾಪಗಳು ಕಾಯ ಮತ್ತು ಜೀವಕ್ಕೆ ತಟ್ಟುವಂಥವಲ್ಲ

ಎಂಬುದರ ಅರಿವಾಗುವುದು. ಪುಣ್ಯದ ಆಸೆ ಮತ್ತು ಪಾಪದ ಭಯದಿಂದ ನಾವು ಒಳ್ಳೆಯವರಾಗಬೇಕಿಲ್ಲ. ಏಕೆಂದರೆ ಇವೆರಡೂ ನಮ್ಮ ದೇಹ ಮತ್ತು ಜೀವಕ್ಕೆ ತಟ್ಟುವಂಥವು ಗಳಲ್ಲ. ಇವೆಲ್ಲವನ್ನು ಮೀರಿ ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವುದರ ಕಡೆಗೆ ನಾವು ಸಾಗುತ್ತಿರಬಲೇಕು. ಆ ಮೂಲಕ ಉರಿಲಿಂಗಪೆದ್ದಿಗಳು ಹೇಳಿದಂತೆ ತಾದಾತ್ಮ್ಯದೊಂದಿಗೆ ಸಂಗದಲ್ಲಿ ಏಕಾತ್ಮವಾಗಬೇಕು. ಚೇತನ ತರಂಗಗಳು ನಮಗೆ ಇಂಥ ಏಕಾತ್ಮದ ದಿವ್ಯಾನಂದದ ಕಡೆಗೆ ಒಯ್ಯುವಂಥವು.

ಚೇತನ ತರಂಗಗಳ ಮೂಲಕ ಜಗತ್ತಿನ ಮಾನವರೆಲ್ಲರಲ್ಲಿ ಇಂಥ ಏಕಾತ್ಮದ ಪ್ರಜ್ಞೆ ಮೂಡಿಸುವುದೇ ಬಸವಣ್ಣನವರ ಬದುಕಿನ ಗುರಿಯಾಗಿತ್ತು. ಇದೇ ಬಸವಧರ್ಮದ ವಿಶ್ವಸಂದೇಶದ ಜೀವಾಳವಾಗಿದೆ.

ಬಸವಧರ್ಮದ ವಿಶ್ವಸಂದೇಶವನ್ನು ವಿಶ್ವಕ್ಕೆ ತಲುಪಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡಬೇಕಿದೆ. ಎಲ್ಲ ಮಾನವೀಯ ಧರ್ಮಗಳ ಸಾರದಲ್ಲಿ ಬಸವಧರ್ಮದ ಸಾರವು ಅದ್ವೈತವಾಗಿದೆ ಎಂಬ ಸತ್ಯವನ್ನು ಈ ಜಗತ್ತು ಅರಿಯುವುದು ಅವಶ್ಯವಾಗಿದೆ. ಆ ಮೂಲಕ ಮಾನವರೆಲ್ಲ ಒಂದು ಮತ್ತು ವಿಶ್ವಧರ್ಮಗಳೆಲ್ಲ ಒಂದು ಎಂಬ ಭಾವನೆಯನ್ನು ಮೂಡಿಸಬೇಕಾಗಿದೆ. ವಿಶ್ವಚೇತನದ ತರಂಗಗಳು ಇಂಥ ಭಾವಸಾಗರದಲ್ಲಿಯ ಸೃಷ್ಟಿಯಾಗುತ್ತವೆ ಮತ್ತು ಮಾನವಕುಲವನ್ನು ಒಂದುಮಾಡುತ್ತವೆ.

○

ಮಾನವ ಹಕ್ಕುಗಳು ಮತ್ತು ಬಸವತತ್ವ

ಎರಡನೇ ಮಹಾಯುದ್ಧದಲ್ಲಿ ಐದು ಕೋಟಿ ಜನರ ಮಾರಣಹೋಮ ನಡೆಯಿತು. ಇದೇ ಸಂದರ್ಭದಲ್ಲಿ ಯುದ್ಧಗಳನ್ನು ಶಮನ ಮಾಡುವ ಮುಖ್ಯ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ವಿಶ್ವಸಂಸ್ಥೆ ಅಂತರ್ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಮೂಡಿಸುವಂಥ "ವಿಶ್ವಸಂಸ್ಥೆ ಘೋಷಣೆಯನ್ನು ೧೯೪೫ನೇ ಅಕ್ಟೋಬರ್ ೨೪ರಂದು ಅಂಗೀಕರಿಸಿತು. ಅದಕ್ಕೆ "ಚಾರ್ಟರ್ ಆಫ್ ದಿ ಯುನೈಟೆಡ್ ನೇಷನ್ಸ್" ಎಂದು ಕರೆಯುತ್ತಾರೆ.

೧೯೪೮ನೇ ಡಿಸೆಂಬರ್ ೧೦ರಂದು ವಿಶ್ವಸಂಸ್ಥೆಯು "ಮಾನವ ಹಕ್ಕುಗಳ ಜಾಗತಿಕ ಘೋಷಣೆ" (ಯೂನಿವರ್ಸಲ್ ಡಿಕ್ಲೇರೇಷನ್ ಆಫ್ ಹ್ಯೂಮನ್ ರೈಟ್ಸ್)ಯನ್ನು ಅಂಗೀಕರಿಸಿದ್ದು ಮಾನವ ಇತಿಹಾಸದ ಮಹತ್ವದ ಕ್ಷಣಗಳಲ್ಲಿ ಒಂದಾಗಿದೆ. ಮಾನವಕುಲದ ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಸಿದ ಮೊದಲ ಅಂತರ್ರಾಷ್ಟ್ರೀಯ ಪ್ರಯತ್ನ ಇದಾಗಿದೆ. ಎಲ್ಲ ದೇಶಗಳ ಜನಸಮುದಾಯಗಳನ್ನು ಮಾನವ ಘನತೆಯೊಂದಿಗೆ ಬೆಸೆಯುವ ಘೋಷಣೆ ಇದು.

೨೦ನೇ ಶತಮಾನದಲ್ಲಿ ಎರಡು ಮಹಾಯುದ್ಧಗಳ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ ಅಸ್ತಿತ್ವಕ್ಕೆ ಬಂದರೆ, ೧೨ನೇ ಶತಮಾನದಲ್ಲಿ ಬಸವತತ್ತ್ವವು ಮಾನವ ಹಕ್ಕುಗಳನ್ನು ಎತ್ತಿಹಿಡಿದ ನಂತರ ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡವಾಯಿತು!

ಮಹಿಳೆಯರು, ದಲಿತರು ಮತ್ತು ಕಾಯಕಜೀವಿಗಳ ಹಕ್ಕುಗಳನ್ನು ಬಸವಣ್ಣನವರ ಮಾನವ ಹಕ್ಕುಗಳು ಒಳಗೊಂಡಿವೆ. ಮಹಿಳೆಯರ, ಕಾರ್ಮಿಕರ ಮತ್ತು ಕರಿಯರ ಹಕ್ಕುಗಳ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಾರಿಗೂ ಕನಸುಗಳು ಕೂಡ ಬೀಳದ ೧೨ನೇ ಶತಮಾನದಲ್ಲಿ ಜಗಜ್ಯೋತಿ ಬಸವೇಶ್ವರರು ಈ ಎಲ್ಲರ ಹಕ್ಕುಗಳ ಬಗ್ಗೆ ಮಾತನಾಡಿದ್ದು ವಿಶ್ವದ ಇತಿಹಾಸದ ಪುಟಗಳಲ್ಲಿ ಸೇರಬೇಕಿದೆ. ಮಾನವ ಹಕ್ಕುಗಳನ್ನು ಅಹಿಂಸಾ ಹೋರಾಟದ ಮೂಲಕ ಸಾಧಿಸಬೇಕಾಗುವ ಕಲೆಯನ್ನು ಬಸವಣ್ಣನವರು ಕಲಿಸಿಕೊಟ್ಟಿದ್ದಾರೆ. ಬಸವ ತತ್ತ್ವಗಳನ್ನು ವಿಶ್ವಕ್ಕೆ ತಿಳಿಸುತ್ತ ಎಲ್ಲ ರೀತಿಯ ಕ್ರೌರ್ಯಗಳಿಂದ ಮಾನವ ಜನಾಂಗವನ್ನು ರಕ್ಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ರೂಸೋನ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವದ ಘೋಷಣೆಯು ಫ್ರೆಂಚ್ ಕ್ರಾಂತಿಗೆ ಕಾರಣವಾಯಿತು. ಆದರೆ ಅದೇ ರೂಸೋ ೧೭೬೨ರಲ್ಲಿ "ಮೌಢ್ಯವು ಮಹಿಳೆಯರಿಗೆ ಸಂಪೂರ್ಣ ಲಾಭದಾಯಕವಾಗಿದೆ" ಎಂದು ಪ್ರತಿಪಾದಿಸಿದ. "ಅವರು

ರಾಜಕೀಯದಲ್ಲಿ ಇರಬಾರದು" ಎಂದು ಕೂಡ ಹೇಳಿದ! ಹೀಗೆ ಜಗತ್ತಿನ ಎಲ್ಲೆಡೆ ಪುರುಷ ಪ್ರಧಾನವಾದ ಸಮಾಜಗಳಲ್ಲಿ ಮಹಿಳೆಯರು ಪುರುಷರ ಅಡಿಯಾಳಾಗುತ್ತಲೇ ಬಂದಿದ್ದಾರೆ.

ಫ್ರೆಂಚ್ ಕ್ರಾಂತಿಯ ನಂತರ ೧೭೮೯ರಲ್ಲಿ ನಾಗರಿಕ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿದಾಗ ಮಹಿಳೆಯರ ಕುರಿತ ರೂಸೋನ ವಿಚಾರಗಳನ್ನು ಆ ಘೋಷಣೆಯಲ್ಲಿ ಸೇರ್ಪಡೆ ಮಾಡಲಾಯಿತು! ಮಹಿಳೆಯರ ಮತ್ತು ಗುಲಾಮರ ಹಕ್ಕುಗಳ ಬಗ್ಗೆ ಮಾತನಾಡದ ಈ ಘೋಷಣೆ ಅಪೂರ್ಣವಾಯಿತು. ಇತಿಹಾಸದ ಬಹುಮುಖ್ಯ ಕ್ರಾಂತಿಗಳಲ್ಲಿ ಒಂದಾದ ಫ್ರೆಂಚ್‌ಕ್ರಾಂತಿ ಮೇಲ್ವರ್ಗದ ಪುರುಷಪ್ರಧಾನ ಕ್ರಾಂತಿಯಾಗಿ ಮಾರ್ಪಟ್ಟಿತು.

ನಂತರ ಅಮೆರಿಕದ ಸ್ವಾತಂತ್ರ್ಯ ಘೋಷಣೆ ಕೂಡ ಮೇಲ್ವರ್ಗದ ಪುರುಷ ಪ್ರಧಾನವಾದ ಘೋಷಣೆಯಾಯಿತು. ಈ ಘೋಷಣೆಯಲ್ಲಿ ಎತ್ತಿಹಿಡಿದ ಸ್ವಾತಂತ್ರ್ಯ ಮತ್ತು ಸಮಾನತೆ ಶ್ರೀಮಂತ ಪುರುಷರಿಗಾಗಿ ಮಾತ್ರ ಇದ್ದವು. ಮಹಿಳೆಯರು, ಗುಲಾಮರು ಮತ್ತು ಆಸ್ತಿ ಇಲ್ಲದವರು ಈ ಹಕ್ಕುಗಳಿಂದ ವಂಚಿತರಾಗಿದ್ದರು.

"ವಿಶ್ವಸಂಸ್ಥೆಯ ಘೋಷಣೆ" ಅಂಗೀಕಾರದ ಸಂದರ್ಭದಲ್ಲಿ ಕೂಡ ಮಹಿಳೆಯರ ಹಕ್ಕುಗಳು ಮತ್ತು ಲಿಂಗ ತಾರತಮ್ಯದ ಕುರಿತು ಮೌನ ತಾಳಲಾಗಿತ್ತು. ಆಗ ಮಹಿಳಾ ಪ್ರತಿನಿಧಿಗಳು ಈ ಮೌನದ ವಿರುದ್ಧ ಪ್ರತಿಭಟನೆ ಮಾಡಿದರು. ಲಿಂಗಭೇದವಿಲ್ಲದ ಮಾನವ ಹಕ್ಕುಗಳಿಗಾಗಿ ಒತ್ತಾಯಿಸಿದರು. ತದನಂತರವೆ ಲಿಂಗಭೇದವಿಲ್ಲದ ಮಾನವ ಹಕ್ಕುಗಳ ವಿಚಾರವನ್ನು ವಿಶ್ವಸಂಸ್ಥೆಯ ಘೋಷಣೆಯಲ್ಲಿ ಸೇರಿಸಲಾಯಿತು. ಪುರುಷ ಮತ್ತು ಮಹಿಳೆಯರ ಮಧ್ಯೆ ಸಮಾನತೆ ಸಾರುವ ವಿಶ್ವದ ಮೊದಲ ಘೋಷಣೆ ಇದಾಯಿತು. ತದನಂತರ ಬಂದ "ಮಾನವ ಹಕ್ಕುಗಳ ಜಾಗತಿಕ ಘೋಷಣೆ" ಸಂದರ್ಭದಲ್ಲಿ ಕೂಡ ಮಹಿಳೆಯರನ್ನು ಮರೆಯಲಾಗಿತ್ತು. ಆಗ ಮಹಿಳಾ ಪ್ರತಿನಿಧಿಗಳು ಪ್ರತಿಭಟನೆ ಮಾಡಿದರು. ಆ ಕಾರಣದಿಂದಲೇ "ಮಾನವಹಕ್ಕುಗಳ ಜಾಗತಿಕ ಘೋಷಣೆ" ಲಿಂಗತಾರತಮ್ಯವಿಲ್ಲದ ಘೋಷಣೆಯಾಯಿತು. ಹೀಗೆ ಆಧುನಿಕ ಸಮಾಜ, ಮಹಿಳೆಯರ ಹಕ್ಕುಗಳನ್ನು ಅಂಗೀಕರಿಸಲು ಒದ್ದಾಡುತ್ತಿದೆ. ಆದರೆ ಬಸವಣ್ಣನವರು "ಶರಣಸತಿ ಲಿಂಗಪತಿ" ಘೋಷಣೆ ಮೂಲಕ ಲಿಂಗತಾರತಮ್ಯವನ್ನು ಆಧ್ಯಾತ್ಮಿಕವಾಗಿಯೂ ನಿವಾರಿಸಿದರು. ಕಾಯಕದ ಘೋಷಣೆಯೊಂದಿಗೆ ಯಾವುದೇ ಕಾಯಕ ಕೀಳಲ್ಲ ಎಂಬ ಅರಿವು ಮೂಡಿಸಿದರು. ಮಾನವನು ಅಹಂಕಾರದಿಂದ ಮುಕ್ತನಾದಾಗ ಮಾತ್ರ ಸಮಾಜವು ಎಲ್ಲ ರೀತಿಯ ಕೊರತೆ ಮತ್ತು ಹಿಂಸೆಯಿಂದ ಮುಕ್ತವಾಗುವುದೆಂಬುದನ್ನು ದಾಸೋಹದ ಘೋಷಣೆಯೊಂದಿಗೆ ತೋರಿಸಿಕೊಟ್ಟರು.

ಹೆಣ್ಣಿರಲಿ-ಗಂಡಿರಲಿ, ಬಡವನಿರಲಿ-ಶ್ರೀಮಂತನಿರಲಿ, ಸವರ್ಣೀಯನಿರಲಿ- ಅಸ್ಪೃಶ್ಯ ನಿರಲಿ ಜಗತ್ತಿನ ಜನರೆಲ್ಲ ದೇವರ ಚೈತನ್ಯದಿಂದ ಕೂಡಿದವರು ಎಂಬುದನ್ನು ಜಂಗಮಲಿಂಗದ ಘೋಷಣೆಯ ಮೂಲಕ ಎತ್ತಿಹಿಡಿದರು. ಯಾವುದೇ ರೀತಿಯ ಅಸಮಾನತೆ ಕೃತ್ರಿಮವಾದುದೆಂದು ಸಾರಿದರು. ಹೀಗಾಗಿ ಬಸವಣ್ಣನವರ ಶರಣ ಸಂಕುಲದಲ್ಲಿ ಅಸ್ಪೃಶ್ಯರು, ಮಹಿಳೆಯರು, ಬಡವರು ಮತ್ತು ಎಲ್ಲ ಕಾಯಕಜೀವಿಗಳು ಸರ್ವಸಮಾನತೆಯನ್ನು ಅನುಭವಿಸಿದರು.

ಬ್ರಾಹ್ಮಣ ಮಧುವರಸರು ಶರಣರಾಗುವ ಮೂಲಕ ಮೇಲ್ಜಾತಿಯ ಅಹಂಕಾರದಿಂದ ಮುಕ್ತರಾಗಿದ್ದರು. ಸಮಗಾರ ಹರಳಯ್ಯನವರು ಶರಣರಾಗುವ ಮೂಲಕ ಕೆಳಜಾತಿಯ ಕೀಳರಿಮೆಯಿಂದ ಮುಕ್ತರಾಗಿದ್ದರು. ಹೀಗೆ ವಿವಿಧ ಜಾತಿಗಳ ಸಂಕರವಾದಂಥ ಶರಣಸಂಕುಲ ಎಲ್ಲ ರೀತಿಯ ಅಸಮಾನತೆಯನ್ನು ಮೆಟ್ಟಿನಿಂತು ಮಾನರ ಹಕ್ಕುಗಳ ಧ್ವಜವನ್ನು ಹಾರಿಸಿದ ಸಮಾಜವಾಗಿತ್ತು. ಇಲ್ಲಿ ಎಲ್ಲರೂ ತಮ್ಮ ಮತ್ತು ಇತರರ ಜಾತಿಗಳನ್ನು ಮನಸ್ಸಿನಿಂದ ಅಳಿಸಿಹಾಕಿ ಕಾಯಕ ಉಳಿಸಿಕೊಂಡಿದ್ದರು. ಗಂಡ ಮತ್ತು ಹೆಂಡಂದಿರಲ್ಲಿ ಮೇಲುಕೀಳಿನ ಅನುಚರ ಭಾವ ಹೋಗಿ ಸಮಾನತೆಯ ಸಹಚರ ಭಾವ ಮೂಡಿತ್ತು. ಹೀಗೆ ವರ್ಗ, ವರ್ಣ, ಜಾತಿ, ಕುಲ, ಕಾಯಕ ಮತ್ತು ಲಿಂಗಭೇದಗಳಿಲ್ಲದೆ ಎಲ್ಲರನ್ನು ಒಂದಾಗಿಸಿ ಸಮಾನತೆ ಸಾಧಿಸಿದ್ದು ಮಾನವ ಇತಿಹಾಸದ ಬಹುಮುಖ್ಯ ಘಟನೆಗಳಲ್ಲಿ ಒಂದಾಗಿದೆ.

ಮಾನವ ಹಕ್ಕುಗಳ ಜಾಗತಿಕ ಘೋಷಣೆಯ ಎಲ್ಲ ೩೦ ಅಂಶಗಳನ್ನು ಕೆಳಗೆ ಕೊಡಲಾಗಿದ್ದು ಆವರಣದಲ್ಲಿ ಬಸವತತ್ತ್ವದ ವಿಚಾರಗಳನ್ನು ತಿಳಿಸಲಾಗಿದೆ.

೧. ಎಲ್ಲ ಮಾನವರು ಹುಟ್ಟಿನಿಂದಲೇ ಸ್ವತಂತ್ರರು ಮತ್ತು ಘನತೆ ಹಾಗೂ ಹಕ್ಕುಗಳಲ್ಲಿ ಸಮಾನರು.

(“ಕೂಡಲಸಂಗನ ಶರಣರು ಸ್ವತಂತ್ರಧೀರರು” ಎಂದು ಬಸವಣ್ಣನವರು ತಿಳಿಸಿದ್ದಾರೆ. “ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ನೋಡಾ ಕೂಡಲ ಸಂಗಮದೇವಾ” ಎಂದು ಹೇಳುವ ಮೂಲಕ ಮಾನವ ಘನತೆಯನ್ನು ಎತ್ತಿ ಹಿಡಿದಿದ್ದಾರೆ.)

೨. ಮಾನವ ಹಕ್ಕುಗಳ ಘೋಷಣೆಯಲ್ಲಿನ ಎಲ್ಲ ಹಕ್ಕುಗಳು ಮತ್ತು ಸ್ವಾತಂತ್ರ್ಯ ಎಲ್ಲರಿಗೂ ಸಮಾನವಾಗಿವೆ.

(‘ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ’ ಎಂದು ಬಸವಣ್ಣನವರು ಹೇಳಿದ್ದಾರೆ. “ಕುದುರೆ ಸತ್ತಿಗೆಯವರು ಕಂಡಡೆ ಹೊರಳಿ ಬಿದ್ದುಕಾಲ ಹಿಡಿವರು; ಬಡಭಕ್ತರು ಬಂದಡೆ ಎಡೆಯಿಲ್ಲ ಅತ್ತ ಸನ್ನಿ ಎಂಬರು” ಎಂದು ಸಾತ್ವಿಕ ಕೋಪ ತೋರಿದ್ದಾರೆ.)

೩. ಪ್ರತಿಯೊಬ್ಬನಿಗೂ ಬದುಕುವ, ಸ್ವತಂತ್ರವಾಗಿರುವ ಮತ್ತು ಭದ್ರತೆಯ ಹಕ್ಕಿದೆ.

(“ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ” ಎಂದು ಬಸವಣ್ಣನವರು ತಿಳಿಸಿದ್ದಾರೆ. ಬಸವಣ್ಣನವರು ಭಕ್ತಿಪಕ್ಷವು ಪ್ರತಿಯೊಬ್ಬರಿಗೂ ಬದುಕುವ, ಸ್ವತಂತ್ರವಾಗಿರುವ ಮತ್ತು ಭದ್ರತೆಯ ಹಕ್ಕನ್ನು ಕೊಡುವುದು.)

೪. ಗುಲಾಮಗಿರಿಗೆ ಅವಕಾಶವಿಲ್ಲ

("ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ." ಎಂದು ಬಸವಣ್ಣನವರು ಎಲ್ಲರ ಘನತೆ ಒಂದೇ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.)

೫. ಯಾರ ವಿರುದ್ಧವೂ ಕ್ರೂರವಾಗಿ ನಡೆದುಕೊಳ್ಳುವಂತಿಲ್ಲ. ಅಮಾನುಷ ಶಿಕ್ಷೆ ವಿಧಿಸುವಂತಿಲ್ಲ.

("ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು." ಎಂದು ಬಸವಣ್ಣನವರು ಹೇಳುವುದರ ಮೂಲಕ ಕ್ರೌರ್ಯ ಮತ್ತು ಅಮಾನುಷ ನಡವಳಿಕೆಯನ್ನು ವಿರೋಧಿಸಿದ್ದಾರೆ.)

೬. ಕಾನೂನಿನ ಮುಂದೆ ಪ್ರತಿಯೊಬ್ಬನೂ ವ್ಯಕ್ತಿಯಾಗಿ ಗುರುತಿಸಿಕೊಳ್ಳುವ ಹಕ್ಕನ್ನು ಪಡೆದಿರುತ್ತಾನೆ.

(ಶರಣರು ಈ ಹಕ್ಕಿನ ಪರವಾಗಿದ್ದರು. ಆದರೆ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಗೆ ಸಂಬಂಧಿಸಿದಂತೆ ಅವರಿಗೆ ತಮ್ಮ ವಿಚಾರ ವ್ಯಕ್ತಪಡಿಸಲು ಅವಕಾಶ ಕೊಡದೆ ಚಿತ್ರಹಿಂಸೆ ನೀಡಲಾಯಿತು.)

೭. ಕಾನೂನಿನ ಮುಂದೆ ಎಲ್ಲರೂ ಒಂದೆ.

("ನ್ಯಾಯ ನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ" ಎಂದು ಹೇಳುವುದರ ಮೂಲಕ ಬಸವಣ್ಣನವರು ಕಾನೂನಿನ ಮುಂದೆ ಎಲ್ಲರೂ ಒಂದೇ ಎಂಬುದನ್ನು ಸಾರಿದ್ದಾರೆ.)

೮. ತನ್ನ ಮೂಲಭೂತ ಹಕ್ಕುಗಳ ಪ್ರಕಾರ ನ್ಯಾಯ ಕೇಳುವ ಹಕ್ಕು ಪ್ರತಿಯೊಬ್ಬನಿಗೆ ಇದೆ.

("ಆನೀ ಬಿಜ್ಜಳಂಗಂಜುವೆನೆ ಅಯ್ಯಾ? ಕೂಡಲಸಂಗಮದೇವಾ" ಎಂದು ಬಸವಣ್ಣನವರು ಪ್ರಧಾನಿಯಾಗಿ ಅರಸ ಬಿಜ್ಜಳನ ಬಗ್ಗೆ ಹೇಳುತ್ತ ತಮ್ಮ ಹಕ್ಕಿನ ಪ್ರತಿಪಾದನೆ ಮಾಡಿದ್ದಾರೆ).

೯. ಯಾರನ್ನೂ ಮನಸ್ಸಿಗೆ ಬಂದಂತೆ ಬಂಧಿಸಲಿಕ್ಕಾಗದು.

(ಶೀಲವಂತ ಮತ್ತು ಲಾವಣ್ಯವತಿಯರ ವಿವಾಹದ ಕಾರಣ ಬಿಜ್ಜಳನು ಅವರ ತಂದೆಯಂದಿರಾದ ಸಮಗಾರ ಹರಳಯ್ಯ ಮತ್ತು ಮಧುವರಸರನ್ನು ಬಂಧಿಸಿದನು. ಶರಣತತ್ತ್ವದ ಪ್ರಕಾರ ಅವರಲ್ಲಿ ಜಾತಿಭೇದವಿಲ್ಲ. ಆದರೆ ಬಿಜ್ಜಳ ಒಪ್ಪಿದ ವೈದಿಕ

ತತ್ತ್ವದ ಪ್ರಕಾರ ಅದು ಅಂತರ್ಜಾತೀಯ ವಿವಾಹವಾಗಿತ್ತು. ಹೀಗೆ ಆತ ತನ್ನ ಮನಸ್ಸಿಗೆ ಬಂದಂತೆ ಅಮಾಯಕರನ್ನು ಬಂಧಿಸಿ ಶಿಕ್ಷೆಯನ್ನೂ ವಿಧಿಸಿದ.)

೧೦. ಸ್ವತಂತ್ರನ್ಯಾಯ ಮಂಡಲಿಗಳ ಮೂಲಕ ನ್ಯಾಯ ಪಡೆಯುವ ಹಕ್ಕು ಪ್ರತಿಯೊಬ್ಬರಿಗೆ ಇದೆ.

(ಬಿಜ್ಜಳನು ಶರಣರಿಗೆ ನ್ಯಾಯ ಪಡೆಯುವ ಹಕ್ಕನ್ನು ನಿರಾಕರಿಸಿ ಹಿಂಸೆಗೆ ಒಳಪಡಿಸಿದ ಕಾರಣ ಕಲ್ಯಾಣದಲ್ಲಿ ಹತ್ಯಾಕಾಂಡವಾಯಿತು.)

೧೧. ಆರೋಪಕ್ಕೊಳಗಾದವರು ಯಾರೇ ಇರಲಿ, 'ಅಪರಾಧಿ' ಎಂದು ತೀರ್ಪು ಬರುವವರೆಗೂ ಮುಗ್ಧರು ಎಂದು ಹೇಳುವ ಹಕ್ಕನ್ನು ಹೊಂದಿದ್ದಾರೆ.

(ಈ ಹಕ್ಕು ಶರಣರಿಗೆ ಸಿಗುವಂಥ ನ್ಯಾಯಪದ್ಧತಿ ಬಿಜ್ಜಳನ ರಾಜ್ಯದಲ್ಲಿ ಇರಲಿಲ್ಲ. ಏಕೆಂದರೆ ಆತ ಅನ್ಯಾಯ ಮತ್ತು ಅಸಮಾನತೆಯಲ್ಲಿ ನಂಬಿಕೆ ಇಟ್ಟವರ ಒತ್ತಡಕ್ಕೆ ಮಣಿದಿದ್ದ.)

೧೨. ಯಾರದೇ ಖಾಸಗಿ ಬದುಕಿನಲ್ಲಿ ಕೈ ಹಾಕುವಂತಿಲ್ಲ. ಯಾರ ಘನತೆಗೂ ಕುಂದು ತರುವಂತಿಲ್ಲ.

("ಕೂಡಲಸಂಗಮದೇವಾ ಭಕ್ತರ ಕುಲವನರಸಿದಡೆ ನಿಮ್ಮ ರಾಣಿವಾಸದಾಣೆ!" ಎಂದು ಬಸವಣ್ಣನವರು ಹೇಳುತ್ತಾರೆ.)

೧೩. ಪ್ರತಿಯೊಬ್ಬರಿಗೂ ತಮ್ಮ ದೇಶದಲ್ಲಿ ಮುಕ್ತವಾಗಿ ಸಂಚರಿಸುವ ಹಕ್ಕಿದೆ.

(ಮನುಸ್ಮೃತಿಯ ಪ್ರಕಾರ ಅಸ್ಪೃಶ್ಯರು ಈ ಹಕ್ಕನ್ನು ಕಳೆದುಕೊಂಡಿದ್ದರು. ಬಸವಣ್ಣನವರು "ಜಾತಿಸಂಕರವಾದ ಬಳಿಕ ಕುಲವನರಸುವರೆ" ಎಂದು ಪ್ರಶ್ನಿಸಿ ಎಲ್ಲರಿಗೂ ಮುಕ್ತವಾಗಿ ಸಂಚರಿಸುವ ಹಕ್ಕು ಬರುವಂತೆ ಮಾಡಿದರು.)

೧೪. ತಮ್ಮ ದೇಶದಲ್ಲೇ ಮಾನವಹಕ್ಕುಗಳ ದಮನ ನಡೆದಾಗ ಬೇರೆ ದೇಶಗಳಲ್ಲಿ ಆಶ್ರಯ ಪಡೆಯುವ ಅವಕಾಶವಿದೆ.

(ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡ ನಡೆದ ಸಂದರ್ಭದಲ್ಲಿ ಅನೇಕ ಶರಣರು ನೆರೆಯ ದೇಶಗಳಲ್ಲಿ ಆಶ್ರಯ ಪಡೆದರು.)

೧೫. ಪ್ರತಿಯೊಬ್ಬರಿಗೂ ರಾಷ್ಟ್ರೀಯತೆ ಹಕ್ಕಿದೆ.

(ಇಂದಿನ ರಾಷ್ಟ್ರೀಯತೆಯ ಕಲ್ಪನೆ ಹಿಂದಿನ ಕಾಲದಲ್ಲಿ ಇರದಿದ್ದರೂ ಕಾಶ್ಮೀರದ

ಮಹಾದೇವ ಭೂಪಾಲ (ಮೋಳಿಗೆ ಮಾರಯ್ಯ) ಮುಂತಾದವರು ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಸ್ಥಾನ ಪಡೆದಿದ್ದರು.)

೧೬. ದೇಶ, ಕುಲ ಮತ್ತು ಧರ್ಮಗಳನ್ನು ಮೀರಿ ಮದುವೆ ಮಾಡಿಕೊಳ್ಳುವ ಹಕ್ಕಿದೆ.

(ಈ ಪಕ್ಕನ್ನು ಶರಣರು ಚಲಾಯಿಸಿದ ಕಾರಣ ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆ ವಿಧಿಸಲಾಯಿತು.)

೧೭. ಪ್ರತಿಯೊಬ್ಬರಿಗೂ ಆಸ್ತಿಯ ಹಕ್ಕಿದೆ.

("ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು" ಎಂದು ಬಸವಣ್ಣನವರು ಹೇಳುತ್ತಾರೆ. ಆಸ್ತಿಯ ಹಕ್ಕಿನೊಂದಿಗೆ ಸಾಮಾಜಿಕ ಜವಾಬ್ದಾರಿಯ ಬಗ್ಗೆಯೂ ತಿಳಿಸುತ್ತಾರೆ.

೧೮. ಪ್ರತಿಯೊಬ್ಬರೂ ವಿಚಾರ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಪಡೆದಿದ್ದಾರೆ.

(ಬಸವಧರ್ಮ ವಿಚಾರ ಸ್ವಾತಂತ್ರ್ಯದ ಮೇಲೆ ನಿಂತಿದೆ. "ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ" ಎಂದು ಬಸವಣ್ಣನವರು ಹೇಳುವಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಸೂಚನೆ ಇದೆ.)

೧೯. ಪ್ರತಿಯೊಬ್ಬರು ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದಿದ್ದಾರೆ.

(ಪ್ರತಿಯೊಬ್ಬ ಶರಣರು ಅನುಭವ ಮಂಟಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅನುಭವಿಸಿದ್ದು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ.)

೨೦. ಪ್ರತಿಯೊಬ್ಬರು ಶಾಂತಿಯುತವಾಗಿ ಸಭೆ ಸೇರುವ ಸ್ವಾತಂತ್ರ್ಯ ಹೊಂದಿದ್ದಾರೆ.

(ಅನುಭವ ಮಂಟಪವು ಶಾಂತಿಯುತವಾಗಿ ಸಭೆ ಸೇರುವ ತಾಣವಾಗಿತ್ತು. ಈ ಸ್ವಾತಂತ್ರ್ಯವನ್ನು ಶರಣರು ತಮ್ಮ ಜವಾಬ್ದಾರಿಯುತ ನಡೆವಳಿಕೆಯಿಂದ ಸಾಧಿಸಿದ್ದರು.)

೨೧. ತಮ್ಮ ದೇಶದ ಸರ್ಕಾರದಲ್ಲಿ ಭಾಗಿಯಾಗುವ ಹಕ್ಕನ್ನು ಪ್ರತಿಯೊಬ್ಬರು ಪಡೆದಿದ್ದಾರೆ.

(ಬಸವಣ್ಣನವರು ಬಿಜ್ಜಳನ ಪ್ರಧಾನಿಯಾಗಿದ್ದರು.)

೨೨. ಪ್ರತಿಯೊಬ್ಬರು ಸಾಮಾಜಿಕ ಭದ್ರತೆಯ ಹಕ್ಕನ್ನು ಪಡೆದಿದ್ದಾರೆ.

(ಶರಣ ಸಂಕುಲದಿಂದಾಗಿ ಶರಣರು ಸಾಮಾಜಿಕ ಭದ್ರತೆ ಹೊಂದಿದ್ದರು.)

೨३. ಪ್ರತಿಯೊಬ್ಬರು ದುಡಿಯುವ ಮತ್ತು ಕಾರ್ಮಿಕ ಸಂಘವನ್ನು ರಚಿಸುವ ಹಕ್ಕನ್ನು ಪಡೆದಿದ್ದಾರೆ.

(ಬಸವಣ್ಣನವರಿಂದಾಗಿ ಕಾಯಕವು ಪ್ರತಿಯೊಬ್ಬರ ವ್ಯಕ್ತಿತ್ವದ ಭಾಗವಾಗಿತ್ತು. ಕಾಯಕಜೀವಿಗಳ ಸಮೂಹವೇ ಶರಣಸಂಕುಲ.)

೨೪. ಪ್ರತಿಯೊಬ್ಬರು ವಿಶ್ರಾಂತಿಯ ಹಕ್ಕನ್ನು ಪಡೆದಿದ್ದಾರೆ.

(ಬಸವಣ್ಣನವರ ಕಾಲದಲ್ಲಿ ಸ್ವತಂತ್ರ ಕಾಯಕವು ಸಹಜವಾಗಿಯೇ ವಿಶ್ರಾಂತಿಯ ಹಕ್ಕನ್ನು ಒದಗಿಸಿತ್ತು.)

೨೫. ಗುಣಮಟ್ಟದ ಬದುಕಿನ ಹಕ್ಕನ್ನು ಪ್ರತಿಯೊಬ್ಬರು ಪಡೆದಿದ್ದಾರೆ.

("ಮನೆ ನೋಡಾ ಬಡವರು; ಮನ ನೋಡಾ ಘನ. ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು. ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕೆ ಉಂಟು, ಕೂಡಲಸಂಗನ ಶರಣರು ಸ್ವತಂತ್ರಧೀರರು." ಎಂದು ಬಸವಣ್ಣನವರು ಶರಣರ ಘನತೆವೆತ್ತ ಸರಳ ಬದುಕನ್ನು ಕೊಂಡಾಡುತ್ತಾರೆ.)

೨೬. ಪ್ರತಿಯೊಬ್ಬರಿಗೂ ಶಿಕ್ಷಣ ಪಡೆಯುವ ಹಕ್ಕಿದೆ.

(ಎಲ್ಲ ಕಾಯಕಜೀವಿಗಳು ವಚನ ರಚನೆ ಮಾಡುವ ಸಾಮರ್ಥ್ಯದ ಶಿಕ್ಷಣವನ್ನು ಪಡೆಯುವ ವ್ಯವಸ್ಥೆಯನ್ನು ಬಸವಣ್ಣನವರು ಮಾಡಿದ್ದರು.)

೨೭. ಸಮಾಜದ ಸಾಂಸ್ಕೃತಿಕ ಬದುಕಿನಲ್ಲಿ ಪಾಲ್ಗೊಳ್ಳುವ ಹಕ್ಕು ಪ್ರತಿಯೊಬ್ಬರಿಗೂ ಇದೆ.

(ಜಾತಿ ಮತಗಳನ್ನು ಮೀರಿದ ಶರಣರು ಹೊಸ ಸಮಾಜದ ಸಂಸ್ಕೃತಿಯನ್ನು ನಿರ್ಮಿಸಿ ಇತಿಹಾಸ ಸೃಷ್ಟಿಸಿದರು.)

೨೮. ಮಾನವ ಹಕ್ಕುಗಳ ಜಾಗತಿಕ ಘೋಷಣೆ ಪ್ರಕಾರ ಸಾಮಾಜಿಕ ಮತ್ತು ಅಂತರ್‍ರಾಷ್ಟ್ರೀಯ ವ್ಯವಸ್ಥೆಯನ್ನು ಬಯಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ.

(ಶರಣರು ತಮ್ಮ ಈ ಸರ್ವಸಮಾನತೆಯ ಸಮಾಜ ಲೋಕದಲ್ಲಿ ಹಬ್ಬಲಿ ಎಂದು ಆಶಿಸಿದ್ದರು. ಆ ಕಾಲದ ಬೇರೆ ಬೇರೆ ದೇಶಗಳ ಜನ ಕಲ್ಯಾಣಕ್ಕೆ ಬಂದು ಶರಣ ಜೀವನ ಸಾಗಿಸಿದರು.)

೨೯. ಸಮಾಜಕ್ಕೆ ಸೇವೆ ಸಲ್ಲಿಸುವ ಕರ್ತವ್ಯ ಪ್ರತಿಯೊಬ್ಬರದಾಗಿದೆ.

(ಶರಣರು ದಾಸೋಹದಮೂಲಕ ಸಮಾಜ ಸೇವೆಯ ಕರ್ತವ್ಯ ಪಾಲನೆ ಮಾಡಿದರು.)

೩೦. ಮೇಲೆ ತಿಳಿಸಿದ ಮಾನವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಹಾಳುಮಾಡುವಂಥ ವ್ಯಾಖ್ಯಾನ ಮಾಡಬಾರದು.

(ಶರಣರು ತಮ್ಮ ಬಲಿದಾನ ಮಾಡಿದರೆ ಹೊರತು, ತಮ್ಮ ತತ್ವಗಳಿಂದ ವಿಮುಖರಾಗಲಿಲ್ಲ.)

ಹೀಗೆ ಬಸವಾದಿ ಪ್ರಮಥರು ೧೨ನೇ ಶತಮಾನದಲ್ಲೇ ಮಾನವ ಹಕ್ಕುಗಳ ಪ್ರತಿಪಾದಕರಾಗಿ ಕಂಗೊಳಿಸುತ್ತಿದ್ದಾರೆ. ಅವರ ಅಭೂತಪೂರ್ವ ಸಾಧನೆ ಇದಾಗಿದೆ. ಈ ವಿಚಾರಗಳು ಪಾಶ್ಚಿಮಾತ್ಯ ಜಗತ್ತಿಗೆ ಹೊಳೆಯಲು ೨೦ನೇ ಶತಮಾನದವರೆಗೆ ಕಾಯಬೇಕಾಯಿತು. ಅಲ್ಲದೆ ಎರಡು ಮಹಾಯುದ್ಧಗಳನ್ನು ಎದುರಿಸಬೇಕಾಯಿತು.

ಭಾರತದ ಸಂವಿಧಾನ ಕೂಡ ಈ ಮಾನವ ಹಕ್ಕುಗಳ ಅಂಶಗಳನ್ನು ಒಳಗೊಂಡಿರುವುದರಿಂದ ಬಸವಣ್ಣನವರ ವಚನಗಳು ಭಾರತದ ಸಂವಿಧಾನದ ಜೀವಾಳವಾಗಿದೆ. ಬಸವಣ್ಣನವರ ವಚನಗಳಂತೆ ನಡೆದರೆ ಅಂತರ್ರಾಷ್ಟ್ರೀಯ ಮಟ್ಟದ ಮಾನವ ಹಕ್ಕುಗಳನ್ನು ಮತ್ತು ನಮ್ಮ ದೇಶದ ಸಂವಿಧಾನವನ್ನು ಏಕಕಾಲಕ್ಕೆ ಗೌರವಿಸಿದಂತಾಗುತ್ತದೆ. ಬಸವಣ್ಣನವರ ವಚನಗಳಿಗೆ ವಿರುದ್ಧವಾಗಿ ನಡೆದರೆ ಸಂವಿಧಾನಬಾಹಿರ ಕೃತ್ಯವಾಗುತ್ತದೆ. ಅಲ್ಲದೆ ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳಿಗೆ ಅವಮಾನ ಮಾಡಿದಂತಾಗುತ್ತದೆ. ಕಲ್ಯಾಣ ಹತ್ಯಾಕಾಂಡಕ್ಕೆ ಕಾರಣವಾದ ಹರಳಯ್ಯ ಮಧುವರಸ ಮಕ್ಕಳ ಮದುವೆಯನ್ನು ಇಂದು ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳು ಮತ್ತು ಭಾರತದ ಸಂವಿಧಾನ ಜೊತೆಯಾಗಿಯೇ ಗೌರವಿಸುತ್ತವೆ.

ಅನುಭವ ಮಂಟಪದ ಮೂಲಕ ಸಂಸದೀಯ ಪ್ರಜಾಪ್ರಭುತ್ವದ ಬೀಜಗಳು ಈ ನೆಲದಲ್ಲಿ ಮೊಳಕೆ ಒಡೆದವು ಮತ್ತು ಮಾನವ ಹಕ್ಕುಗಳ ಹೂಗಳು ಅರಳಿದವು. ಹೀಗೆ ಬಸವಣ್ಣನವರು ಈ ನೆಲದ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಮೂಲಪುರುಷರಾದರು.

○

ಬಸವ ದರ್ಶನ

ಬಾಳತ್ವಕ್ಕೆಂದು ಮಧುವ ತಂದು
ಕೊಡನ ತುಂಬಿದ ಜೇನುಹುಳುವಿನಂತೆ ತಾನುಂಬುದು;
ತನ್ನೆಂಜಲ ಜಗವುಂಬುದು ನೋಡಯ್ಯಾ.
ಶಿವಭಕ್ತನಾಗಿ ಶಿವಾನ್ನವನೇ ಕೊಂಡು,
ಒಕ್ಕಮಿಕ್ಕ ವಸ್ತುವ ಜಂಗಮಕ್ಕಿಕ್ಕುವಾತನೆ ಭಕ್ತ,
ಕೊಂಡಾತನೆ ಜಂಗಮ.
ನಡುವೆ ನೀ ಬಂದು ಭಂಡು ಮಾಡದಿರೈ
ಕೂಡಲಸಂಗಮದೇವಾ.

ಜೀವನ ಮತ್ತು ಬಾಳುವೆಯ ಮಧ್ಯದ ಸೂಕ್ಷ್ಮತೆಯನ್ನು ಅರಿತುಕೊಳ್ಳುವವರೆಗೂ ಮಾನವನ ಬದುಕು ದುಃಖದಿಂದ ತುಂಬಿರುತ್ತದೆ. ಜೀವನವು ವೈಯಕ್ತಿಕವಾದ ಐಹಿಕ ಆಸೆಗಳ ಮೇಲೆ ನಿಂತಿದ್ದರೆ ಬಾಳುವೆಯು ಸಾಮೂಹಿಕ ಹೊಣೆಗಾರಿಕೆಯ ಮೇಲೆ ನಿಂತಿರುತ್ತದೆ. ಜನರು ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸುವುದರ ಮೂಲಕ ತಮ್ಮ ಜೀವನವನ್ನು ಸಾರ್ಥಕಗೊಳಿಸುವಂತೆ ಮಾಡುವುದೇ ಬಸವಧರ್ಮದ ಗುರಿಯಾಗಿದೆ. ಇಷ್ಟಲಿಂಗದ ಮೂಲಕ ವೈಯಕ್ತಿಕ ಸ್ವಾತಂತ್ರ್ಯ, ಜಂಗಮಲಿಂಗದ ಮೂಲಕ ಲೋಕಪ್ರಜ್ಞೆ, ಕಾಯಕದ ಮೂಲಕ ಸ್ವಾವಲಂಬನೆ, ದಾಸೋಹದ ಮೂಲಕ ಸಾಮಾಜಿಕ ಜವಾಬ್ದಾರಿ ಬಸವಧರ್ಮದ ಆಧಾರಸ್ತಂಭಗಳಾಗಿವೆ. ದಯೆವಂತರಾಗಿ, ಅರಿವೆಂಬ ಗುರುವಿನಿಂದ ಇವನ್ನೆಲ್ಲ ಅರ್ಥಮಾಡಿಕೊಳ್ಳಬೇಕು. ಈ ಅರಿವು ವ್ಯಕ್ತಿಗತ ಮತ್ತು ಸಾಮೂಹಿಕ ಅನುಭವ ಹಾಗೂ ಗುರು ಸ್ವರೂಪಿ ಜ್ಞಾನಿಗಳ ಮೂಲಕ ಬರುವುದು. ಹೀಗೆ ಬಸವಣ್ಣನವರು ಲೋಕದ ಗುರುವಾಗಿದ್ದಾರೆ. ಈ ವಚನದಲ್ಲಿ ಬಸವಧರ್ಮದ ತತ್ತ್ವಗಳು ಅಡಗಿವೆ.

ಜೇನುಹುಳುಗಳ ಜೀವನಶೈಲಿಯ ಮೂಲಕ ಬಸವಣ್ಣನವರು ನಮಗಿಲ್ಲಿ ಬದುಕಿನ ಪಾಠವನ್ನು ಹೇಳಿಕೊಟ್ಟಿದ್ದಾರೆ. ಜೇನುಗಳಿಂದ ನಾವು ಕಲಿಯಬೇಕಾದುದು ಬಹಳಷ್ಟಿದೆ ಎಂದು ಬಸವಣ್ಣನವರು ಈ ವಚನದಲ್ಲಿ ಸೂಚಿಸಿದ್ದಾರೆ. ಸಮೂಹ ಜೀವನ, ಕಾಯಕಜೀವಿಗಳಾಗಿರುವುದು, ಕಾಯಕದ ಘನತೆ, ಸಾಮೂಹಿಕ ಸಂಗ್ರಹ, ಹಂಚಿಕೊಂಡು ತಿನ್ನುವ ದಾಸೋಹ, ಸಹಕಾರ, ಶ್ರಮ ವಿಭಜನೆ, ಸಾಮೂಹಿಕ ಹೊಣೆಗಾರಿಕೆ, ಯೋಗ್ಯ ನಾಯಕತ್ವಕ್ಕೆ

ಮನ್ನಣೆ, ಸ್ವಚ್ಛತೆ, ರಕ್ಷಣೆ, ತ್ಯಾಗ, ಪ್ರತ್ಯುಪಕಾರ ಮತ್ತು ಕುಂಟುಬ ಯೋಜನೆ ಮುಂತಾದವು ಜೇನುಹುಳುಗಳ ಜೀವನಕ್ರಮದಲ್ಲಿ ಸೇರಿಕೊಂಡಿವೆ. ಜೇನುಹುಳುಗಳಿಂದ ಮಾನವ ಪಾಠ ಕಲಿತು ಸಾಮಾಜಿಕ ನ್ಯಾಯ, ಮಾನವಹಕ್ಕುಗಳು, ಎಲ್ಲ ಕಾಯಕಗಳನ್ನು ಸಮನಾಗಿ ಕಾಣುವ ಹೃದಯ ವೈಶಾಲ್ಯ, ಪರಿಸರ ರಕ್ಷಣೆ, ಏಕತೆ, ಸಾಮಾಜಿಕ ನಿಧಿ, ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಣೆ, ಗಣಾಚಾರ, ಸಾಮಾಜಿಕ ಮತ್ತು ಆರ್ಥಿಕ ಭದ್ರತೆ, ಆ ಮೂಲಕ ಹೊಸ ದೇವರು ಮತ್ತು ತತ್ತ್ವದ ಮೂಲಕ ಪರ್ಯಾಯ ಸಮಾಜ ನಿರ್ಮಾಣ, ಕಾಯಕ ಮತ್ತು ದಾಸೋಹದ ಮೂಲಕ ಮಾನವಸಂಪನ್ಮೂಲದ ಸಾಮಾಜೀಕರಣ, ಸಕಲ ಜೀವಾತ್ಮರಿಗೆ ಲೇಸಾಗುವ ರೀತಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮುಂತಾದವುಗಳಲ್ಲಿ ಮಾನವ ಪರಿಣತಿ ಪಡೆಯುವುದಕ್ಕಾಗಿ ಜೇನುಹುಳುವಿನ ಜೀವನಕ್ರಮವನ್ನು ಅರಿತುಕೊಳ್ಳುವುದು ಅವಶ್ಯವಾಗಿದೆ ಎಂದು ಬಸವಣ್ಣನವರು ಈ ವಚನದಲ್ಲಿ ಸೂಚಿಸಿದ್ದಾರೆ.

ಜೇನುಹುಳುಗಳು ಪರಾಗವನ್ನು ಸೇವಿಸುತ್ತವೆ. ಆದರೆ ಬಾಳತ್ವಕ್ಕಾಗಿ ಅಂದರೆ ಸಾಮೂಹಿಕ ಬದುಕಿಗಾಗಿ ಮಧುಸಂಗ್ರಹ ಮಾಡುತ್ತವೆ. ದುರ್ದಿನಗಳಲ್ಲಿ ಹಂಚಿಕೊಂಡು ತಿನ್ನುತ್ತವೆ. ಎಲ್ಲ ಜೇನುಹುಳುಗಳು ರಾಣಿಜೇನಿಗೆ ನಿಷ್ಠೆಯನ್ನು ತೋರಿಸುತ್ತವೆ. ಅವು ತಮ್ಮದೇ ಆದ ಆಹಾರ ಸಂಗ್ರಹ ವ್ಯವಸ್ಥೆ ಮತ್ತು ರಕ್ಷಣಾ ವ್ಯವಸ್ಥೆಯನ್ನು ಹೊಂದಿವೆ. ಆ ಮೂಲಕ ತಮ್ಮ ಸಾಮೂಹಿಕ ಬದುಕಿಗೆ ನಿಷ್ಠವಾಗಿರುತ್ತವೆ. ಇಡೀ ಜೇನುಗೂಡು ಜಂಗಮಲಿಂಗ (ಸಮೂಹವೆಂಬ ದೇವರು)ವಾದರೆ, ಒಳಗಿರುವ ರಾಣಿಜೇನು ಇಷ್ಟಲಿಂಗದ ಹಾಗೆ. ಎಲ್ಲ ಜೇನುಹುಳುಗಳು ವಿವಿಧ ಕಾರ್ಯದಲ್ಲಿ ತೊಡಗುವ ಕಾಯಕಜೀವಿಗಳು. ಶರಣಸತಿ ಲಿಂಗಪತಿ ಎಂಬಂತೆ ಇವುಗಳ ಬದುಕು. ಇಲ್ಲಿ ರಾಣಿಜೇನೇ ಲಿಂಗಪತಿ, ಜೇನುಹುಳುಗಳೆಲ್ಲ ಶರಣಸತಿಯರು. ಜೇನುಗೂಡೆಂಬ ಮಹಾಮನೆಯೊಳಗೆ ರಾಣಿಜೇನು ಎಂಬ ಮನೆಯೊಡತಿ ಇರುವುದರಿಂದ ಎಲ್ಲವೂ ಸುಗಮವಾಗಿ ಸಾಗಿದೆ. ರಾಣಿಜೇನನ್ನು ಕಳೆದುಕೊಂಡ ಜೇನುಹುಳುಗಳು ಒಟ್ಟಾಗಿ ಬದುಕಲಿಕ್ಕಾಗದು. ಮಹೋನ್ನತ ತತ್ತ್ವವಿಲ್ಲದೆ ಒಂದಾಗಿ ಬದುಕಲಿಕ್ಕಾಗದು. ರಾಣಿಜೇನು ಹೋದಕಡೆ ಜೇನುಹುಳುಗಳೆಲ್ಲ ಹೋಗುವವು. ಶರಣರು ತತ್ತ್ವವಿದ್ದಲ್ಲಿ ಮಾತ್ರ ಇರುವವರು. ಆ ತತ್ತ್ವವೇ ಕೂಡಲಸಂಗಮದೇವ. ಶರಣರೆಂಬ ಜೇನುಹುಳುಗಳಿಗೆ ಕೂಡಲಸಂಗಮದೇವ ರಾಣಿಜೇನು ಇದ್ದಂತೆ.

ಜೇನುಹುಳುಗಳು ದೂರದೂರದವರೆಗೆ ಸಾಗಿ ವಿವಿಧ ಹೂಗಳ ಮಕರಂದವನ್ನು ಹೀರುತ್ತ ಅದನ್ನೆಲ್ಲ ಮಧುವಾಗಿಸಿ ಜೇನುಗೂಡಿನಲ್ಲಿ ಸಂಗ್ರಹಿಸುವವು. ಅವು ಹೂಗಳಿಂದ ಹೂಗಳಿಗೆ ಹಾರುವಾಗ ಪರಾಗಸ್ಪರ್ಶವಾಗಿ ಸಸ್ಯಲೋಕದಲ್ಲಿ ಉತ್ಪತ್ತಿ ಕ್ರಿಯೆ ನಡೆಯುವುದು. ಹೀಗೆ ಹೂಗಳು ಜೇನುಹುಳುಗಳಿಗೆ ಮಕರಂದ ಕೊಡುವ ಮೂಲಕ ದಾಸೋಹ ಮಾಡುವವು. ಜೇನುಗಳು ಪರಾಗಸ್ಪರ್ಶ ಮಾಡುವುದರ ಮೂಲಕ ಹೂಗಳ ಕಾಯಕ ಮಾಡುವವು. ಎಲ್ಲ ಜೇನುಹುಳುಗಳು ಜೇನುಗೂಡಿನಲ್ಲಿ ಜೇನು ಸಂಗ್ರಹ ಮಾಡುವುದರ ಮೂಲಕ ಸಾಮಾಜಿಕ ನಿಧಿಯನ್ನು ಸೃಷ್ಟಿಸುವವು. ಶರಣರೂ ಹೀಗೆ ಸಾಮಾಜಿಕ ನಿಧಿಯನ್ನು

ಸಂಗ್ರಹಿಸುವುದಕ್ಕೆ ಬಸವಣ್ಣನವರು ಶಿವನಸೊಮ್ಮು (ಶಿವನಿಧಿ) ಎಂದು ಕರೆದಿದ್ದಾರೆ. ಜೇನು ಹುಳುಗಳು ರಾಣಿಜೇನನ್ನು ಮತ್ತು ಜೇನುಗೂಡನ್ನು ರಕ್ಷಿಸುತ್ತವೆ. ಆಗಂತುಕರ ವಿರುದ್ಧ ರಕ್ಷಣಾತ್ಮಕ ಹೋರಾಟ ಮಾಡುತ್ತವೆ. ಹಾಗೆ ಮಾಡುವುದರ ಮೂಲಕ ಜೀವತ್ಯಾಗ ಮಾಡುತ್ತವೆ. ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡ ನಡೆದ ಸಂದರ್ಭದಲ್ಲಿ ಶರಣರು ಹೋರಾಟಕ್ಕೆ ಇಳಿಯುವ ಪರಿಸ್ಥಿತಿ ಉಂಟಾಯಿತು. ಇದೇ ಗಣಾಚಾರ.

ಸಕಲಜೀವಾತ್ಮರಿಗೆ ಲೇಸನ್ನ ಬಯಸುವ ಶರಣರು ಶಸ್ತ್ರಗಳನ್ನೇಕೆ ಹಿಡಿದರು ಎಂಬ ಪ್ರಶ್ನೆ ಅನೇಕರಿಗೆ ಕಾಡುವುದು ಸಹಜ. ಶರಣತತ್ತ್ವ ಹಿಂಸಾತತ್ತ್ವಕ್ಕೆ ವಿರುದ್ಧವಾಗಿದೆ. ಆದರೆ ಅವರು ಶಸ್ತ್ರವನ್ನು ಹಿಡಿಯುವ ಅನಿವಾರ್ಯತೆ ಉಂಟಾಯಿತೇಕೆ ಎಂಬುದನ್ನು ಅರಿತುಕೊಳ್ಳ ಬೇಕಿದೆ.

ಸರ್ವವೆಲ್ಲವೂ ಚಿದಾತ್ಮಭಾವವೊಳಗೊಂಡು ಸರ್ವಸಮತ್ವದಿಂದ ಇರುವುದೇ ಭಕ್ತಿ. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದವಿಲ್ಲದ ಸರ್ವಸಮತ್ವದ ಕಲ್ಯಾಣವನ್ನು ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲೇ ಸಾಧಿಸಿದರು. ಆದರೆ ಬಿಜ್ಜಳನ ಶಸ್ತ್ರಪ್ರಭುತ್ವ ಮತ್ತು ಸರ್ವಸಮತ್ವವನ್ನು ಒಪ್ಪದ ಶಾಸ್ತ್ರಪ್ರಭುತ್ವ ಸೇರಿ ಬಸವಣ್ಣನವರ ಕಲ್ಯಾಣವನ್ನು ಹಾಳುಮಾಡಿದವು. 'ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ' ಎಂದು ಬಸವಣ್ಣನವರು ವಿಷಾದ ವ್ಯಕ್ತಪಡಿಸಿದ್ದಾರೆ.

ಕೆಳಜಾತಿಯಿಂದ ಬಂದ ಮಹಾಜ್ಞಾನಿ ಅಲ್ಲಮಪ್ರಭುಗಳನ್ನು ಬಸವಣ್ಣನವರು ಶೂನ್ಯಸಿಂಹಾಸನಾಧೀಶ್ವರರನ್ನಾಗಿಸಿ ಸರ್ವಸಮಾನತೆಯ ನಾಂದಿ ಹಾಡಿದರು. ಶೂನ್ಯ ಸಿಂಹಾಸನದ ಮುಂದೆ ರಾಜ ಸಿಂಹಾಸನ ಮತ್ತು ಮನುಧರ್ಮ ಸಿಂಹಾಸನಗಳು ಕಳೆಗುಂದ ತೊಡಗಿದವು. ಸಮಗಾರ ಹರಳಯ್ಯನವರ ಮಗನ ಮತ್ತು ಮಧುವರಸರ ಮಗಳ ಮದುವೆ ಒಂದು ನೆಪವಾಯಿತು. ಶರಣರ ಮತ್ತು ಅವರನ್ನು ನಂಬಿದ ಜನಸಮುದಾಯದ ಹತ್ಯಾಕಾಂಡ ಆರಂಭವಾಯಿತು. ವಚನಸಂಪತ್ತು ಬೆಂಕಿಗೆ ಆಹುತಿಯಾಗತೊಡಗಿತು. ಇಂಥ ಸಂದರ್ಭದಲ್ಲಿ ಶರಣರು ಶಸ್ತ್ರಗಳನ್ನು ಕೈಗೆತ್ತಿಕೊಳ್ಳುವಂಥ ಪರಿಸ್ಥಿತಿಯನ್ನು ಪ್ರಭುತ್ವ ನಿರ್ಮಾಣ ಮಾಡಿತು. ಬಸವಗೂ ಎನಗೂ ಭಾವ ಭೇದವಿಲ್ಲ ಎಂದು ಹೇಳುವ ಬಸವಣ್ಣನ ಸಹೋದರಿ ಅಕ್ಕ ನಾಗಮ್ಮ ಕೂಡ ವಚನ ರಕ್ಷಣೆಗಾಗಿ ಶಸ್ತ್ರಧಾರಿಯಾಗಿ ಹೋರಾಡಿದರು. ಈ ಸಂದರ್ಭದಲ್ಲಿ ಕಲ್ಯಾಣದಲ್ಲಿ ನಡೆದ ಶರಣರ ಹತ್ಯಾಕಾಂಡವನ್ನು ಕಲ್ಯಾಣಕ್ರಾಂತಿ ಎಂದು ರಂಜಕವಾಗಿ ಹೇಳುತ್ತೇವೆ. ಪ್ರಭುತ್ವದ ಹತ್ಯಾಕಾಂಡ ಬಸವಕ್ರಾಂತಿ ಆಗುವುದಿಲ್ಲ. ಬಸವಕ್ರಾಂತಿಯು ಭೂಮಿಯ ಮೇಲೆ ಸರ್ವಸಮತ್ವವನ್ನು ಸಾಧಿಸುವುದಾಗಿದೆ. ಯಥಾಸ್ಥಿತಿವಾದಿಗಳು ಆ ಸಾಧನೆಯ ದಾರಿಗೆ ಅಡ್ಡಬಂದಾಗ ಅಮಾಯಕರ ಮತ್ತು ವಚನಗಳ ರಕ್ಷಣೆಗಾಗಿ ಶರಣರು ಶಸ್ತ್ರಗಳನ್ನು ಹಿಡಿಯುವುದು ಅನಿವಾರ್ಯವಾಯಿತು ವ್ಯಾಘ್ರ ಬಂದಾಗ ಗೋಮಾತೆ ಕೊಂಬು ಮುಂದೆ ಮಾಡುವ ಹಾಗೆ ಶರಣರು ಕ್ರೂರ ವ್ಯವಸ್ಥೆಯ ವಿರುದ್ಧ ಶಸ್ತ್ರಗಳನ್ನು ಮುಂದೆ ಮಾಡಿದರು. ಈ ಜಗತ್ತಿನಲ್ಲಿ ವ್ಯಾಘ್ರನಿಗೆ ನಖಗಳಿರುವವರೆಗೂ ಗೋಮಾತೆಯರಿಗೆ

ಕೊಂಬುಗಳಿರುತ್ತವೆ. ಪ್ರಭುತ್ವ ದಬ್ಬಾಳಿಕೆ ನಡೆಸುವವರೆಗೂ ಹೋರಾಟಗಳು ಇದ್ದೇ ಇರುತ್ತವೆ. ಪ್ರಭುತ್ವ ಹೂಗಳನ್ನು ಹೊಸಕಿ ಹಾಕಬಲ್ಲುದು; ಆದರೆ ಅದಕ್ಕೆ ವಸಂತ ಋತುವನ್ನು ತಡೆಯುವ ಶಕ್ತಿ ಇಲ್ಲ.

ರಾಣಿಜೇನಿನಿಂದ ಮಾತ್ರ ಸಂತಾನ ಅಭಿವೃದ್ಧಿಯಾಗುತ್ತದೆ. ಕೆಲವೇ ಗಂಡು ಜೇನುಗಳನ್ನುಳಿದು ಉಳಿದೆಲ್ಲವು ಹೆಣ್ಣು ಜೇನುಗಳು. ಜೇನುಗಳೆಲ್ಲ ಕಾಯಕಜೀವಿಗಳಾಗಿವೆ. ಅವು 'ನಮಗೆಲ್ಲ ಸಮಪಾಲು' ಎಂಬ ತತ್ತ್ವದ ಆಧಾರದ ಮೇಲೆ ಜೇನುಗೂಡಿನಲ್ಲಿಯೇ ಮಧುವನ್ನು ಶೇಖರಿಸುತ್ತವೆ. ಪರಮೇಶ್ವರನು 'ನಮ್ಮ ಕೂಡಲಸಂಗನ ಶರಣರ ಮನದ ಕೊನೆಯ ಮೊನೆಯ ಮೇಲಡಗಿದನು' ಎಂದು ಬಸವಣ್ಣನವರು ಹೇಳುವಂತೆ ಜೇನುಗೂಡಿನಲ್ಲಿ ರಾಣಿಜೇನು ಇರುತ್ತದೆ. ರಾಣಿಜೇನು ಇಡೀ ಜೇನುಗೂಡಿನ ವ್ಯವಸ್ಥೆಯ ಕೇಂದ್ರಬಿಂದು. ಕಾಯಕಜೀವಿಗಳಾದ ಸಹಸ್ರಾರು ಜೇನುಗಳೇ ಎಲ್ಲವನ್ನೂ ನಿಭಾಯಿಸುತ್ತವೆ. ಆದ್ದರಿಂದ ಅಲ್ಲಿ ಪ್ರಜಾಪ್ರಭುತ್ವದ ಝೇಂಕಾರವಿರುತ್ತದೆ. ಈ ಕಾಯಕಜೀವಿ ಜೇನುಗಳ ಆಯುಷ್ಯ ಕೇವಲ ಆರೆಂಟು ವಾರಗಳಷ್ಟಿರುತ್ತದೆ. ಆದರೆ ರಾಣಿಜೇನಿನ ಆಯುಷ್ಯ ಹತ್ತುಪಟ್ಟು ಜಾಸ್ತಿ ಇರುತ್ತದೆ. ಮಾನವರ ಬದುಕಿಗೆ ಕೂಡ ಒಂದು ಮಿತಿ ಇದೆ. ಅಷ್ಟರೊಳಗೆ ಅವರು ತಮ್ಮ ಪಾಲಿನ ಕರ್ತವ್ಯವನ್ನು ಮಾಡುತ್ತ ಇಹಲೋಕದ ಯಾತ್ರೆಯನ್ನು ಮುಗಿಸಬೇಕಾಗುತ್ತದೆ. ಅಷ್ಟರೊಳಗೆ ಕಾಯಕ ಮತ್ತು ದಾಸೋಹದ ಮೂಲಕ ತಮ್ಮ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ತಮ್ಮ ಮನದ ಕೊನೆಯ ಮೊನೆಯಲ್ಲಿ ದೇವರು ಅಡಗಿದ್ದಾನೆ ಎಂಬುದನ್ನು ಅನುಭಾವಿಸಬೇಕಾಗುತ್ತದೆ. ಜೇನುನೊಣಗಳ ಧ್ಯಾನ ರಾಣಿಜೇನಿನ ಕಡೆಗೆ ಇರುವಂತೆ ನಮ್ಮ ಧ್ಯಾನ ನಮ್ಮೊಳಗಿನ ದೇವರ ಕಡೆ ಇರಬೇಕಾಗುತ್ತದೆ. ಜೇನುನೊಣಗಳು ತಾವು ಬದುಕುತ್ತ ಒಕ್ಕಮಿಕ್ಕದ್ದನ್ನು ಜೇನುತುಪ್ಪವಾಗಿಸಿ ಸಂಗ್ರಹಿಸುತ್ತ ಸಾಮಾಜಿಕ ನಿಧಿಯ ಹಾಗೆ ರಕ್ಷಿಸುತ್ತವೆ. ತನ್ನೆಂಜಲ ಜಗವುಂಬುದು ನೋಡಯ್ಯಾ ಎಂದು ಬಸವಣ್ಣನವರು ಹೇಳುವಲ್ಲಿ, ಎಂಜಲು ಶಬ್ದವನ್ನು ಗುಣಾತ್ಮಕವಾಗಿ ಬಳಸಿದ್ದಾರೆ. ಜನನಸೂತಕ, ಸಾವಿನಲ್ಲಿ ಪ್ರೇತಸೂತಕ, ರಜಸ್ಸಿನಲ್ಲಿ ರಜಸ್ಸೂತಕ, ಎಂಜಲಿನಲ್ಲಿ ಉಚ್ಛಿಷ್ಟಸೂತಕ ಮತ್ತು ಕುಲದಲ್ಲಿ ಜಾತಿಸೂತಕ ಎಂಬ ಐದುಬಗೆಯ ಮೈಲಿಗೆಗಳಿವೆ ಎಂದು ವೈದಿಕರು ಭಾವಿಸಿದ್ದಾರೆ. ಬಸವಣ್ಣನವರು ಈ ಪಂಚಸೂತಕಗಳನ್ನು ತಿರಸ್ಕರಿಸಿದ್ದಾರೆ. ಕಾಯಕಜೀವಿಗಳಲ್ಲಿ ಸಮಾಜದಿಂದ ಬೊಟ್ಟುಮಾಡಿಸಿಕೊಳ್ಳದೆ ಬದುಕುವುದು ಬಾಳುವೆಯಾದರೆ, ಬಾಯಿಂದ ತೆಗೆದುಕೊಡುವುದು ಆಳವಾದ ಪ್ರೀತಿಯ ದ್ಯೋತಕವಾಗಿದೆ. ಹೀಗೆ ಬಸವಣ್ಣನವರ ಪರಿಕಲ್ಪನೆಯಲ್ಲಿ ಎಂಜಲು ಉನ್ನತಸ್ಥಾನವನ್ನು ಪಡೆಯುತ್ತದೆ.

ಶಿವಭಕ್ತನಾಗಿ ಶಿವಾನ್ನವನೇ ಕೊಂಡು, ಒಕ್ಕಮಿಕ್ಕ ವಸ್ತುವ ಜಂಗಮಕ್ಕಿಕ್ಕುವಾತನೆ ಭಕ್ತ ಎಂದು ಬಸವಣ್ಣನವರು ಭಕ್ತನ ಗುಣಲಕ್ಷಣಗಳನ್ನು ತಿಳಿಸುತ್ತಾರೆ. ನಾವು ದುಡಿದು ಗಳಿಸಿದ್ದನ್ನು ಶಿವನ ಪ್ರಸಾದವೆಂದು ಸದ್ಬಳಕೆ ಮಾಡಬೇಕು. ಉಳಿದದ್ದನ್ನು ಸಾಮಾಜಿಕ ನೆಮ್ಮದಿ ಉಳಿಸಿ ಬೆಳೆಸುವ ಕಾರ್ಯಗಳಿಗೆ ಉಪಯೋಗಿಸುವುದಕ್ಕಾಗಿ ಇರುವ ಶಿವನಿಧಿಯನ್ನು ಹೆಚ್ಚಿಸಲು

ಕೊಡಬೇಕು. ಹಾಗೆ ಕೊಡುವವನು ಭಕ್ತನಾದರೆ ಅದನ್ನು ತೆಗೆದುಕೊಳ್ಳುವವನು ಜಂಗಮನಾಗುತ್ತಾನೆ. ಭಕ್ತನಿಗೆ ಸಾಮಾಜಿಕ ಪ್ರಜ್ಞೆ ಇರುವಂತೆ ತೆಗೆದುಕೊಳ್ಳವವನಿಗೂ ಸಾಮಾಜಿಕ ಪ್ರಜ್ಞೆ ಇರಬೇಕಾಗುತ್ತದೆ. ಜಂಗಮನಾಗುವುದೆಂದರೆ ವೈಯಕ್ತಿಕ ಬದುಕನ್ನು ಮೀರಿ ಸಾಮಾಜಿಕವಾಗಿ ಬದುಕುವುದು. ಇಡೀ ಸಮಾಜವೇ ತಾನೆಂಬ ರೀತಿಯಲ್ಲಿ ಸಂವೇದನಾಶೀಲನಾಗಿರುವುದು. ಇಂಥ ಒಂದು ಸುಂದರ ಸಮಾಜದ ಕನಸನ್ನು ಬಸವಣ್ಣನವರು ಕಂಡಿದ್ದರು. ಅದನ್ನು ಈ ಭೂಮಿಯ ಮೇಲೆ ಸಾಕಾರಗೊಳಿಸುವ ಯೋಜನೆ ರೂಪಿಸಿದರು. ಆದರೆ ಇದು ಕಾರ್ಯಗತವಾಗುವ ಹಾಗೆ ದೇವರು ಕರುಣಿಸಬೇಕೆಂಬುದು ಅವರ ಬಯಕೆಯಾಗಿತ್ತು. ಅಂತೆಯೆ ನಡುವೆ ನೀ ಬಂದು ಭಂಡು (ಅಪಮಾನ) ಮಾಡದಿರೈ ಕೂಡಲಸಂಗಮದೇವಾ, ಎಂದು ಪ್ರಾರ್ಥಿಸುತ್ತಾರೆ. ಇಂಥ ಒಂದು ವಿನೂತನವಾದ ಬೃಹತ್ ಕಾರ್ಯದಲ್ಲಿ ತಾವು ಅಪಮಾನಕ್ಕೆ ಒಳಗಾಗಬಾರದು ಎಂಬ ಎಚ್ಚರಿಕೆ ಅವರಿಗಿದೆ. ಹೀಗೆ ಈ ವಚನ ಬಸವಣ್ಣನವರ ದರ್ಶನವನ್ನು ಬಿಂಬಿಸುವ ಸಾಮರ್ಥ್ಯವನ್ನು ಹೊಂದಿದೆ.

ಪ್ರತಿಯೊಂದು ನಿಜವಾದ ತತ್ತ್ವಜ್ಞಾನ ತನ್ನ ಕಾಲದ ಬೌದ್ಧಿಕವಾದ ಶುದ್ಧಸತ್ವವಾಗಿರುತ್ತದೆ ಎಂದು ಕಾರ್ಲ್‌ಮಾರ್ಕ್ಸ್ ಹೇಳಿದ್ದಾರೆ. ಬಸವಣ್ಣನವರು ತಮ್ಮ ಕಾಲದಲ್ಲಿ ನಡೆಯುತ್ತಿದ್ದ ಕಾಯಕಜೀವಿಗಳ ಶೋಷಣೆಯನ್ನು ಕಣ್ಣಾರೆ ಕಂಡರು. ಅವರೆಲ್ಲ ಜಾತಿ ಉಪಜಾತಿಗಳಲ್ಲಿ ಹರಿದು ಹಂಚಿಹೋಗಿದ್ದರು. ಬಲಿ, ನರಬಲಿಗಳಿಂದ ಮತ್ತು ಸ್ವಯಂ ಹಿಂಸೆಯಿಂದ ಕೂಡಿದ್ದ ಭಕ್ತಿ ಅಸಹನೀಯವಾಗಿತ್ತು. ಎಲ್ಲ ರೀತಿಯಿಂದಲೂ ಶೋಷಣೆಗೊಳಗಾಗಿದ್ದ ಕಾಯಕಜೀವಿಗಳು ಇಂಥ ಹಿಂಸಾಚರಣೆಯಿಂದ ಇನ್ನೂ ಹೆಚ್ಚಿನ ಕಷ್ಟಕರವಾದ ಜೀವನ ಸಾಗಿಸುತ್ತಿದ್ದರು. ಬಸವಣ್ಣನವರು ನಿರಾಕಾರನಾದ ಏಕದೇವನನ್ನು ಪರಿಚಯಿಸಿ ಅವನನ್ನು ಸರಳವಾಗಿ ಆರಾಧಿಸುವ ಕ್ರಮವನ್ನು ತೋರಿಸಿಕೊಟ್ಟರು. ಆ ಮೂಲಕ ಬಡವರ ಶೋಷಣೆಯನ್ನು ತಪ್ಪಿಸುವುದಲ್ಲದೆ ಅವರೆಲ್ಲರು ಜಾತಿ ಮತ ಪಂಥಗಳನ್ನು ದಾಟಿ ಜೇನುನೊಣಗಳಂತೆ ಒಂದಾಗುವ ಕಲೆಯನ್ನು ಕಲಿಸಿದರು. ಜನಸಾಮಾನ್ಯರನ್ನು ಮಾನ್ಯರನ್ನಾಗಿಸಿದರು, ಸ್ವತಂತ್ರಧೀರರನ್ನಾಗಿಸಿದರು ಜೊತೆಗೆ ಸಮೂಹವಾಗಿಸಿದರು. ಆ ಮೂಲಕ ಮನುಕುಲವೆಲ್ಲ ಒಂದು ಎಂದು ಸಾರಿದರು.

ಚಿಂತನೆ ಮತ್ತು ಇರುವಿಕೆಯ ಸಂಬಂಧದ ಬಗ್ಗೆ ಕಾಳಜಿ ವಹಿಸುವುದು ತತ್ತ್ವಜ್ಞಾನದ ಪ್ರಮುಖವಾದ ಮೂಲ ಕರ್ತವ್ಯವಾಗಿದೆ ಎಂದು ಫೆಡ್ರಿಕ್ ಏಂಗೆಲ್ಸ್ ತಿಳಿಸಿದ್ದಾರೆ. ಬಸವಣ್ಣನವರ ಚಿಂತನೆಗಳು ಆ ಕಾಲದ ಇರುವಿಕೆಯ ಆಧಾರದ ಮೇಲೆ ರೂಪುಗೊಂಡಿವೆ. ಹೀಗಾಗಿ ಅವರ ಚಿಂತನೆಗಳಿಗೆ ಕಟ್ಟಕಡೆಯ ಮನುಷ್ಯನೂ ಸ್ಪಂದಿಸುತ್ತಾನೆ.

ವಸ್ತುವಿಲ್ಲದೆ ಚಲನಶೀಲತೆಯನ್ನು ಹೇಗೆ ಊಹಿಸಲು ಸಾಧ್ಯವಿಲ್ಲವೊ ಹಾಗೆಯೇ ಚಲನಶೀಲತೆ ಇಲ್ಲದ ವಸ್ತುವನ್ನು ಊಹಿಸಲು ಸಾಧ್ಯವಿಲ್ಲ. ವಸ್ತುವಿನಂತೆ ಚಲನಶೀಲತೆಯನ್ನು ಕೂಡ ಸೃಷ್ಟಿಸಲಿಕ್ಕಾಗದು ಮತ್ತು ಧ್ವಂಸ ಮಾಡಲಿಕ್ಕಾಗದು ಎಂದು ಫೆಡ್ರಿಕ್ ಏಂಗೆಲ್ಸ್ ಹೇಳುತ್ತಾರೆ.

ಈ ಚಲನಶೀಲತೆಯನ್ನು ಶರಣರು ವಸ್ತುಚೇತನ ಎಂದು ಕರೆದಿದ್ದಾರೆ. ಅದುವೆ ಅರಿವಿನ ಕುರುಹಾದ ಇಷ್ಟಲಿಂಗದ ಮೂಲರೂಪ. ವಸ್ತುರೂಪದಲ್ಲಿರುವ ವಿಶ್ವವೇ ಜಂಗಮಲಿಂಗ. ಇಷ್ಟಲಿಂಗ ಮತ್ತು ಜಂಗಮಲಿಂಗ ಅಭೇದ್ಯವಾಗಿವೆ. ವಿಶ್ವವು ರೂಪಾಂತರ ಗೊಂಡು ಬಯಲಾದರೂ ನಾಶವಾಗುವುದಿಲ್ಲ. ಹಾಗೆಯೆ ಅದರೊಳಗಿನ ವಸ್ತುಚೈತನ್ಯವೂ ನಾಶವಾಗುವುದಿಲ್ಲ ಎಂಬುದನ್ನು ಬಸವಣ್ಣನವರು ಸೂಚಿಸಿದ್ದಾರೆ.

ಈ ವಚನದಲ್ಲಿ ರಾಣಿಜೇನು ಚೈತನ್ಯದ ಪ್ರತೀಕವಾದರೆ ಇತರೆ ಜೇನುಹುಳುಗಳೆಲ್ಲ ವಸ್ತುರೂಪದಲ್ಲಿವೆ. ರಾಣಿಜೇನನ್ನು ಮತ್ತು ಜೇನುಹುಳುಗಳನ್ನು ಪ್ರತ್ಯೇಕಿಸಿ ಜೇನುತುಪ್ಪ ಪಡೆಯಲು ಸಾಧ್ಯವಿಲ್ಲ. ಹೀಗೆ ಚೈತನ್ಯ ಮತ್ತು ವಸ್ತುವಿನ ಸಂಬಂಧವಿದೆ. ಬಸವಣ್ಣನವರ ಅಂತಃಸಾಕ್ಷಿಸ್ವರೂಪದ ದೇವರು ಮತ್ತು ಜನಸಮುದಾಯವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಜಗತ್ತಿನ ಜನಸಮುದಾಯವೆಲ್ಲ ಜಾತಿ, ಮತ, ಪಂಥ, ಕುಲ, ಧರ್ಮ, ಲಿಂಗ ವರ್ಣ ಮತ್ತು ವರ್ಗಭೇದಗಳಿಲ್ಲದೆ ಒಂದಾದಾಗ ಮಾತ್ರ ಬಸವದರ್ಶನದ ಅರಿವಾಗುತ್ತವೆ.

○

ಬಸವಣ್ಣ, ಪೈಗಂಬರ್ ಮತ್ತು ಕಾರ್ಮಿಕರು

ಐರೋಪ್ಯ ರಾಷ್ಟ್ರಗಳಲ್ಲಿ ಮೇ ೧, ವಸಂತ ಋತುವಿನ ಆರಂಭದ ದಿನವಾಗಿದೆ. ವಸಂತ ಋತುವಿನಲ್ಲಿ ಇಡೀ ನಿಸರ್ಗ ವರ್ಣರಂಜಿತವಾಗಿರುತ್ತದೆ. ಆದರೆ ಕಾರ್ಮಿಕರು ಈ ಸಂತೋಷದಿಂದ ವಂಚಿತರಾಗಿದ್ದರು. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ದುಡಿಯುವ ಪರಿಸ್ಥಿತಿ ಇತ್ತು. ಅವರ ಬದುಕಿನಲ್ಲಿ ವಿಶ್ರಾಂತಿ ಮತ್ತು ಮನರಂಜನೆ ಎಂಬುವು ಗೌಣವಾಗಿದ್ದವು. ಇಂಥ ಕಠಿಣ ಬದುಕಿನಿಂದ ಒಂದಿಷ್ಟು ಬಿಡುವು ಮಾಡಿಕೊಳ್ಳುವುದಕ್ಕಾಗಿ ಕೆಲಸದ ಅವಧಿಯನ್ನು ೮ ಗಂಟೆಗೆ ಸೀಮಿತಗೊಳಿಸಬೇಕೆಂದು ಒತ್ತಾಯಿಸಿ ಅಮೆರಿಕದ ಷಿಕಾಗೊ ನಗರದ ೪೦ ಸಾವಿರಕ್ಕೂ ಹೆಚ್ಚು ಕಾರ್ಮಿಕರು ೧೮೮೬ನೇ ಮೇ ೧ರಂದು ಶಾಂತಿಯುತ ಹೋರಾಟ ಆರಂಭಿಸಿದರು.

ಮೇ ೩ರಂದು ಷಿಕಾಗೊದ ಮ್ಯಾಕೊರ್ಮಿಕ್ ಹಾರ್ವೆಸ್ಟರ್ ಪ್ಲಾಂಟ್‌ನಲ್ಲಿ ಪೊಲೀಸರು ಗುಂಡು ಹಾರಿಸಿದಾಗ ೬ ಮಂದಿ ಸತ್ತು ೫೦ ಮಂದಿ ಗಾಯಗೊಂಡರು. ಮೇ ೪ರಂದು ಹೇ ಮಾರ್ಕೆಟ್ ಚೌಕದಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ ಹೊರಡಿಸಲಾಯಿತು. ರ್‍ಯಾಲಿ ಮುಗಿಯುವ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಎಸೆದ ಬಾಂಬ್ ಸ್ಫೋಟಗೊಂಡಾಗ ಒಬ್ಬ ಪೊಲೀಸ್ ಮೃತಪಟ್ಟ. ನಂತರ ಆರಂಭವಾದ ಗಲಭೆಯಲ್ಲಿ ಆರುಮಂದಿ ಪೊಲೀಸರು ಮತ್ತು ನಾಲ್ವರು ಕಾರ್ಮಿಕರು ಸತ್ತು ಅನೇಕರು ಗಾಯಗೊಂಡರು. ಹೀಗೆ ವಿಶ್ವಾದ್ಯಂತ ಕಾರ್ಮಿಕರ ಹೋರಾಟದ ದಿನವಾಗಿ ಮೇ ದಿನಾಚರಣೆ ಆರಂಭವಾಯಿತು.

ಷಿಕಾಗೊ ದುರಂತಕ್ಕೆ ೩೮ ವರ್ಷಗಳ ಮೊದಲೇ ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರು ರಚಿಸಿದ ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ ಅಂತರ್‍ರಾಷ್ಟ್ರೀಯ ಮಟ್ಟದ ಕಾರ್ಮಿಕ ಚಳವಳಿಯ ಮಹತ್ವದ ಕುರಿತು ತಿಳಿಸಲಾಗಿದೆ. ಕಾರ್ಮಿಕರ ಶೋಷಣೆಯ ಕಾರಣಗಳನ್ನು ವಿವರಿಸಲಾಗಿದೆ. ವರ್ಗ ಹೋರಾಟದಿಂದ ಕಾರ್ಮಿಕರ ವಿಮೋಚನೆಯಾಗುವುದರ ಬಗ್ಗೆ ಸೂಚಿಸಲಾಗಿದೆ.

ಕಳೆದ ನೂರು ವರ್ಷಗಳ ಅವಧಿಯಲ್ಲಿ ವಿವಿಧ ಹೋರಾಟಗಳ ಫಲವಾಗಿ ವಿವಿಧ ಕ್ಷೇತ್ರಗಳ ಕಾರ್ಮಿಕರು ೮ ಗಂಟೆಗಳ ಕೆಲಸವೂ ಸೇರಿದಂತೆ ಅನೇಕ ಸೌಲಭ್ಯಗಳನ್ನು ಪಡೆದರು. ಅಂತರ್‍ರಾಷ್ಟ್ರೀಯ ಪ್ರಜ್ಞೆಯನ್ನೂ ಪಡೆದರು. ಆದರೆ ಕಳೆದ ೨೫ ವರ್ಷಗಳ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಕಂಪ್ಯೂಟರ್ ತಂತ್ರಜ್ಞಾನದ ಬಳಕೆ ಮತ್ತು ಜಾಗತೀಕರಣದಿಂದಾಗಿ ವಿಶ್ವದ ಮುಖವೇ ಬದಲಾಗುತ್ತಿದೆ. ಕಾರ್ಮಿಕರು ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ಉತ್ಪಾದನೆಯಲ್ಲಿ ಕಾರ್ಮಿಕರ ಪಾತ್ರವೇ ಇಲ್ಲವೇನೋ ಎನ್ನುವ ರೀತಿಯಲ್ಲಿ

ಕಂಪ್ಯೂಟರ್ ತಂತ್ರಜ್ಞಾನದ ಬಳಕೆಯಾಗುತ್ತಿದೆ. ದುಡಿಯುವ ಕೈಗಳು ಕೆಲಸ ಕಳೆದುಕೊಂಡಷ್ಟೂ ಹೋರಾಟಗಳ ಗೌಣವಾಗಿ ಅಪರಾಧಗಳು ಹೆಚ್ಚುತ್ತಿವೆ. ಕೌಟುಂಬಿಕ ಮತ್ತು ಸಾಮಾಜಿಕ ಬದುಕು ಅಸಹನೀಯವಾಗುತ್ತಿದೆ.

ಮಾನವನನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತ ಸುವ್ಯವಸ್ಥಿತ ಸಮಾಜವೊಂದನ್ನು ಸೃಷ್ಟಿಸಿ, ಉಳಿಸಿ ಬೆಳೆಸುವುದಕ್ಕಾಗಿ ಅನೇಕ ಧರ್ಮಸಂಸ್ಥಾಪಕರು ಪ್ರಯತ್ನಪಟ್ಟಿದ್ದಾರೆ. ಅವರೆಲ್ಲ ದುಡಿಯುವ ವರ್ಗಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಬಡವರ ಹಕ್ಕುಗಳ ರಕ್ಷಣೆಯಾಗುವ ಹಾಗೆ ಧಾರ್ಮಿಕ ಕಟ್ಟಳೆಗಳನ್ನು ವಿಧಿಸಿದ್ದಾರೆ. ಆ ಮೂಲಕ ತಾವು ಸ್ಥಾಪಿಸಿದ ಅಥವಾ ವಿಕಾಸಗೊಳಿಸಿದ ಧರ್ಮಗಳು ಬಡವರ ಪರ ಎಂಬುದನ್ನು ಸೂಚಿಸಿದ್ದಾರೆ. ಅಂಥವರಲ್ಲಿ ೭ನೆಯ ಶತಮಾನದ ಮುಹಮ್ಮದ್ ಪೈಗಂಬರ್ ಮತ್ತು ೧೨ನೆಯ ಶತಮಾನದ ಬಸವಣ್ಣನವರು ಪ್ರಮುಖರಾಗಿದ್ದಾರೆ. ಕ್ರಿಸ್ತ ಪೂರ್ವ ೬ನೇ ಶತಮಾನದ ಭಗವಾನ ಬುದ್ಧ ಮತ್ತು ಕ್ರಿಸ್ತ ಶಕೆಗೆ ಕಾರಣವಾದ ಏಸುಕ್ರಿಸ್ತ ಕೂಡ ಬಡವರ ಪರವಾಗಿಯೇ ಧರ್ಮಸ್ಥಾಪನೆ ಮಾಡಿದವರು.

ದುಡಿಯುವ ವರ್ಗಕ್ಕೆ ಸಂಬಂಧಿಸಿದ ಶೂದ್ರರು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಟ್ಟಳೆಗಳಿಂದ ನರಕಯಾತನೆ ಅನುಭವಿಸುತ್ತಿದ್ದ ಸಂದರ್ಭದಲ್ಲಿ ಭಗವಾನ ಬುದ್ಧ ದುಡಿಯುವ ಜನರ ಧರ್ಮಸ್ಥಾಪನೆ ಮಾಡಿದ. ವರ್ಣ ಮತ್ತು ವರ್ಗಭೇದಗಳನ್ನು ತಿರಸ್ಕರಿಸಿದ ಬೌದ್ಧಧರ್ಮವು ಕೆಳಜಾತಿ ಮತ್ತು ಕೆಳವರ್ಗದ ಜನರಿಗೆ ಆಶಾಕಿರಣವಾಯಿತು. ಏಸುಕ್ರಿಸ್ತ ಕೂಡ ಭೇದಭಾವವಿಲ್ಲದ ಸಮಾಜಕ್ಕಾಗಿ ಧರ್ಮಮಾರ್ಗವನ್ನು ಹಾಕಿಕೊಟ್ಟ. ಪೈಗಂಬರರು ಮತ್ತು ಬಸವೇಶ್ವರರು ಬಡವರ ಪರವಾದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ತಲ್ಲೀನರಾಗಿದ್ದರು.

ಸಂಪತ್ತಿನ ಗುಲಾಮನನ್ನು ದೇವರು ತಿರಸ್ಕರಿಸುವನು ಎಂದು ಪೈಗಂಬರರು ಎಚ್ಚರಿಸಿ ಮಾನವರ ಸಂಗ್ರಹಬುದ್ಧಿಯನ್ನು ವಿರೋಧಿಸಿದ್ದಾರೆ. ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಎಂದು ಬಸವಣ್ಣನವರು ತಿಳಿಸುವ ಮೂಲಕ ಸಂಪತ್ತಿನ ಸಂಗ್ರಹವನ್ನು ಅಲ್ಲಗಳೆದಿದ್ದಾರೆ.

ಸಂಗ್ರಹ ಬುದ್ಧಿಯು ಮಾನವನ ಎಲ್ಲ ದುರಂತಗಳಿಗೆ ಕಾರಣವಾಗಿದೆ. ಆತ ಸಂಪತ್ತನ್ನು ಗಳಿಸಿದಷ್ಟೂ ತಾನು ಬೇರೆಯವರಿಗಿಂತ ಭಿನ್ನ ಎಂಬ ಭಾವನೆ ತಾಳುತ್ತ ಹೋಗುತ್ತಾನೆ. ಅಂಥವರು ಹೆಚ್ಚಾಗುತ್ತಾ ಮೇಲ್ವರ್ಗವಾಗಿ ಪರಿಣಮಿಸುತ್ತಾರೆ. ಈ ಮೇಲ್ವರ್ಗದಿಂದಾಗಿ ಮೇಲ್ಜಾತಿಗಳ ಮತ್ತು ಉತ್ತಮರೆಂದು ಕರೆಯಿಸಿಕೊಳ್ಳುವ ಕುಲಗಳ ನಿರ್ಮಾಣವಾಗುತ್ತದೆ. ಎಲ್ಲ ರೀತಿಯ ಮೇಲುಕೀಳುಗಳಿಗೆ ನಾಂದಿಯಾಗುತ್ತದೆ. ಆದ್ದರಿಂದ ಪೈಗಂಬರರ ಮೂಲಕ ಅವತೀರ್ಣಗೊಂಡ ಕುರಾನ್‌ನಲ್ಲಿ ಮತ್ತು ಬಸವಣ್ಣನವರ ವಚನಗಳಲ್ಲಿ ನರನ ಸಂಗ್ರಹ ಬುದ್ಧಿಯನ್ನು ತಿರಸ್ಕರಿಸಲಾಗಿದೆ.

ಕಾಯಕ ಜೀವಿಗಳು ದೇವರ ಪ್ರೀತಿಗೆ ಪಾತ್ರರಾಗುವರು ಎಂದು ಹೇಳಿದ ಪೈಗಂಬರರು, ಕೂಲಿಯ ಒರಟು ಕೈಗಳನ್ನು ನಾನು ಪ್ರೀತಿಸುತ್ತೇನೆ ಎಂದು ತಿಳಿಸಿದ್ದಾರೆ. ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಎಂದು ಬಸವಣ್ಣನವರು ಕಾಯಕಜೀವಿಗಳನ್ನು ಗೌರವಿಸಿದ್ದಾರೆ. ದುಡಿದು ಉತ್ಪಾದಿಸುತ್ತ ನಾವೆಲ್ಲ ಬದುಕಲು ಸಾಧ್ಯವಾಗುವಂತೆ ಮಾಡುವ ಕಾಯಕಜೀವಿಗಳ ಒರಟು ಕೈಗಳು ಅತ್ಯಂತ ಮಹತ್ವದ್ದಾಗಿವೆ ಎಂದು ಪೈಗಂಬರರು ಸೂಚಿಸಿದರೆ, ಅವರೇ ನಮ್ಮ ಹಿರಿಯರು ಎಂದು ಬಸವಣ್ಣನವರು ಶ್ಲಾಘಿಸುತ್ತಾರೆ.

ನಿಮಗೆ ಅತ್ಯಧಿಕ ಪ್ರಿಯವಾದುದನ್ನು ದೇವಮಾರ್ಗದಲ್ಲಿ ವ್ಯಯಿಸುವ ತನಕ ನೀವು ಪುಣ್ಯಗಳಿಸಲಾರಿರಿ ಎಂದು ಕುರಾನಿನಲ್ಲಿ ತಿಳಿಸಲಾಗಿದೆ. ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪದು ತಪ್ಪದು, ಕೂಡಲಸಂಗನ ಶರಣರಿಗೆ ಸವೆಸಲೇ ಬೇಕು ಎಂದು ಬಸವಣ್ಣನವರು ಎಚ್ಚರಿಸಿದ್ದಾರೆ.

ಸಂಪತ್ತನ್ನು ಕೂಡಿಸುವುದರಿಂದ ಅದು ದಿನಗಳೆದಂತೆ ಮಾನವಕುಲಕ್ಕೆ ಕಂಟಕಪ್ರಾಯ ವಾಗುತ್ತ ಹೋಗುತ್ತದೆ. ದುಡಿಯುವ ಮತ್ತು ಸುಲಿಯುವ ವರ್ಗಗಳ ನಿರ್ಮಾಣಕ್ಕೆ ನಾಂದಿ ಹಾಡುತ್ತದೆ. ವರ್ಗರಹಿತವಾದ ಸಮಾಜದಲ್ಲಿ ಮಾತ್ರ ಮಾನವ ಏಕೋಭಾವದಿಂದ ಬದುಕಲು ಸಾಧ್ಯ ಎಂಬ ಆಶಯ ಪೈಗಂಬರರದ್ದು ಮತ್ತು ಬಸವಣ್ಣನವರದ್ದು ಆಗಿದೆ.

ನಮಾಜನ್ನು ಸ್ಥಿರಗೊಳಿಸಿರಿ; ಜಕಾತ್ ಕೊಡಿರಿ ಎಂದು ಕುರಾನ್ ಆದೇಶಿಸುತ್ತದೆ. ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು ಎಂದು ಬಸವಣ್ಣನವರು ಹೇಳುತ್ತಾರೆ. ದೇವರ ಒಲುಮೆಯನ್ನು ಎರಡು ರೀತಿಯಿಂದ ಗಳಿಸಬೇಕೆಂಬುದು ಕುರಾನಿನ ಆದೇಶವಾಗಿದೆ ಎಂದು ಪೈಗಂಬರರು ಸೂಚಿಸಿದ್ದಾರೆ. ನಮಾಜ್ ಮಾಡುವುದು ದೇವರ ಆರಾಧನೆಯಾಗಿರುವಂತೆಯೆ ಜಕಾತ್ ಕೊಡುವುದು ಸಮಾಜವೆಂಬ 'ದೇವರ' ಆರಾಧನೆಯಾಗಿದೆ. ಸೃಷ್ಟಿಗೆ ಸೃಷ್ಟಿಕರ್ತನೇ ಕಾರಣನಾಗಿರುವುದರಿಂದ ಎಲ್ಲರೂ ದೇವರದ್ದೇ ಆಗಿದೆ. ಬಸವಣ್ಣನವರು ಇಷ್ಟಲಿಂಗ ಪೂಜೆ ಮತ್ತು ಜಂಗಮಲಿಂಗ ಪೂಜೆಯ ಬಗ್ಗೆ ಹೇಳುತ್ತಾರೆ. ಇಷ್ಟಲಿಂಗ ಪೂಜೆಯು ನಮಾಜ್ ಸ್ಥಾನದಲ್ಲಿದ್ದರೆ ಜಂಗಮಲಿಂಗ ಪೂಜೆಯು ಜಕಾತ್ ಸ್ಥಾನದಲ್ಲಿದೆ. ಜಕಾತ್ ಎಂದರೆ ಶ್ರೀಮಂತರ ಸಂಪತ್ತಿನಲ್ಲಿ ಬಡವರ ಪಾಲು. ಜಂಗಮಲಿಂಗ ಪೂಜೆ ಎಂದರೆ ಕಾಯಕ ಮಾಡಿ ಗಳಿಸಿದ್ದನ್ನು ದಾಸೋಹ ರೂಪದಲ್ಲಿ ಸಮಾಜಕ್ಕೆ ಅರ್ಪಿಸುವುದು. ಇದುವೆ ಜಂಗಮ ದಾಸೋಹ. ದೇವರು ಸಮಾಜದ ರೂಪದಲ್ಲಿಯೂ ಇರುತ್ತಾನೆ ಎಂಬ ಭಾವವು ವರ್ಗರಹಿತ ಸಮಾಜದ ಭಾವವೇ ಆಗಿದೆ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಮಾನವರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ತುಂಬುತ್ತ ಮೇಲಿಲ್ಲದ ಮತ್ತು ಕೀಳಿಲ್ಲದ ವ್ಯವಸ್ಥೆಯನ್ನು ಸೃಷ್ಟಿಸಲು ಮಾರ್ಗ ತೋರಿಸಿಕೊಟ್ಟರು.

ವ್ಯಾಪಾರವನ್ನು ಅಲ್ಲಾಹನು ಧರ್ಮಬದ್ಧಗೊಳಿಸಿದ್ದಾನಲ್ಲದೆ ಬಡ್ಡಿಯನ್ನು ನಿಷೇಧಗೊಳಿಸಿದ್ದಾನೆ ಎಂದು ಕುರಾನ್ ಸಾರಿದೆ. ಹಡೆದೂಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು ಎಂದು ಬಸವಣ್ಣನವರು ತಿಳಿಸುತ್ತಾರೆ. ದುಡಿಯದೆ ಬದುಕುತ್ತ ಸಂಪತ್ತನ್ನು ಸಂಗ್ರಹಿಸುವಲ್ಲಿ ಬಡ್ಡಿಯ ಪಾತ್ರ ಹಿರಿದಾಗಿದೆ. ಅದು ಅನೈತಿಕ ಬದುಕಿಗೆ ದಾರಿ ಮಾಡಿಕೊಡುವುದು ಬಡ್ಡಿಯ ಹಣದಿಂದ ಮೌಲ್ಯಹೀನ ಸಮಾಜ ನಿರ್ಮಾಣವಾಗುವುದು. ಅಂತೆಯೆ ಏಸುಕ್ರಿಸ್ತ ಮತ್ತು ಕಾರ್ಲ್‌ಮಾರ್ಕ್ಸ್ ಅವರ ಹಾಗೆ ಪೈಗಂಬರರು ಮತ್ತು ಬಸವಣ್ಣನವರು ಬಡ್ಡಿಯನ್ನು ತೀಕ್ಷ್ಣವಾಗಿ ವಿರೋಧಿಸಿದ್ದಾರೆ. ಬಡ್ಡಿಯ ಹಣದಿಂದಲೇ ವಿಶ್ವದಲ್ಲಿ ಕೆಲವೊಂದು ರಾಷ್ಟ್ರಗಳು ದೈತ್ಯರಾಷ್ಟ್ರಗಳಾಗಿ ರೂಪುತಾಳಿದರೆ ನೂರಾರು ರಾಷ್ಟ್ರಗಳು ಅವುಗಳಿಗೆ ಬಡ್ಡಿಯನ್ನು ಕೊಡುತ್ತ ಬಡವಾಗಿವೆ. ಬಡ್ಡಿಯು ಇಡೀ ಜಗತ್ತನ್ನು ತಲ್ಲಣಗೊಳಿಸುವತ್ತ ಸಾಗಿದೆ.

ಜನರಿಗೆ ಕೃತಜ್ಞನಾಗಿರದವನು ಅಲ್ಲಾಹನಿಗೂ ಕೃತಜ್ಞನಾಗಿರಲಾರನು ಎಂದು ಪೈಗಂಬರರು ಹೇಳುತ್ತಾರೆ. ಜಂಗಮವಾಪ್ಯಾಯನವಾದಡೆ ಲಿಂದ ಸಂತುಷ್ಟಿಯಹುದಯ್ಯಾ ಎಂದು ಬಸವಣ್ಣನವರು ತಿಳಿಸುತ್ತಾರೆ. ಜನಸಮುದಾಯದ ಸುಂದರ ಬದುಕಿಗಾಗಿ ಚಿಂತಿಸುವುದು ಮತ್ತು ಅದಕ್ಕಾಗಿ ತನುಮನ ಧನಗಳನ್ನು ಅರ್ಪಿಸುವುದು ನಿಜವಾದ ದೇವರ ಸೇವೆಯಾಗಿದೆ.

ನನ್ನನ್ನು ಬಲಹೀನರ ಮತ್ತು ಬಡವರ ಮಧ್ಯೆ ಹುಡುಕಿರಿ. ನಿಶ್ಚಯವಾಗಿಯೂ ನೀವು ಅವರ ದುಡಿಮೆಯಿಂದಲೇ ಆಹಾರವನ್ನು ಸಹಾಯವನ್ನು ಪಡೆಯುತ್ತೀರಿ ಎಂದು ಪೈಗಂಬರರು ಹೇಳುತ್ತಾರೆ. ಕುದುರೆ ಸತ್ತಿಗೆಯವರ ಕಂಡರೆ ಹೊರಳಿಬಿದ್ದು ಕಾಲ ಹಿಡಿವರು, ಬಡಭಕ್ತರು ಬಂದರೆ 'ಎಡೆಯಿಲ್ಲ ಅತ್ತ ಸನ್ನಿ ಎಂಬರು' ಎಂದು ಬಸವಣ್ಣನವರು ಸಾತ್ವಿಕ ಕೋಪವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಸದಾ ಬಡವರ ಪರವಾಗಿ ನಿಲ್ಲುತ್ತಾರೆ. ಬಡವರ ಬದುಕನ್ನು ಹಸನಾಗಿಸುವುದೇ ಧರ್ಮದ ಗುರಿ ಎಂದು ಸಾರುತ್ತಾರೆ.

ನಿಮ್ಮ ಧನವನ್ನು ನೀವು ಅನ್ಯಾಯವಾಗಿ ತಿನ್ನಬಾರದು ಎಂಬುದು ಕುರಾನಿನ ಆದೇಶವಾಗಿದೆ. ಧನವ ಕೊಟ್ಟು ಜಂಗಮವನೊಲಿಸಬೇಕು ಎಂದು ಬಸವಣ್ಣನವರು ಹೇಳುತ್ತಾರೆ. ಧನವು ಸದಾ ಸಮಾಜದ ಸ್ವಾಸ್ಥ್ಯ ಕಾಪಾಡುವುದಕ್ಕೆ ಬಳಕೆಯಾಗಬೇಕು. ಇಲ್ಲದಿದ್ದರೆ ಅದು ಅಪರಾಧಗಳಿಗೆ ಮೂಲವಾಗುತ್ತದೆ. ಮನುಷ್ಯನನ್ನು ಮೌಲ್ಯವಂತನನ್ನಾಗಿ ಮಾಡುವುದು ಧರ್ಮದ ಕರ್ತವ್ಯವಾಗಿದೆ. ಆದರೆ ಆತ ಮೌಲ್ಯ ಕಳೆದುಕೊಳ್ಳತೊಡಗಿದಾಗ ಅಪರಾಧಗಳ ಸಮಾಜದ ಹುಟ್ಟಿಗೆಗೆ ಕಾರಣನಾಗುತ್ತಾನೆ. ಸಮಾಜದಲ್ಲಿ ನಡೆಯುವ ಸುಲಿಗೆಯಿಂದ ಅಪರಾಧಗಳ ಸೃಷ್ಟಿಯಾಗುತ್ತದೆ. ಸಮಾಜಸೇವೆಯಿಂದ ಸುಂದರ ಸಮಾಜದ ನಿರ್ಮಾಣವಾಗುತ್ತದೆ. ಆದ್ದರಿಂದ ನಮ್ಮ ಹಣ ಸತ್ಪಾತ್ರಕ್ಕೆ ಸಲ್ಲುವಂತೆ ನೋಡಿಕೊಳ್ಳುವುದು ಅವಶ್ಯವಾಗಿದೆ.

ಪೂರ್ವಪಶ್ಚಿಮದ ಕಡೆಗೆ ನಿಮ್ಮ ಮುಖವನ್ನು ತಿರುಗಿಸುವಲ್ಲಿ ಧರ್ಮಶೀಲತೆ ಇಲ್ಲ.

ಆದರೆ ಅಲ್ಲಾಹನಲ್ಲಿ ಅಂತಿಮ ದಿವಸದಲ್ಲಿ, ದೇವದೂತರಲ್ಲಿ, ಪ್ರವಾದಿಗಳಲ್ಲಿ ವಿಶ್ವಾಸ ವಿಡುವವರು ತಮ್ಮ ಧನವನ್ನು ಆತನ ಸಂಪ್ರೀತಿಗಾಗಿ ಬಂಧುಗಳಿಗೆ, ಅನಾಥರಿಗೆ, ದರಿದ್ರರಿಗೆ, ಸಂಚಾರಿಗಳಿಗೆ, ಸಹಾಯಾರ್ಥಿಗಳಿಗೆ ಮತ್ತು ದಾಸ್ಯ ವಿಮೋಚನೆಗೆ (ಗುಲಾಮರನ್ನು ಸ್ವತಂತ್ರಗೊಳಿಸುವುದಕ್ಕೆ) ಕೊಡುವವರು, ಕಷ್ಟಕಾರ್ಪಣ್ಯದಲ್ಲಿ ಹಾಗೂ ಸಮರದಲ್ಲಿ ಸಹನೆ ಕಳೆದುಕೊಳ್ಳದವರೇ ಪುಣ್ಯಶೀಲರು, ಇಂಥವರೇ ದೈವಭಕ್ತರು ಆಗಿರುತ್ತಾರೆ ಎಂದು ಕುರಾನ್ ಸ್ಪಷ್ಟಪಡಿಸಿದೆ. ಉಂಬ ಜಂಗಮ ಬಂದಡೆ ನಡೆಯೆಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ ಎಂದು ಬಸವಣ್ಣನವರು ವಿಷಾದ ವ್ಯಕ್ತಪಡಿಸುತ್ತಾರೆ. ಜಗತ್ತನ್ನು ದುಃಖದಿಂದ ಮತ್ತು ಎಲ್ಲ ರೀತಿಯ ಅಸಹಾಕತೆಗಳಿಂದ ಪಾರುಮಾಡುವಂಥ ಕ್ರಿಯೆಯಲ್ಲಿ ತೊಡಗುವುದು ಅವಶ್ಯವಾಗಿದೆ. ಸುಮ್ಮನೆ ನಮಾಜ್ ಮಾಡುತ್ತ ಇಲ್ಲವೆ ಇಷ್ಟಲಿಂಗ ಪೂಜೆ ಮಾಡುತ್ತ ಕೂಡುವುದರಲ್ಲಿ ಅರ್ಥವಿಲ್ಲ. ಅವುಗಳ ಜೊತೆ ಸತ್ಕಾರ್ಯಗಳನ್ನು ಮಾಡುವುದರಲ್ಲೇ ಬದುಕಿನ ಸಾರ್ಥಕತೆ ಇದೆ.

ತುಳಿತಕ್ಕೀಡಾದವರು ಜಗತ್ತಿನ ನಾಯಕರು ಮತ್ತು ನೇರ ವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿದ್ದೇವೆ ಎಂದು ಕುರಾನ್ ಹೇಳುತ್ತದೆ. ಬಸವಣ್ಣನವರ ಕೂಡಲಸಂಗಮದೇವ ಮಾನವ ಹಕ್ಕುಗಳ ದೇವರಾಗಿದ್ದಾನೆ. ಆತ ಅಸ್ಪೃಶ್ಯ ಮಾದಾರ ಚೆನ್ನಯ್ಯನ ಮನೆಯಲ್ಲಿ ಅಂಬಲಿ ಕುಡಿಯುತ್ತಾನೆ. ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!... ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲ್ಲುಂಡಕಾರಣ ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ಪೈಗಂಬರರ ಅಲ್ಲಾಹ್ ಮತ್ತು ಬಸವಣ್ಣನವರ ಕೂಡಲಸಂಗದೇವಾ ಸದಾ ಬಡವರ, ದುಡಿಯುವವರ, ನಿರ್ಗತಿಕರ ಮತ್ತು ತುಳಿತಕ್ಕೊಳಗಾದವರ ಪರ ಇದ್ದಾರೆ. ಸದ್ಗುಣಗಳ ಆಗರವಾದವರ ಜೊತೆ ಇದ್ದಾರೆ. ಅವರಿಬ್ಬರೂ ಒಂದೇ ಆಗಿದ್ದಾರೆ. ದೇವನೊಬ್ಬ ನಾಮ ಹಲವು ಎಂದು ಬಸವಣ್ಣನವರು ಹೇಳಿದ್ದಾರೆ.

ದುಡಿದು ಸಂಪಾದಿಸುವ ಮುಸ್ಲಿಮನನ್ನು ಅಲ್ಲಾಹುನು ಪ್ರೀತಿಸುತ್ತಾನೆ ಎಂದು ಪೈಗಂಬರರು ಹೇಳುವಲ್ಲಿ ಪ್ರತಿಯೊಬ್ಬ ಮುಸ್ಲಿಮನು ಕಾಯಕಜೀವಿಯಾಗಿರಬೇಕಾಗುತ್ತದೆ ಎಂದು ಎಚ್ಚರಿಸುತ್ತಾರೆ. 'ಶರಣರ ಬರವೆನಗೆ ಪ್ರಾಣಜೀವಾಳವಯ್ಯಾ' ಎಂದು ಬಸವಣ್ಣನವರು ತಮ್ಮ ಧರ್ಮದ ಮೂಲಾಧಾರಗಳಾದ ಕಾಯಕಜೀವಿಗಳನ್ನು ಕೊಂಡಾಡುತ್ತಾರೆ.

ತನ್ನ ಕೈಯಿಂದ ಸಂಪಾದಿಸಿದುದಕ್ಕಿಂತ ಉತ್ತಮ ಆಹಾರವನ್ನು ಎಂದೂ ಯಾರೂ ತಿಂದಿಲ್ಲ ಎಂದು ಪೈಗಂಬರರು ಹೇಳುತ್ತಾರೆ. ಕೊಲುವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ, ಕುಲವೇನೋ ಅವಂದಿರ ಕುಲವೇನೋ, ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು ಎಂದು ಬಸವಣ್ಣನವರು ಹೇಳುತ್ತಾರೆ. ಯಜ್ಞಯಾಗಾದಿಗಳಲ್ಲಿ ಪ್ರಾಣಿ ಬಲಿ ಕೊಡುವವರೇ ಮಾದಿಗರು. ಕಾಯಕ ಮಾಡದೇ ವರ್ಷಗಟ್ಟಲೆ ನಡೆಯುವ ಆ ಯಜ್ಞಯಾಗಾದಿಗಳಲ್ಲಿ ಬರಿ ತಿನ್ನುವುದು ಹೊಲಸು. ಆದರೆ ಹೊಲೆ ಮಾದಿಗರು ಮೊದಲು ಮಾಡಿ ಜಾತಿಸಂಕರವಾಗಿ, ಎಲ್ಲರೂ ಒಂದಾಗಿ

ದುಡಿಯುತ್ತ ಬದುಕುವ ಕೂಡಲಸಂಗನ ಶರಣವೇ ಕುಲಜರು ಎಂದು ಬಸವಣ್ಣನವರು ಘೋಷಿಸುತ್ತಾರೆ.

ಕಾಯಕವು ಕಾಯವನ್ನು ಸುಂದರಗೊಳಿಸುತ್ತದೆ, ಸದೃಢಗೊಳಿಸುತ್ತದೆ. ಕಾಯಕದಿಂದ ಆಗುವ ಮಾನವನ ಬದುಕಿನಲ್ಲಿ ಹಸಿವು ಬಹುಮುಖ್ಯವಾಗಿದೆ. ಈ ಹಸಿವು ಮಾನವನ ರುಚಿಶಕ್ತಿಯನ್ನು ಹೆಚ್ಚಿಸುತ್ತದೆ. ಅದರಿಂದಾಗಿ ಸಾದಾ ಆಹಾರ ಕೂಡ ರುಚಿಕಟ್ಟಾಗುತ್ತದೆ. ಚೆನ್ನಾಗಿ ದುಡಿದಾಗ ಒಳ್ಳೆಯ ನಿದ್ರೆ ಬಂದು ನಿಜವಾದ ವಿಶ್ರಾಂತಿ ಲಭಿಸುವುದು. ಹೀಗೆ ಹಸಿವು ಮತ್ತು ವಿಶ್ರಾಂತಿ ಎಂಬುವು ನಿಜವಾದ ಅರ್ಥದಲ್ಲಿ ಬಡವರ ಸೊತ್ತಾಗಿವೆ. ಶ್ರೀಮಂತರು ಎಷ್ಟೇ ಸಂಪತ್ತು ಗಳಿಸಿದರೂ ಬಡವರ ಈ ಸೊತ್ತು ಅವರ ಪಾಲಾಗಲು ಸಾಧ್ಯವಿಲ್ಲ. ಬಡವರಿಗೆ ಕಾಯಕದಿಂದ ಸಿಗುವ ಆನಂದವನ್ನು ಶ್ರೀಮಂತರು ಖರೀದಿಸಲು ಸಾಧ್ಯವಿಲ್ಲ. ಇಂಥ ಬಡವರೇ ಬಸವಣ್ಣನವರ ಶರಣಸಂಕುಲದಲ್ಲಿ ಇದ್ದವರು. ಇವರು ಸ್ವತಂತ್ರಧೀರರು. ಯಾವುದಕ್ಕೂ ಆಸೆಪಟ್ಟವರಲ್ಲ. ಕಾಯಕದಲ್ಲಿ ದೇವರನ್ನು ಕಂಡವರು. ಸಕಲ ಜೀವಾತ್ಮರಿಗೆ ಲೇಸ ಬಯಸಿದವರು. ಆ ಮೂಲಕ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದವಿಲ್ಲದ ಸಮಾಜವನ್ನು ಸೃಷ್ಟಿಸಿದವರು. ಪೈಗಂಬರರು ಕೂಡ ಇಂಥದೆ ಸಮಾಜದ ನಿರ್ಮಾಣವನ್ನು ಬಯಸಿದ್ದರು.

○

ಆನು ದೇವಾ ಇಂಬಿನಲಿ ಇದ್ದೇನೆ

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೈದಾರೆ.
ಆನು ದೇವಾ ಹೊರಗಣವನು.
'ಸಂಬೋಳಿ ಸಂಬೋಳಿ' ಎನುತ ಇಂಬಿನಲಿ ಇದ್ದೇನೆ.
ಕೂಡಲಸಂಗಮದೇವಾ
ನಿಮ್ಮ ನಾಮವಿಡಿದ ಅನಾಮಿಕ ನಾನು.

ಬಸವಣ್ಣನವರ ಇಷ್ಟಲಿಂಗಕ್ಕೆ ದೇಗುಲ ಇಲ್ಲ. ದೇಹವೆಂಬ ದೇಗುಲದಲ್ಲಿ ಇರುವ ದೇವರ ಪ್ರತೀಕ ಅದಾಗಿದೆ. ದೇಹದಲ್ಲಿ ದೇವರಿದ್ದಾನೆ. ಆತನೊಳಗೆ ಇಡೀ ವಿಶ್ವವೇ ಇದೆ. ಈ ಅರಿವಿನ ಕುರುಹು ಇಷ್ಟಲಿಂಗವಾಗಿದೆ. ಆದರೆ ಸ್ಥಾವರಲಿಂಗಕ್ಕೆ ದೇಗುಲವಿದೆ. ಆ ಲಿಂಗಾರ್ಚನೆಗಾಗಿ ಅರ್ಚಕರೂ ಇದ್ದಾರೆ. ಅರ್ಚಕರ ಜೊತೆ ಲಿಂಗಾರ್ಚನೆ ಮಾಡುವ 'ಮಹಿಮರೂ' ಸ್ಥಾವರಲಿಂಗದೊಡನೆ ಸಲಿಗೆವಂತರಾಗಿ ಗರ್ಭಗುಡಿಯೊಳಗೆ ಇದ್ದಾರೆ.

ಬಸವಣ್ಣನವರ ಪೂರ್ವಜರು ಶೈವ ಬ್ರಾಹ್ಮಣರು. ಬಸವಣ್ಣನವರು ತಿರಸ್ಕರಿಸುವ ಈ ದೇವಾಲಯ ಶೈವ ಬ್ರಾಹ್ಮಣರ ದೇವಾಲಯ. ಇಲ್ಲಿ ಅಸ್ಪೃಶ್ಯರಿಗೆ ಪ್ರವೇಶವಿಲ್ಲ. ಈ ದೇವಾಲಯದೊಳಗೆ ಸಲಿಗೆವಂತರಾಗಿ ಇರುವವರು ಶ್ರೀಮಂತ ಸವರ್ಣೀಯರು ಮಾತ್ರ. ಬಸವಣ್ಣನವರು ಹೇಳುವಂತೆ ಉಳ್ಳವರು ಮಾಡುವ ಶಿವಾಲಯಗಳಿವು. ಈ ಉಳ್ಳವರೇ ಸವರ್ಣೀಯ ಶ್ರೀಮಂತರು. ಏಕೆಂದರೆ ಮನುಸ್ಮೃತಿಯ ಪ್ರಕಾರ ಅಸ್ಪೃಶ್ಯರಾದವರಿಗೆ ಸಂಪತ್ತಿನ ಶೇಖರಣೆಯ ಹಕ್ಕಿಲ್ಲ. ಅಸ್ಪೃಶ್ಯರು ಎಂದೂ ಉಳ್ಳವರಾಗದಂಥ ವ್ಯವಸ್ಥೆಯನ್ನು ಮನುಸ್ಮೃತಿ ಸೃಷ್ಟಿಸಿತ್ತು. ಉಳ್ಳವರು ಮತ್ತು ಬ್ರಾಹ್ಮಣರು ಮಾತ್ರ ಗರ್ಭಗುಡಿಯೊಳಗೆ ಪ್ರವೇಶಿಸುವ ಹಕ್ಕನ್ನು ಹೊಂದಿದ್ದರು. ದೇವಾಲಯಗಳಲ್ಲೇ ಸಕಲ ಸುಖಭೋಗಗಳನ್ನು ಕೂಡ ಪಡೆಯುವ ಅವಕಾಶ ಇವರಿಗಿತ್ತು. ಸಾಹಿತ್ಯ, ಸಂಗೀತ ಮತ್ತು ನೃತ್ಯ ಬಲ್ಲ ದೇವದಾಸಿಯರು, ಲೈಂಗಿಕ ಶಿಲ್ಪಕಲೆ ಮತ್ತು ಮುತ್ತುರತ್ನ, ವಜ್ರವೈಡೂರ್ಯ ಹಾಗೂ ಹೊನ್ನಿನಿಂದ ಕೂಡಿದ ಸಂಪತ್ತಿನಿಂದ ದೇವಾಲಯಗಳು ತುಂಬಿತುಳುಕುತ್ತಿದ್ದವು. ಹೀಗಾಗಿ ಉಳ್ಳವರ ಸರ್ವಾಕರ್ಷಣೆಯ ಕೇಂದ್ರಗಳಾಗಿದ್ದವು. ಬ್ರಾಹ್ಮಣರ ಐಹಿಕ ಅಭ್ಯುದಯಕ್ಕೆ ಇವು ಸಹಕಾರಿ ಆಗಿದ್ದವು. ಇವರೆಲ್ಲ ದೇವರ ಜೊತೆ 'ಸಲುಗೆಯಿಂದ ಇರುವ ಮಹಿಮರು' ಎಂದು ಬಸವಣ್ಣನವರು ಸ್ತುತಿನಿಂದೆ ಮಾಡಿದ್ದಾರೆ.

ಬಡವರಾದ ಅಸ್ಪೃಶ್ಯರಿಗೆ ಈ ದೇವಾಲಯಗಳೊಳಗೆ ಪ್ರವೇಶವಿರಲಿಲ್ಲ. ದೇವಾಲಯದ ಗೋಡೆಯ ಕಿಂಡಿಯಿಂದ ದೇವರನ್ನು ನೋಡಬೇಕಿತ್ತು. ದೇವಾಲಯಗಳ ಇಂಥ ಕಿಂಡಿಗಳು ಶೂದ್ರರ ಮತ್ತು ಅತಿಶೂದ್ರರಾದ ಅಸ್ಪೃಶ್ಯರ ಕಿಂಡಿಗಳೇ ಆಗಿವೆ. ಹೀಗೆ ಅಸ್ಪೃಶ್ಯರು ದೇವಾಲಯಗಳಿಗೆ ಹೊರಗಿನವರಾಗಿದ್ದರು. ದೇವಾಲಯದ ಒಳಗೆ ಹೋಗುವವರಿಗೂ ಹೊರಗಿನವರಾಗಿದ್ದರು.

ಬಸವಣ್ಣನವರು ಇಂಥ ದೇವಾಲಯದ ಹೊರಗೆ ಅಸ್ಪೃಶ್ಯರ ಜೊತೆ ನಿಂತು ಚಿಂತಿಸಿದ ಅನುಭವ ಈ ವಚನದಲ್ಲಿದೆ. ಅಸ್ಪೃಶ್ಯರಿಗೆ ಪ್ರವೇಶ ನಿರಾಕರಿಸುವ ದೇವಾಲಯಗಳನ್ನು, ಅಂಥ ವ್ಯವಸ್ಥೆಯನ್ನು ರೂಪಿಸಿದ ಮನುಧರ್ಮವನ್ನು, ಆ ವ್ಯವಸ್ಥೆಯನ್ನು ಜಾರಿಗೊಳಿಸಿದ ಬ್ರಾಹ್ಮಣರನ್ನು ಮತ್ತು ಆ ವ್ಯವಸ್ಥೆಯನ್ನು ಪೋಷಿಸಿದ ಉಳ್ಳವರನ್ನು ಅವರು ವಿರೋಧಿಸಿದ್ದಾರೆ. ಈ ಮನುಧರ್ಮದ ವ್ಯವಸ್ಥೆಗೆ ಬಸವಣ್ಣನವರು ಹೊರಗಿನವರಾಗಿದ್ದಾರೆ. ದೇವಾಲಯಗಳನ್ನು ಅವರು ಧಾರ್ಮಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನೋಡಿದ್ದಾರೆ. ಬಡವರು ಮತ್ತು ಅಸ್ಪೃಶ್ಯರು ದೇವಾಲಯಗಳಿಗೆ ಬಿಟ್ಟಿ ಕೆಲಸ ಮಾಡುತ್ತಲೇ ಬಂದಿದ್ದಾರೆ. ಆದರೂ ಅವರಿಗೆ ಧಾರ್ಮಿಕವಾಗಿ ನೆಮ್ಮದಿ ಸಿಗುವಂಥ ವಾತಾವರಣವನ್ನು ಬ್ರಾಹ್ಮಣರು ಮತ್ತು ಉಳ್ಳವರು ಕಲ್ಪಿಸಲಿಲ್ಲ. ಸಾಮಾಜಿಕವಾಗಿ ಉಳ್ಳವರು ಮತ್ತು ಬಡವರ ಮಧ್ಯದ ನಿಯಂತ್ರಣ ರೇಖೆಯ ಹಾಗೆ ಈ ದೇವಾಲಯಗಳ ಬಳಕೆಯಾಗಿದೆ. ಸಹಸ್ರಾರು ವರ್ಷಗಳಿಂದ ನಮ್ಮ ಬಹುಪಾಲು ಜನಸಮುದಾಯ ಬಡತನದಲ್ಲೇ ಕೊಳೆಯುವಂತಾಗಲು ಖರ್ಚಿನ ದೇವಾನುದೇವತೆಗಳೇ ಬಹುಮುಖ್ಯ ಕಾರಣವಾಗಿದ್ದು ಅವು ಸದಾ ಮೇಲ್ಜಾತಿ ಮತ್ತು ಮೇಲ್ವರ್ಗದವರ ಪರವಾಗಿಯೇ ಇವೆ. ಇಂಥ ದೇವತೆಗಳನ್ನೆಲ್ಲ ತಿರಸ್ಕರಿಸುವುದನ್ನು ಬಸವಣ್ಣನವರು ಕಲಿಸಿಕೊಟ್ಟರು. ಇಂಥ ದೇವತೆಗಳ ಜೊತೆ ಸಲುಗೆಯಿಂದ ಇರುವವರ ವಿರುದ್ಧ ಸತ್ಯಾಗ್ರಹ ಹೂಡಿದರು. ಈ ವಚನ ಬಸವಣ್ಣನವರು ಸತ್ಯಾಗ್ರಹಿಗಳೆಂಬುದನ್ನು ಸೂಚಿಸುತ್ತದೆ.

ಬಸವಣ್ಣನವರು ದೇವಾಲಯವನ್ನು ಪ್ರವೇಶಿಸುವ ಹಕ್ಕನ್ನು ಹೊಂದಿದ್ದಾರೆ. ಆದರೆ ಅವರು ದೇವಾಲಯವನ್ನು ಪ್ರವೇಶಿಸದೆ ದೇವಾಲಯಗಳಿಂದ ಬಹಿಷ್ಕೃತರಾದ ಜನಸಮುದಾಯದ ಜೊತೆ ನಿಂತು ಸತ್ಯಾಗ್ರಹ ಮಾಡಿದ್ದಾರೆ. ಅಂತೆಯೆ ಘೋಷಣೆ ರೂಪದ ಈ ವಚನ ಬರೆದಿದ್ದಾರೆ. ಈ ಘೋಷಣೆಯಲ್ಲಿ ಉಳ್ಳವರ ಮೇಲೆ ಸಾತ್ವಿಕ ಸಿಟ್ಟಿದೆ, ವ್ಯಂಗವಿದೆ, ತಿರಸ್ಕಾರವಿದೆ, ಹೋರಾಟಗಾರರು ನೀಡುವಂಥ ಎಚ್ಚರಿಕೆಯ ಮಾತೂ ಇದೆ. ತಾನು ಬಹಿಷ್ಕೃತ ಜನರಲ್ಲಿ ಒಂದಾಗಿ ಹೋಗಿದ್ದೇನೆ ಎಂಬುದನ್ನು ಸ್ಪಷ್ಟಪಡಿಸುವ ಎದೆಗಾರಿಕೆಯೂ ಇದೆ.

ಬಸವಣ್ಣನವರ ಈ ಎಲ್ಲ ಕ್ರಿಯೆಗೊಂದು ಸೈದ್ಧಾಂತಿಕೆ ಹಿನ್ನೆಲೆ ಇದೆ. ಅವರಿಗೆ ಕೂಡಲಸಂಗಮದೇವ ಎಂಬುದೊಂದು ಅಂತಃಸಾಕ್ಷಿಯಿಂದ ಕೂಡಿದ ಪರಿಪೂರ್ಣ ಸಿದ್ಧಾಂತ. ಅವರ ಎಲ್ಲ ನಡೆ ಮತ್ತು ನುಡಿ ಈ ಸೈದ್ಧಾಂತಿಕ ಹಿನ್ನೆಲೆಯಲ್ಲೇ ಇವೆ.

ಬಸವಣ್ಣನವರು ಈ ವಚನದಲ್ಲಿ ಚಾತುರ್ವರ್ಣ ಪದ್ಧತಿಯ ಸಾಮಾಜಿಕ ವ್ಯವಸ್ಥೆಯಿಂದ ಸಿಡಿದು ಇಂಬಿನಲ್ಲಿ (ದೂರದಲ್ಲಿ) ನಿಂತಿದ್ದಾರೆ. ದೇವಾಲಯಗಳಿಂದ ಜನರು ಬಿಡುಗಡೆಗೊಳ್ಳುವ ದಾರಿಯನ್ನು ತೋರಿದ್ದಾರೆ. ಅವರು ದೇವಾಲಯಗಳ ಸುಲಿಗೆ ವ್ಯವಸ್ಥೆಯಿಂದ ದೂರದಲ್ಲಿದ್ದರೂ ಎಚ್ಚರಿಕೆ ಎಚ್ಚರಿಕೆ (ಸಂಬೋಳಿ ಸಂಬೋಳಿ) ಎಂದು ತಮ್ಮ ಜಾಗೃತಾವಸ್ಥೆಯನ್ನು ಸೂಚಿಸುತ್ತಿದ್ದಾರೆ. ಕೂಡಲಸಂಗಮದೇವನೊಬ್ಬನೇ ಅಂದರೆ ಸಿದ್ಧಾಂತವೊಂದೇ ಶ್ರೇಷ್ಠ; ನಾವೆಲ್ಲ ಅದಕ್ಕೆ ಅಧೀನರಾಗಿದ್ದರಿಂದ ನಮ್ಮಲ್ಲಿ ಮೇಲು ಕೀಳು ಇರಲು ಸಾಧ್ಯವಿಲ್ಲ. ಈ ಸತ್ಯದ ಅರಿವುಳ್ಳವರು ಅನಾಮಿಕರಂತೆ ಬದುಕುತ್ತ ಅಹಂಕಾರದ ಮೇಲೆ ವಿಜಯ ಸಾಧಿಸುತ್ತಾರೆ. ಹೀಗೆ ಈ ವಚನ ಬಸವಣ್ಣನವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಜಾತಿಗಳು ಅಹಂಕಾರದ ಪ್ರತೀಕ. ಮನುಷ್ಯನ ಅಹಂ ನಾಶವಾಗದೆ ಜಾತಿಗಳನ್ನು ನಾಶ ಮಾಡಲಿಕ್ಕಾಗದು. ಅಹಂಕಾರ ಅಳಿದಾಗ ಜಾತಿ ಸಂಕರ ಸಾಧ್ಯ. ಜಾತಿ ಸಂಕರದಿಂದ ಜಾತ್ಯತೀತ ಸಮಾಜ ನಿರ್ಮಾಣ ಸಾಧ್ಯ. ವೈದಿಕ ಬಸವಣ್ಣ ಅವೈದಿಕ ಬಸವಣ್ಣನಾದುದು ಭರತಖಂಡದ ಚರಿತ್ರೆಯಲ್ಲಿ ಅನನ್ಯ ಘಟನೆಯಾಗಿದೆ. ವೈದಿಕತ್ವ ಕಳೆದುಕೊಂಡು ಅವೈದಿಕ ಪ್ರಜ್ಞೆ ಪಡೆಯುವುದು ಸಾಮಾನ್ಯವಲ್ಲ. ಅದಕ್ಕಾಗಿ ಬಸವಣ್ಣನವರು ಮಾರ್ಗವೊಂದನ್ನು ಕಂಡುಹಿಡಿದರು. ಅದುವೇ ಕೆಳಜಾತೀಕರಣ ಅವರು ಮಾನಸಿಕವಾಗಿ ಕೆಳಜಾತೀಕರಣಕ್ಕೊಳಗಾದರು.

ಭಕ್ತಿ ಇಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ,
ಚೆನ್ನಯ್ಯನ ಮನೆಯಲ್ಲೂ ಬೇಡಿದೆ,
ದಾಸಯ್ಯನ ಮನೆಯಲ್ಲೂ ಬೇಡಿದೆ,
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ.

ಹೀಗೆ ಅವರು ಕೆಳಜಾತಿಗಳ ಮಹಾಪುರುಷರಿಂದ ಅನುಭವಾಮೃತ ಪಡೆದರು. ಆ ಮೂಲಕ ಕೆಳಜಾತೀಕರಣಕ್ಕೊಳಗಾಗುವುದನ್ನು ಸಮಾಜಕ್ಕೆ ತೋರಿಸಿಕೊಟ್ಟರು. ಅಹಂಕಾರ ಮರ್ದನ ಮಾಡಿ ಮಹೋನ್ನತ ಮಾನವರಾದರು. ದೇವಸ್ವರೂಪರೇ ಆದರು. 'ಕುಲಮದಕ್ಕೆ ಹೋರಿ ಜಂಗಮಭೇದವ ಮಾಡುವೆ, ಫಲವೇನು?', 'ಕುಲವನರಸುವರೆ ಶರಣರಲ್ಲಿ, ಜಾತಿಸಂಕರವಾದ ಬಳಿಕ' ಎಂದು ಪ್ರಶ್ನಿಸಿದರು.

ದೇವಸಹಿತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ '
ನಿಮ್ಮಾಣೆ! ನಿಮ್ಮ ಪುರಾತನರಾಣೆ! ತಲೆದಂಡ! ತಲೆದಂಡ!
ಕೂಡಲಸಂಗಮದೇವಾ ಭಕ್ತರಲ್ಲಿ ಕುಲವನರಿಸಿದಡೆ
ನಿಮ್ಮ ರಾಣಿವಾಸದಾಣೆ!

ಎಂದು ಜಾತ್ಯತೀತ ನಿಲುವನ್ನು ಎತ್ತಿಹಿಡಿದು, ಬಸವಧರ್ಮ ಅಂದರೆ ಶರಣಧರ್ಮ ಜಾತಿಸಂಕರ ಧರ್ಮ, ಜಾತ್ಯತೀತ ಧರ್ಮ, ಇಡೀ ಮಾನವಕುಲದ ಧರ್ಮ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. 'ಮಾದಾರ ಚೆನ್ನಯ್ಯನ ಮನೆಯ ಮಗ ನಾನು' ಎಂದು ಸಾರಿದ್ದಾರೆ.

'ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ನೋಡಾ ಕೂಡಲಸಂಗಮದೇವಾ.' ಎಂದು ಕಟ್ಟಕಡೆಯ ಮಾನವ ತನ್ನ ಚಾರಿತ್ರ್ಯದ ಮೂಲಕ ವ್ಯಕ್ತಿತ್ವವಿಕಸನಗೊಂಡು ದೇವರಿಗಿಂತ ಮಿಗಿಲಾಗಬಲ್ಲ ಎಂದು ಸೂಚಿಸಿದ್ದಾರೆ.

'ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ? ಎಂದು ಹೇಳುತ್ತ 'ಲಿಂಗವಿದ್ದಲ್ಲಿ ಹೊಲೆಯುಂಟೆ?' ಎಂದು ಎಚ್ಚರಿಸಿದ್ದಾರೆ. 'ಉತ್ತಮ ಕುಲದಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ' ಎಂದು ಕೂಡಲಸಂಗಮದೇವನಲ್ಲಿ ಬೇಡಿಕೊಂಡಿದ್ದಾರೆ. 'ಆನು ಹಾರುವನೆಂದಡೆ ಕೂಡಸಂಗಮದೇವ ನಗುವನಯ್ಯಾ.' ಎಂದು ಲೋಕಕ್ಕೆ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ 'ಆನು ದೇವಾ ಹೊರಗಣವನು' ಎಂದು ಬಸವಣ್ಣನವರು ಹೇಳುವ 'ಲಿಂಗಾರ್ಚನೆಯ....' ವಚನವನ್ನು ಗ್ರಹಿಸಬೇಕು. ಈ ವಚನದಲ್ಲಿ ಬರುವ 'ಹೊರಗಣವನು', 'ಸಂಬೋಳಿ' ಮತ್ತು 'ಅನಾಮಿಕ' ಪದಗಳು ಶ್ಲೇಷಾರ್ಥ ಹೊಂದಿವೆ. 'ಹೊರಗಣವನು' ಎಂದರೆ ಬ್ರಾಹ್ಮಣ್ಯದಿಂದ ಹೊರಬಂದವನು ಮತ್ತು ಅಸ್ಪೃಶ್ಯರ ಜೊತೆ ಒಂದಾದವನು. 'ಸಂಬೋಳಿ' ಎಂಬುದು ಸವರ್ಣೀಯರ ಕೇರಿಗಳಿಗೆ ದಲಿತರು ಬರುವಾಗ ಬಳಸುವ ಪದ. ಹೀಗೆ ಬರುವಾಗ ಅವರು ದಾರಿಯ ಬದಿ ಉಗುಳುವಂಥ ಪರಿಸ್ಥಿತಿ ಕೂಡ ಇರಲಿಲ್ಲ. ಆದಕ್ಕಾಗಿ ಕೊರಳಲ್ಲಿ ಗಡಿಗೆ ಕಟ್ಟಿಕೊಳ್ಳುತ್ತಿದ್ದರು. ದಾರಿಯ ಮೇಲೆ ತಮ್ಮ ಹೆಜ್ಜೆಗುರುತುಗಳು ಮೂಡದಂತೆ ಅವರು ನೋಡಿಕೊಳ್ಳಬೇಕಿತ್ತು. ಆದ್ದರಿಂದ ಅವರು ತಮ್ಮ ಹೆಜ್ಜೆಗುರುತುಗಳು ಅಳಿಸಿಹೋಗುವ ಹಾಗಿ ಟೊಂಕಕ್ಕೆ ಪೊರಕೆ ಕಟ್ಟಿಕೊಳ್ಳುತ್ತಿದ್ದರು. ಬಸವಣ್ಣನವರು ಸಂಬೋಳಿ ಪದವನ್ನು ಎಚ್ಚರ ಎಂಬರ್ಥದಲ್ಲಿ ಬಳಸಿದ್ದಾರೆ. 'ಅನಾಮಿಕ' ಅಹಂಕಾರ ಮುಕ್ತ ಎಂಬರ್ಥ ಕೊಡುತ್ತದೆ. 'ಹೊಲೆಯ' ಎಂಬ ಅರ್ಥವನ್ನೂ ಕೂಡುತ್ತದೆ. ಹೀಗೆ ಅವರು ಈ ವಚನದಲ್ಲಿ ಬ್ರಾಹ್ಮಣ್ಯ ವಿರೋಧಿ ನಿಲುವನ್ನು ಮತ್ತು ಅಸ್ಪೃಶ್ಯರ ಪರವಾದ ನಿಲುವನ್ನು ಏಕ ಕಾಲಕ್ಕೇ ತಾಳಿದ್ದಾರೆ. ಈ ನಿಲುವುಗಳು ಒಂದಕ್ಕೊಂದು ಪೂರಕವಾಗಿವೆ. ಬಸವಣ್ಣನವರ ಅಸ್ಪೃಶ್ಯರ ಪರ ನಿಲುವು ಬರಿ ಬಾಯಿಮಾತಿನದಾಗಿರಲಿಲ್ಲ. ಅಂತೆಯೆ ಮನುಧರ್ಮವನ್ನು ವಿರೋಧಿಸದೆ ಬಸವಧರ್ಮವನ್ನು ಪಾಲಿಸಲು ಸಾಧ್ಯವಿಲ್ಲ. ಕೆಳಜಾತಿಯ ಬಸವಣ್ಣನನ್ನು ಸೃಷ್ಟಿಸಬಯಸುವವರು ಕೆಳಜಾತೀಕರಣಗೊಂಡ ಬಸವಣ್ಣ ಎಂಥ ಅನುಪಮ ಶಕ್ತಿಶಾಲಿ ಎಂಬುದನ್ನು ಮನಗಾಣುವುದು ೨೧ನೇ ಶತಮಾನದ ಬಹುಮುಖ್ಯ ಅವಶ್ಯಕತೆಗಳಲ್ಲಿ ಒಂದಾಗಿದೆ.

○

ನಮ್ಮ ಪ್ರಕಟಣೆಗಳು

ಕಥಾ ಸಂಕಲನ

*1. ಕರ್ಪೂರದ ಕಾಯದಲ್ಲಿ	ಡಾ. ರಾಜಶೇಖರ ನೀರಮಾನ್ವಿ	15/-
*2. ನೀರಮಾನ್ವಿ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	15/-
*3. ನಾರೀ ಹಳ್ಳದ ದಂಡೆಯಲ್ಲಿ	ಚಂದ್ರಕಾಂತ ವಡ್ಡು	15/-
*4. ಮಣ್ಣಿನ ಬಳೆ ಮತ್ತು ಇತರ ಕತೆಗಳು	ಶಾಂತಾರಾಮ ಸೋಮಯಾಜಿ	30/-
*5. ಹಂಗಿನರಮನೆಯ ಹೊರಗೆ	ಡಾ. ರಾಜಶೇಖರ ನೀರಮಾನ್ವಿ	60/-
*6. ಅನಾಥ ಪಕ್ಷಿಯ ಕಲರವ	ವೀರಭದ್ರ	125/-
*7. ಕಾಳಬೆಳುದಿಂಗಳ ಸಿರಿ	ರಾಜಶೇಖರ ಹತಗುಂದಿ	45/-
*8. ಹಣದಿ	ಶಿವಕುಮಾರ ನಾಗವಾರ	60/-
*9. ಪಟ್ಟಾ	ಚಿತ್ರಶೇಖರ ಕಂಠಿ	45/-
*10. ಉಡಿಯಲ್ಲಿಯ ಉರಿ	ಕಲಿಗಣನಾಥ ಗುಡದೂರು	45/-
*11. ಮಣ್ಣಿನ ಕುಡಿಕೆ	ಡಾ. ಮಲ್ಲಿಕಾರ್ಜುನ ವಣೇನೂರು	50/-
*12. ಹಂಸೆ ಹಾರಿತ್ತು	ಬದರಹಳ್ಳಿ ನರಸಿಂಹಮೂರ್ತಿ	75/-
*13. ಬಾಳೆಗಿಡ ಗೊನೆಹಾಕಿತು	ಬಿ. ಎಂ. ಬಶೀರ್	30/-
*14. ವಾಸ್ತವದ ಕನವರಿಕೆ	ಡಿ. ಬಿ. ರಜಿಯಾ	30/-
*15. ತಪ್ಪಂಡ	ಡಾ. ಬಸವರಾಜ ಸಾದರ	45/-
*16. ಹುಡುಕಾಟ	ಅಬ್ಬಾಸ್ ಮೇಲಿನಮನಿ	60/-
17. ಪ್ರಕ್ಷುಬ್ಧ ಅಲೆಗಳು	ಡಾ. ಪ್ರಹ್ಲಾದ ಅಗಸನಕಟ್ಟೆ	40/-
18. ಲದೇಣಿಯಾ	ಕೃಷ್ಣ ನಾಯಕ್	50/-
19. ಮೀಯುವ ಆಟ	ಡಾ. ಎಚ್. ನಾಗವೇಣಿ	60/-
20. ಕಾಡಿನ ಬೇರು	ಡಾ. ಶಾಂತರಸ ಹೆಂಬೇರಾಳು	35/-
21. ವಸುಂಧರೆಯ ಗ್ಯಾನ	ಡಾ. ಎಚ್. ನಾಗವೇಣಿ	35/-
22. ಸದ್ಯಕಿದು ಹುಚ್ಚರ ಸಂತಿ	ಹಸನ್ ನಯೀಂ ಸುರಕೋಡ	50/-
23. ಮೋಹನ ದಾಸ	ಆರ್. ಪಿ. ಹೆಗಡೆ	50/-
24. ಬೇರುಗಳು	ವೆಂಕಟೇಶ ಮಾಚಕನೂರ	50/-

ಕಾವ್ಯ

*25. ಹಟವಾದಿ ಮತ್ತು ಹುಡುಗಿ	ಡಾ. ಬೂದಗುಪ್ಪ ಪ್ರಹ್ಲಾದರೆಡ್ಡಿ	60/-
*26. ಗಾಂಧಿಯೊಂದಿಗೆ	ಪ್ರಮೋದ್ ತುರ್ವಿಹಾಳ್	30/-
27. ಆ ಅಜ್ಜ - ಈ ಮೊಮ್ಮಗ	ಮುದೇನೂರ ಸಂಗಣ್ಣ	75/-
*28. ತಮಾಷಾ	ವಿಕ್ರಮ ವಿಸಾಜಿ	45/-
*29. ಜಾಲಿ ಹೂಗಳ ನಡುವೆ	ಬಿ. ಪೀರ್ ಬಾಷ	45/-
*30. ಮರಾಠಿ ದಲಿತ ಕಾವ್ಯ	ಡಾ. ಸರಜೂ ಕಾಟ್ಕರ್	75/-
*31. ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು	ಪ್ರೊ. ಅಲ್ಲಮಪ್ರಭು ಬೆಟ್ಟದೂರು	35/-
*32. ಗಾಂಧೀಗಿಡ	ಸತೀಶ್ ಕುಲಕರ್ಣಿ	35/-
*33. ಕಣ್ಣಮುಂದಿನ ಬೆಳಕು	ದಸ್ತಗೀರ್‌ಸಾಬ್ ದಿನ್ನಿ	35/-
34. ಸಿಸಿಫಸ್‌ರ ಸುತ್ತು	ಡಾ. ಬಸರಾಜ ಸಾದರ	50/-
*35. ಕದವಿಲ್ಲದ ಊರಲ್ಲಿ	ಜಿ. ಕೆ. ರವೀಂದ್ರಕುಮಾರ್	75/-
36. ಅವ್ವ	ಡಾ. ಸರಜೂ ಕಾಟ್ಕರ್	60/-
37. ಕಣ್ಮುಚ್ಚಿ ಕಂಡವರು	ಶಂಕರ ಪಾಟೀಲ	35/-
38. ಸುನೀತ ಸಂಪದ	ಚೆನ್ನವೀರ ಕಣವಿ	100/-
39. ಮಳೆಯೇ ಮಂಟಪ	ಎಚ್. ಎಸ್. ಶಿವಪ್ರಕಾಶ್	50/-
40. ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು	ಡಾ. ಸರಜೂ ಕಾಟ್ಕರ್	30/-
41. ಈ ಮಣ್ಣು ಅಪ್ಪಿಕೊಳ್ಳುವ ಮುನ್ನ...	ಗವಿಸಿದ್ಧ ಎನ್. ಬಳ್ಳಾರಿ	75/-
42. ಮಗುಮಲಗಿದೆ ಎದೆಯಮೇಲೆ	ಎಂ. ಡಿ. ಒಕ್ಕುಂದ	35/-
43. ಚಿತ್ತಾರ	ಡಾ. ಸಬಿಹಾ ಭೂಮಿಗೌಡ	40/-
44. ಬಾಗಿಲಾಚೆಯ ಮೌನ	ರೂಪ ಹಾಸನ	50/-
45. ಕಂಪನಿ ಸವಾಲ್	ಸತೀಶ ಕುಲಕರ್ಣಿ	50/-
46. ನೂರು ಗೋರಿಯ ದೀಪ	ಡಾ. ವಿನಯಾ	35/-
47. ಉರಿವ ಒಲೆಗಳ ಮುಂದೆ	ಆರ್. ನಿರ್ಮಲ	25/-
48. ಗಾಂಧೀ ಟು ಗೋದ್ರಾ	ಡಾ. ಸರಜೂ ಕಾಟ್ಕರ್	35/-

ಕಾದಂಬರಿ

*49. ಮೂಂಡೋವಿ	ರವಿ ಬೆಳಗೆರೆ	60/-
*50. ಶಾಮಣ್ಣ	ಕುಂ. ವೀರಭದ್ರಪ್ಪ	175/-
*51. ಗಾಂಧಿಬಂದ	ಎಚ್. ನಾಗವೇಣಿ	130/-
52. ಬದುಕು	ಗೀತಾ ನಾಗಭೂಷಣ	200/-
*53. ಹುತ್ತ	ಬಾಳಾಸಾಹೇಬ ಲೋಕಾಪುರ	75/-
54. ಲೋಟಸ್ ಪಾಂಡ್	ತಾರಾಭಟ್	50/-
55. ಬಾತ್ರಿ ನಿಂಬಿಷ್ಮ	ಬ್ರಹ್ಮದೇವ್ ಹದಳಗಿ	30/-
56. ರಂಗನೋ ಮಲೆ ಮಂಗನೋ!	ಮುಹಮ್ಮದ್ ಕುಳಾಯಿ	30//-

57.	ಕೆರೂರುಸಾಮಾ	ಚಂದ್ರಕಾಂತ ಕುಸನೂರ	60/-
58.	ಅತಂತ್ರ	ಗುರುರಾಜ ಮಾರ್ಪಳ್ಳಿ	80/-

ಪ್ರವಾಸ ಕಥನ

59.	ನನ್ನೊಳಗಿನ ಹಾಡು ಕ್ಯೂಬಾ	ಜಿ.ಎನ್. ಮೋಹನ್	80/-
60.	ಪಂಚಮುಖಿ ಪಂಜಾಬ್	ಜಿ.ಪಿ. ಬಸವರಾಜ್	60/-
*61.	ನಾ ಕಂಡ ಬ್ರಿಝಿಲ್	ಡಾ. ಸಿ. ನಾಗಭೂಷಣ	60/-
62.	ಥೇಮ್ಸ್‌ನಿಂದ ಟೈಬರ್‌ವರೆಗೆ	ವೆಂಕಟೇಶ ಮಾಚಕನೂರ	40/-
63.	ಆಗ್ನೇಯದಂಗಳದಲ್ಲಿ	ವೆಂಕಟೇಶ ಮಾಚಕನೂರ	60/-
64.	ಕುಲು ಕಣಿವೆಯಲ್ಲಿ	ಬಿ. ಪಿ ಬಸವರಾಜು	60/-

ವೈಚಾರಿಕ ಮತ್ತು ಇತರೆ

65.	ಲೋಹಿಯಾ	ಹಸನ್‌ನಯೀಂ ಸುರಕೋಡ	120/-
*66.	ಸರಳಸಿದ್ಧರಾಮ ದರ್ಶನ	ಡಾ. ಎಲ್. ಬಸವರಾಜು	60/-
*67.	ಶ್ರೀ ಮಧುರ ಚನ್ನರ ಸ್ಮೃತಿಗಳು	ಡಾ. ಸಿಂಪಿ ಲಿಂಗಣ್ಣ	60/-
68.	ಕಾಡು ಮತ್ತು ತೋಪು	ಪಿ. ಚಂದ್ರಶೇಖರ ನಂಗಲಿ	90/-
*69.	ಅಮೃತ ಮತ್ತು ವಿಷ	ರಂಜಾನ್ ದರ್ಗಾ	75/-
*70.	ಶತಮಾನ	ಮೊಗಳ್ಳಿ ಗಣೇಶ	50/-
*71.	ಅಣುವೆಂಬ ಸದ್ದಿಲ್ಲದ ಸಾವ ಕುರಿತು	ಎನ್. ಜಗದೀಶ ಕೊಪ್ಪ	25/-
72.	ನಿರ್‌ಬೀಜೀಕರಣದ ವಿರಾಟ್ ಸ್ವರೂಪ	ವಿ. ಚಂದ್ರಶೇಖರ ನಂಗಲಿ	12/-
73.	ಬುದ್ಧ ಚರಿತೆ	ಡಾ. ಎಲ್. ಬಸವರಾಜು	180/-
74.	ಸೌಂದರನಂದ	ಡಾ. ಎಲ್. ಬಸವರಾಜು	150/-
75.	ನೀರದೀವಿಗೆ	ಡಾ. ಕೆ. ವೈ. ನಾರಾಯಣಸ್ವಾಮಿ	100/-
*76.	ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ	ಜಸ್ವೀರ್ ಸಿಂಗ್	15/-
77.	ಅಲ್ಲಮನ ವಚನಚಂದ್ರಿಕೆ	ಡಾ. ಡಲ್. ಬಸವರಾಜು	250/-
*78.	ಸೂಳೆ ಸಂಕವ್ವೆ (ನಾಟಕ)	ಮುದೇನೂರ ಸಂಗಣ್ಣ	80/-
79.	ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯಪೋಳ	75/-
*80.	ನಾ ನಿಮ್ಮೊಳಗು	ಪ್ರೊ. ವಿ. ಚಂದ್ರಶೇಖರ ನಂಗಲಿ	100/-
*81.	ಬಗೆ	ಡಾ. ಸಬಿಹಾ ಭೂಮಿಗೌಡ	60/-
*82.	ಹಣತೆ : ಜಿ.ಎಸ್.ಎಸ್. ಅಭಿನಂದನ ಗ್ರಂಥ		300/-
83.	ಎಸ್. ನಿಜಲಿಂಗಪ್ಪ : ಒಂದು ಅಧ್ಯಯನ	ಕೋ. ಚನ್ನಬಸಪ್ಪ	125/-
84.	ಬಸವಪ್ರಜ್ಞೆ	ರಂಜಾನ್ ದರ್ಗಾ	15/-
85.	ಹುತಾತ್ಮ ಭಗತ್‌ಸಿಂಗ್	ಜಿ.ಪಿ. ಬಸವರಾಜು	60/-
86.	ಗುಣಗೌರವ	ಬಿ.ಎಚ್. ನಾಯಕ	75/-
*87.	ಜೀವನಸಂಧ್ಯಾ	ಡಾ. ಕೃಷ್ಣಮೂರ್ತಿ ಕಿತ್ತೂರ	75/-
*88.	ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ	ಡಾ. ಜೆ. ಎಂ. ನಾಗಯ್ಯ	100/-
*89.	ನೊಂದವರ ನೋವು	ಮೂಡ್ನಾಕೋಡು ಚಿನ್ನಸ್ವಾಮಿ	60/-
90.	ಸಾಕ್ಷಿ	ಡಾ. ಸರಜೂ ಕಾಟ್ಕರ್	50/-
91.	ಸಲ್ಲಲಿತ ಸನ್ಮಾರ್ಗ	ಚನ್ನಬಸವಪ್ಪ ಬೆಟ್ಟದೂರು	30/-
92.	ಪ್ರೇಮಲೋಕದ ಮಾಯಾವಿ	ಹಸನ್ ನಯೀಂ ಸುರಕೋಡ	45/-
*93.	ಶರಣ ಬಂಢಾಯ	ಡಾ. ಸರಜೂ ಕಾಟ್ಕರ್	50/-
94.	ಜಯಪ್ರಕಾಶ್ ನಾರಾಯಣ	ಡಿ. ಎಸ್. ನಾಗಭೂಷಣ	100/-
95.	ಬೆಳಗಿನ ಬೆರಗು	ಜಿ. ಎನ್. ಮಲ್ಲಿಕಾರ್ಜುನ	75/-
96.	ರಸೀದಿ ತಿಕೀಟು	ಹಸೀನ್‌ನಯೀಂ ಸುರಕೋಡ	100/-
97.	ನಡುಹಗಲಿನಲ್ಲಿ ಕಂದೀಲುಗಳು	ಡಾ. ರಾಜೇಂದ್ರ ಚೆನ್ನಿ	125/-
98.	ಕುವೆಂಪು–ಒಂದು ಪುರನ್ವೇಷಣೆ	ಡಾ. ಎಸ್. ನಾಗಭೂಷಣ	150/-
99.	ಬಸವಣ್ಣನವರ ದೇವರು	ರಂಜಾನ್ ದರ್ಗಾ	15/-
100.	ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು	ಹಸನ್ ನಯೀಂ ಸುರಕೋಡ	20/-
101.	ನಮ್ಮೊಡನೆ ನಮ್ಮ ನುಡಿ	ಡಾ. ಕೆ.ವಿ. ನಾರಾಯಣ	50/-
102.	ಅನೇಕ	ಡಿ.ಎಸ್. ನಾಗಭೂಷಣ	125/-
*103.	ಖರೇ ಖರೇ ಸಂಗ್ಯಾ–ಬಾಳ್ಯಾ	ಡಾ. ಎಂ.ಎಂ. ಕಲಬುರ್ಗಿ	30/-
104.	ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	75/-
105.	ಅಯೋಧ್ಯೆ–ವಿನಾಶಕಾರಿ ವೋಟ್ ಬ್ಯಾಂಕ್ ರಾಜಕೀಯ	ಹಸನ್ ನಯೀಂ ಸುರಕೋಡ	25/-
106.	ಮನೆಯೊಡೆಯನಿದ್ದಾನೋ	ಎಸ್. ಜಿ. ಮೈಸೂರು ಮಠ	150/-
107.	ಲಿಂಗವ ಪೂಜಿಸಿ ಫಲವೇನಯ್ಯಾ?	ರಂಜಾನ್ ದರ್ಗಾ	25/-
108.	ಅರಿವಿನೆಡೆ	ಡಾ. ಕವಿತಾ ರೈ	50/-
109.	ಬದುಕಿಗಾಗಿ ಶಿಕ್ಷಣ	ಅರವಿಂದ ಚೊಕ್ಕಾಡಿ	40/-
110.	ಕರ್ನಾಟಕ ಏಕೀಕರಣ	ಕೋ. ಚನ್ನಬಸಪ್ಪ	60/-
111.	ಮರಳಿ ಬರಲಿದೆ ಸಮಾಜವಾದ	ಡಿ.ಎಸ್. ನಾಗಭೂಷಣ	60/-
112.	ಬಸವಧರ್ಮದ ವಿಶ್ವಸಂದೇಶ	ರಂಜಾನ್ ದರ್ಗಾ	15/-



ಇಷ್ಟಲಿಂಗಾಷ್ಟಕ



ನಿತ್ಯನೂತನ ಸತ್ಯಚೇತನ
ಇಷ್ಟಲಿಂಗವೆ ಶರಣು.

ಬಸವ ಗುರುವಿನ ನಮ್ಮ ಅರಿವಿನ
ಮೂಲಲಿಂಗವೆ ಶರಣು.

ಕೋಟಿದೇವರುಗಳಿಲ್ಲ ಎನ್ನುವ
ಏಕಲಿಂಗವೆ ಶರಣು.

ಆತ್ಮಲೋಕದ ಪ್ರೇಮತತ್ತ್ವದ
ನಿಜದ ಲಿಂಗವೆ ಶರಣು.

ದುಷ್ಟಶಕ್ತಿಗೂ ದಾರಿ ತೋರುವ
ಶಾಂತಲಿಂಗವೆ ಶರಣು.

ಸರ್ವಸಮತ್ವದ ಸತ್ಯ ಸಾರುವ
ಕ್ರಾಂತಿಲಿಂಗವೆ ಶರಣು.

ಜಗದ ಜನರನು ಒಂದು ಮಾಡುವ
ಬಸವಲಿಂಗವೆ ಶರಣು.

ಮರ್ತ್ಯಲೋಕವ ನಾಕ ಮಾಡುವ
ಬಯಲಲಿಂಗವೆ ಶರಣು.

– ರಂಜಾನ್ ದರ್ಗಾ

ಲೋಹಿಯಾ ಪ್ರಕಾಶನ, ಬಳ್ಳಾರಿ ರೂ. 15/-

ISBN 81-87731-90-7